
ಸಂಪುಟ 23 ಸಂಚಿಕೆ 13-14
ಏಪ್ರಿಲ್ 8, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾಗರಗ



ಪಶ್ಚಿಮ ಬಂಗಾಳ:
ಎಡರಂಗದ ವಿರುದ್ಧ
ಹಿಂಸಾಚಾರದ ರಾಜಕೀಯ



ಕರ್ನಾಟಕ ಬಜೆಟ್
ಸೋಗಿನ ಸರಕು



ಇನ್ನು ಭಾರತಕ್ಕೆ ವಿದೇಶಿ ವಸ್ತುಗಳ ಮಹಾಪೂರ



ಸಿನಿಮಾ ಪ್ರಶಸ್ತಿಗಳ ಖಾಸಗೀಕರಣ

ಸಿಪಿಐ(ಎಂ) ನೀಡಿದ ಹೇಳಿಕೆ ಹೀಗಿತ್ತು.

"ಪಶ್ಚಿಮ ಬಂಗಾಳದ ಜನರು ಈಗ ಇನ್ನೂ ಕಠಿಣ ಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಚುನಾವಣೆ ರಾಜಕೀಯದ ಕನಿಷ್ಠ ನಿಯಮಗಳನ್ನಾದರೂ ಪಾಲಿಸಲಾಗುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ಆದರೆ ಕಾಂಗ್ರೆಸ್ ಪಕ್ಷ ತನ್ನ ಖಚಿತವಾದ ಸೋಲನ್ನು ಬಲವಂತದ ಗೆಲುವನ್ನಾಗಿ ಪರಿವರ್ತಿಸಿಕೊಳ್ಳುವ ಹತಾಶೆಯಿಂದ ಈಗ ಪ್ರಜಾಪ್ರಭುತ್ವವನ್ನೇ ನಾಶ ಮಾಡಿದೆ.

.......ಆದರೆ ಇಂಥ ಭಯೋತ್ಪಾದನೆಯನ್ನು ನಿರಂತರವಾಗಿ ಮುಂದುವರಿಸಲಾಗದು. ಹಾಗೂ ಅದುವೇ ಅಂತಿಮ ತ್ಯಾಗ ಅನ್ನುವುದಾದರೆ ಇಂಥ ತಂತ್ರದ ವಿರುದ್ಧ ಜನರು ಸಿಡಿದೇಳುತ್ತಾರೆ ಎನ್ನುವುದನ್ನು ಜನತೆಯ ವೈರಿಗಳು ತಿಳಿಯಬೇಕು. ಅಲ್ಪಸಂಖ್ಯಾತ ಸಮುದಾಯದ ಒಳಗಡೆ ಸಮಸ್ಯೆಯನ್ನು ಸೃಷ್ಟಿಸಲು ಇನ್ನೊಂದು ದೊಡ್ಡ ಪ್ರಯತ್ನ ನಡೆದಿದೆ. ಅಪಪ್ರಚಾರವನ್ನು ಮಾಡಲಾಗುತ್ತಿದೆ. ಹೇಮಂತ ಬೋಸರ ಕೊಲೆ ನಮ್ಮ ಕೈವಾಡ ಎಂದು ಪ್ರಚಾರ ಮಾಡಲಾಯಿತು. ಇಂಥ ಪ್ರಚಾರವನ್ನು ಇನ್ನಷ್ಟು ದೊಡ್ಡ ರೀತಿಯಲ್ಲಿ ಮಾಡುವ ಸಂಭವವಿದೆ. ಈ ರಾಜ್ಯದಲ್ಲಿ ಫ್ಯಾಸಿಸ್ಟ್ ಆಡಳಿತವನ್ನು ತರುವುದೇ ಈ ಎಲ್ಲವುಗಳ ಉದ್ದೇಶವಾಗಿದೆ.

ಗೆಳೆಯರೇ, ಈಗ ನಾವು ನಿಮ್ಮ ಮೌನ ವೈರವನ್ನು ಕೋಪೋದ್ರಿಕ್ತ ಪ್ರತಿಭಟನೆಯನ್ನಾಗಿ ಪರಿವರ್ತಿಸಬೇಕು. ನೀವು ನಿಮ್ಮ ಶಕ್ತಿಗಳನ್ನು ಗುರುತಿಸಬೇಕಾಗಿದೆ. ಈ ಶತ್ರುಗಳಿಗೆ ಶರಣಾಗಬೇಡಿ. ಶಾಂತವಾಗಿ ತಾರ್ಕಿಕವಾಗಿ ಯೋಚಿಸಿ, ಇದು ಬಹಳ ಕಷ್ಟದ ಕೆಲಸ ಎಂದು ನಮಗೆ ಗೊತ್ತು. ಅಪಾಯ ಎಷ್ಟೇ ಗಹನವಾದುದಾದರೂ ನಮ್ಮ ಪಕ್ಷ ಪಶ್ಚಿಮ ಬಂಗಾಳದ ಜನರ ಜತೆಗಿದೆ ಎಂಬುದನ್ನು ದಯವಿಟ್ಟು ನೆನಪಿಟ್ಟುಕೊಳ್ಳಿ. ಎಲ್ಲ ನೈಜ ಎಡಪಕ್ಷಗಳ ವಿರುದ್ಧ ಧಾಳಿ ನಡೆಯುತ್ತಿದ್ದರೂ ವಾಸ್ತವವಾಗಿ ಆಕ್ರಮಣವು ಸಿಪಿಐ(ಎಂ) ಮೇಲೆ ಕೇಂದ್ರೀಕೃತವಾಗಿದೆ. ನಮ್ಮ ಸತ್ವವೇ ವಿಭಿನ್ನವಾದುದು. ನಾವು ಪ್ರತಿಜ್ಞೆ ಮಾಡಿದ ಗುರಿಯಿಂದ ನಮ್ಮನ್ನು ವಿಚಲಿತರನ್ನಾಗಿ ಮಾಡಲು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 62

ಯಾರಿಗೂ ಸಾಧ್ಯಾವಾಗಿಲ್ಲ. ಎಂದೆಂದೂ ಸಾಧ್ಯವಾಗುವುದೂ ಇಲ್ಲ. ಈ ಚುನಾವಣೆ ಅಸಿಂಧು ಎಂದು ಘೋಷಿಸಲು ನಾವು ಒತ್ತಾಯಿಸುತ್ತೇವೆ. ಜನರ ಮೇಲಿನ ಫ್ಯಾಸಿಸ್ಟ್ ಧಾಳಿಯನ್ನು ನಿಲ್ಲಿಸುವಂತೆಯೂ ಆಗ್ರಹಿಸುತ್ತೇವೆ. ಹಾಗೂ ನಮ್ಮ ಶತ್ರುಗಳ ವಿರುದ್ಧ ಒಗ್ಗಟ್ಟಿನಿಂದ ಇರಬೇಕೆಂದು ಜನರಿಗೆ ಮನವಿ ಮಾಡುತ್ತೇವೆ"

ಪತ್ರಿಕೆಗಳ ಬಾಯಲ್ಲಿ ಅವಲಕ್ಕಿ!

ಈ ಚುನಾವಣೆಗೆ ಸಂಬಂಧಿಸಿ ಇನ್ನೊಂದು ಆಸಕ್ತಿದಾಯಕ ಅಂಶವೂ ಇದೆ. ಚುನಾವಣೆ ಎಂಬ ಪ.ಬಂಗಾಳದ ಈ ಅಣಕದ ಬಗ್ಗೆ ದೇಶದೆಲ್ಲೆಡೆಯ ಬಂಡವಾಳಶಾಹಿ ಪತ್ರಿಕೆಗಳು ಏನನ್ನೂ ಬರೆಯಲಿಲ್ಲ. ಬಾಯಲ್ಲಿ ಅವಲಕ್ಕಿ ತುಂಬಿಸಿಕೊಂಡವರ ರೀತಿ ಇದ್ದವು. 'ಇಕಾನಾಮಿಕ್ ಟೈಮ್ಸ್' ನಲ್ಲಿ ಮಾತ್ರವೇ 'ಗೂಂಡಾಗಳಿಂದ ಮತಗಟ್ಟೆಗಳ ವಶ' ಎಂಬ ಶೀರ್ಷಿಕೆಯ ವರದಿಯೊಂದು ಪ್ರಕಟವಾಯಿತು. ಅದು ಪ್ರಕಟವಾದ ನಂತರ ಆ ವರದಿಗಾರರನ್ನು ಬೇರೆ ಕಡೆ ವರ್ಗ ಮಾಡಲಾಯಿತು!. ಇದು ನಮ್ಮ ದೇಶದ ಪತ್ರಿಕಾಧರ್ಮ! ಆದರೆ ಇತಿಹಾಸ ಈ ದ್ರೋಹಿಗಳನ್ನು ಕ್ಷಮಿಸಲಿಲ್ಲ. ಈ ನೆಲದ ಜನರು ಮತ್ತು ರಾಜಕೀಯ ಕೂಡ ಬೆಲೆ ತೆರಬೇಕಾಯಿತು. ಪಶ್ಚಿಮ ಬಂಗಾಳದಲ್ಲಿನ ಯಶಸ್ಸು ಇಂದಿರಾಗಾಂಧಿಯ ಸರ್ವಾಧಿಕಾರಿ ಧೋರಣೆಗೆ ನೀರೆರೆಯಿತು ಎನ್ನುವುದು ವಾಸ್ತವ ಸಂಗತಿ. ಕೇವಲ ಮೂರೇ ವರ್ಷಗಳಲ್ಲಿ ಅವರು ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು

ಮತ್ತೆ ಹಸಿವಿನ ಹಾಹಾಕಾರ

ಕಳೆದ ಸಂಚಿಕೆಯಲ್ಲಿ ಬಂದೂಕಿನ ನಳಿಕೆ ತೋರಿಸಿ ತಮ್ಮ ಕೆಲಸ ಸಾಧಿಸಿಕೊಂಡ ಪ್ರಜಾಪ್ರಭುತ್ವದ ಕೊಲೆಗಡುಕರು, ಕಾಂಗ್ರೆಸ್-ಸಿಪಿಐ ಕೂಟದ ಚುನಾವಣೆ ಪ್ರಹಸನ. ಪಿತೂರಿ ಬಿಚ್ಚಿಟ್ಟ ಕಾಂಗ್ರೆ ಕಾರ್ಯಕರ್ತನ ಪತ್ರ, ಕೇಂದ್ರ ಮಂತ್ರಿ ಎಸ್.ಎಸ್.ರಾಯ್ ಕುತಂತ್ರ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಕಾಂಗ್ರೆ ತನ್ನ ಖಚಿತವಾದ ಸೋಲನ್ನು ಬಲವಂತದ ಗೆಲುವಾಗಿ ಪರಿವರ್ತಿಸುವ ಯತ್ನ, ಬಂಡವಾಳಶಾಹಿ ಪತ್ರಿಕೆಗಳು ಬಾಯಲ್ಲಿ ಅವಲಕ್ಕಿ ಇಟ್ಟುಕೊಂಡ ಬಗೆ, ಜಯಪ್ರಕಾಶ್ ನಾರಾಯಣರಿಂದ ಕಲ್ಕತ್ತ ಭೇಟಿ ಹಾಗೂ ಕಳವಳ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯದಿಂದ ಮತ್ತದೇ ಹಸಿವಿನ ಹಾಹಾಕಾರ, ಎಲ್ಲಾ ಚುನಾಯಿತ ಸಂಸ್ಥೆಗಳ ವಿಸರ್ಜನೆ ಮತ್ತು ಟ್ರೇಡ್ ಯೂನಿಯನ್ ಕಛೇರಿ ನಾಶ ಹಾಗೂ ಕಾರ್ಯಕರ್ತರ ಮೇಲೆ ಧಾಳಿ... ಈ ಬಗ್ಗೆ ಓದಿ

ಹೇರಿದರೆನ್ನುವುದು ಇದನ್ನು ಪುಷ್ಟೀಕರಿಸುತ್ತದೆ. ಆದರೆ ಜನರು ಇತಿಹಾಸದ ಆ ಕೃತ್ಯದಿಂದ ನಿಜವಾಗಿಯೂ ಪಾಠ ಕಲಿತಿದ್ದಾರೆಯೇ?

ಜೆಪಿ ಭೇಟಿ

ಚುನಾವಣೆಯ ಕೆಲವು ದಿನಗಳ ನಂತರ ನಾನು ಕಲ್ಕತ್ತದಲ್ಲಿ ಜಯಪ್ರಕಾಶ ನಾರಾಯಣರನ್ನು ಭೇಟಿಯಾದೆ. ಅವರಿಗೆ ಕಲ್ಕತ್ತದಲ್ಲಿ ಸಾಕಷ್ಟು ಗೆಳೆಯರು ಹಾಗೂ ಸಂಬಂಧಿಕರು ಇದ್ದರು. ಚುನಾವಣೆಯ ಅಕ್ರಮಗಳ ವಿಷಯವನ್ನು ತಿಳಿಸಿದಾಗ ಅವರು ಬಹಳ ಕಳವಳಗೊಂಡರು. ಅವರು ತಾವಾಗಿಯೇ ನಮ್ಮ ಭೇಟಿಗೆ ಬಂದರು. ನನಗೆ ಅವರೊಂದಿಗೆ ವೈಯಕ್ತಿಕ ಸಂಪರ್ಕ ಇತ್ತು. ಚುನಾವಣೆ ಅಕ್ರಮದ ತನಿಖೆ ನಡೆಸಲು ನಾವು ಒಂದು ಆಯೋಗವನ್ನು ರಚಿಸಬೇಕೆಂದು ಜೆ.ಪಿ. ಸಲಹೆ ಮಾಡಿದರು. ಇದೊಂದು ಒಳ್ಳೆಯ ಯೋಚನೆ ಎಂದು ನಾವು ಹೇಳಿದೆವು. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ವಿರುದ್ಧ ಎಲ್ಲ ಪುರಾವೆಗಳನ್ನು ಒದಗಿಸುವುದಾಗಿಯೂ ತಿಳಿಸಿದೆವು.

ಇಂಥ ಆಯೋಗವನ್ನು ರಚಿಸಲು ಬಿಡುವುದಿಲ್ಲ ಎಂದು ಸಿದ್ಧಾರ್ಥ ಶಂಕರ ರಾಯ್ ಗುಡುಗಿದರು. ಇದು ನಿರೀಕ್ಷಿತವೇ. ನೀವು ಮುಂದುವರಿಯಬಹುದು ಎಂದು ನಾನು ಜೆ.ಪಿ.ಗೆ ಹೇಳಿದೆ. ಆದರೆ ಅದರ ಕಾರ್ಯನಿರ್ವಹಣೆಗೆ ರಾಜ್ಯ ಸರ್ಕಾರ ಅವಕಾಶ ನೀಡದ್ದರಿಂದ ಅವರು ವಿಫಲರಾದರು.

ಹಸಿವಿನ ಹಾಹಾಕಾರ

ಹಳ್ಳಿ ಹಳ್ಳಿಗಳು ಹಸಿವಿನಿಂದ ನರಳುತ್ತಿದ್ದವು. ಹಸಿವಿನ ಸಾವುಗಳು ದಿನನಿತ್ಯದ ಪ್ರಕರಣಗಳಾಗಿದ್ದವು. ಭೂಸುಧಾರಣೆ ನೀಶಕ್ತಿತವಾಗಿತ್ತು. ಬೆಲೆಗಳು ಗಗನಮುಖಿಯಾಗಿದ್ದವು. ಅದನ್ನು ತಡೆಯಲು ರಾಜ್ಯ ಸರ್ಕಾರ ಯಾವುದೇ ನಿರ್ದಿಷ್ಟ ಕ್ರಮಕ್ಕೆ ಮುಂದಾಗಲಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದದ್ದರಿಂದ ರಾಜ್ಯ ಸರ್ಕಾರ ಕೇಂದ್ರದ ವಿರುದ್ಧ ಏನನ್ನೂ ಹೇಳುವಂತಿರಲಿಲ್ಲ. ಚುನಾವಣೆ ವೇಳೆ ಕಾಂಗ್ರೆಸ್ಸಿನ ಕುಕೃತ್ಯಗಳನ್ನು ಬೆಂಬಲಿಸುವ ನಾಚಿಕೆಗೇಡಿನ ಪಾತ್ರ ವಹಿಸಿದ್ದ ಬಂಡವಾಳಶಾಹಿ ಪತ್ರಿಕೆಗಳು ಕೂಡ ಈ ಸಂದರ್ಭದಲ್ಲಿ ಹೆಚ್ಚು ಹೊತ್ತು ಮೌನ ತಾಳುವ ಸ್ಥಿತಿಯಲ್ಲಿರಲಿಲ್ಲ.

ಹಸಿವಿನಿಂದ ಸತ್ತವರ, ಬೀದಿಯಲ್ಲಿ ಬಿದ್ದ ಹೆಣಗಳು ಪತ್ರಿಕೆಗಳ ಮುಖಪುಟಗಳಲ್ಲಿ ಪ್ರಕಟವಾದವು. ಜನರು ಸಿಕ್ಕ ಸಿಕ್ಕದ್ದನ್ನು ತಿಂದ ಫಲವಾಗಿ ಕಾಡಿದ ಅಪರೂಪದ ನಿಗೂಢ ರೋಗಗಳ ವರದಿಗಳು ಕೂಡ ಬೆಳಕು ಕಂಡವು. ಕಲ್ಕತ್ತದ ಬೀದಿಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಭಿಕ್ಷಾಪಾತ್ರೆಗಳು ಪ್ರತ್ಯಕ್ಷವಾದವು. ನಮ್ಮ ಅರ್ಜಿಗಳು ಮತ್ತು ಮನವಿಗಳಿಗೆ ರಾಜ್ಯ ಸರ್ಕಾರ ಕ್ಯಾರೇ ಅನ್ನಲಿಲ್ಲ.

1973 ಅಕ್ಟೋಬರ್ 10 ರಂದು ಪ್ರಮೋದ್ ದಾಸ್ ಗುಪ್ತ ಮುಖ್ಯಮಂತ್ರಿಗೆ ಒಂದು ಪತ್ರ ಬರೆದು ಆಹಾರ ಬಿಕ್ಕಟ್ಟಿನ ಕಾರಣಗಳನ್ನು ವಿವರಿಸಿದರು. ಇಂಥ ಪೂರ್ವೋದಾಹರಣೆ ಎಂದೆಂದೂ ಇರಲಿಲ್ಲ. ಬಿಕ್ಕಟ್ಟು ಇಷ್ಟೊಂದು ಬಿಗಡಾಯಿಸಲು ಸರ್ಕಾರದ ನಿರ್ಲಕ್ಷ್ಯವೇ ಹೊಣೆ ಎಂದು ಅವರು ಹೇಳಿದರು.

"ಕಡಿತ ಮಾಡಿರುವ ಪಡಿತರ ಕೋಟಾವನ್ನು ಪುನರಾರಂಭಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಎಂಆರ್ ಎಸ್ ಪಿ ಮೂಲಕ ಆಹಾರಧಾನ್ಯ ವಿತರಣೆಯನ್ನು ಖಾತರಿಪಡಿಸಬೇಕು. ಗ್ರಾಮೀಣ ಜನಸಂಖ್ಯೆಯ ಕನಿಷ್ಠ ಶೇಕಡ 20 ಜನರನ್ನು ಜಿ.ಆರ್.ಎ. ವ್ಯಾಪ್ತಿಗೆ ತರಬೇಕು. ಹರಳೆಣ್ಣೆ, ಸೀಮೆ ಎಣ್ಣೆ, ಕಲ್ಲಿದ್ದಲು, ಸಕ್ಕರೆ, ಬಟ್ಟೆ ಮತ್ತು ಬೇಳೆ ಮೊದಲಾದ ವಸ್ತುಗಳನ್ನು 1969 ರಲ್ಲಿ ಬೆಲೆಗಳಿಗೆ ಮಾರಾಟ ಮಾಡಬೇಕು" ಎಂದು ಪ್ರಮೋದ್ ದಾಸ್ ಗುಪ್ತ ಪತ್ರದಲ್ಲಿ ಒತ್ತಾಯಿಸಿದರು.

ಸಂಸತ್ತಿನಲ್ಲಿ ಸಿಪಿಐ(ಎಂ)ನ ಉಪನಾಯಕರಾಗಿದ್ದ ಸಮರ ಮುಖರ್ಜಿ ದೆಹಲಿಯಲ್ಲಿ ಪ್ರಧಾನಿಯನ್ನು ಭೇಟಿಯಾದರು. ಆದರೆ ಸರಕಾರದ ನೀತಿಗಳಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಆಗಲಿಲ್ಲ. ಜನರ ಸಂಕಷ್ಟ ಹಾಗೆ ಮುಂದುವರಿಯಿತು.

ಮುಂದುವರಿದ ದುರಾಕ್ರಮಣ

ಮುಖ್ಯಮಂತ್ರಿ ರಾಯ್ ತನ್ನ ಮೊದಲ ಕೆಲವು ನೀತಿ ನಿರ್ಧಾರಗಳಲ್ಲೇ ಪ್ರಜಾಸತ್ತಾತ್ಮಕ ಮೌಲ್ಯಗಳ ಕತ್ತು ಹಿಸುಕುವ ಕೆಲಸ ಮಾಡಿದರು. ಕಲ್ಕತ್ತ ಮಹಾನಗರ ಪಾಲಿಕೆ ಸಹಿತ ಎಲ್ಲ ಚುನಾಯಿತ ಪುರಸಭೆಗಳನ್ನು ವಿಸರ್ಜಿಸಿದರು. ಭಯೋತ್ಪಾದನೆ ಆಡಳಿತವನ್ನು ಸಂಸ್ಥೀಕರಿಸಿದರು. ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರನ್ನು ಮನೆಯಿಂದ ಓಡಿಸಲಾಯಿತು. ತುರ್ತುಪರಿಸ್ಥಿತಿ ಘೋಷಣೆಯಾಗಿದೆಯೇನೋ ಎಂಬಂಥ ವಾತಾವರಣ ಇತ್ತು. ತಂತ್ರಗಳನ್ನು ಬದಲಾಯಿಸಲಾಗಿತ್ತು. ಆದರೆ ಅಂತಿಮ ಉದ್ದೇಶ ಒಂದೇ ಆಗಿತ್ತು. ನಾವು ಬಹಳಷ್ಟು ಕಷ್ಟ ಅನುಭವಿಸಿದೆವು. ಹಾಗೂ ಅದು ಮುಂದುವರಿಯಿತು. ಪ್ರತಿಪಕ್ಷವಾಗಿ ನಾವು ನಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸುವಂತೆ ಇರಲಿಲ್ಲ. ನಮ್ಮ ಮೇಲೆ ನಿಯಂತ್ರಣ ಸಾಧಿಸಲು 'ರಾ'(ಸಂಶೋಧನೆ ಮತ್ತು ವಿಶ್ಲೇಷಣೆ ವಿಭಾಗ - RAW) ದ ನೆರವನ್ನು ಸರಕಾರ ಪಡೆಯಿತು. ನಮ್ಮನ್ನು ಮುಗಿಸಲು ನಕ್ಸಲೀಯರು ಯಶಸ್ವಿ ಹಾಗೂ ಪರಿಣಾಮಕಾರಿ ಸಾಧನ ಅಲ್ಲ ಎಂದು ಕಾಂಗ್ರೆಸ್ ಆಡಳಿತಗಾರರು ಆ ವೇಳೆಗೆ ಮನಗಂಡಿದ್ದರು. ಹೀಗಾಗಿ ಅವರು ಕೂಡ ಭಯೋತ್ಪಾದನೆಯ ಬಲಿಪಶುವಾದರು.

ನಾವು ಆಗ ಉತ್ತಮ ಗೆಳೆಯರಲ್ಲವಾದರೂ ನಕ್ಸಲೀಯರ ಮೇಲಿನ ದಾಳಿಗಳನ್ನು ನಾವು ಪ್ರತಿಭಟಿಸಿದೆವು. ಇಡೀ ಆಡಳಿತ ಯಂತ್ರ ನಕ್ಸಲೀಯರು ಹಾಗೂ ನಮ್ಮ ವಿರುದ್ಧ ಸನ್ನದ್ಧಗೊಂಡಿತ್ತು.

ನನ್ನ ನೆನಪು ಎನ್ನುವುದಾದರೆ ಬರ್ಧಮಾನ್‌ನ ಪೋಲೀಸ್ ಸೂಪರಿಟೆಂಡೆಂಟ್ ಆಗಿದ್ದ ಪೋಲೀಸ್ ಅಧಿಕಾರಿ ಒಬ್ಬನೇ 250 ಎಡಪಂಥೀಯರ ಹತ್ಯೆಗಳ ಯೋಜನೆ ರೂಪಿಸಿ ಕಾರ್ಯಗತಗೊಳಿಸಿದ್ದ. ಈ ಯಾವುದೇ ಒಂದು ಪ್ರಕರಣದ ಬಗ್ಗೆಯೂ ತನಿಖೆ-ವಿಚಾರಣೆ ನಡೆಸಲಿಲ್ಲ. ಅದಕ್ಕೆ ಬದಲು ಈ ಅಧಿಕಾರಿಗೆ ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ದೆಹಲಿಯ ಒಂದು ಸಮಾರಂಭದಲ್ಲಿ ಪದಕ ನೀಡಿ ಸತ್ಕರಿಸಲಾಯಿತು! ಸಭೆಗಳನ್ನು ನಡೆಸುವುದು ಕೂಡ ಕಷ್ಟವಾಗುತ್ತಿತ್ತು. ಸಭೆಯೊಂದರಲ್ಲಿ ಭಾಗವಹಿಸಲು ನಾನು ಮಾಲ್ಡಾಕೆ ಹೋಗುತ್ತಿದ್ದೆ. ಕಾಂಗ್ರೆಸ್ ಗೂಂಡಾಗಳು ನಮ್ಮನ್ನು ತಡೆದರು. ಸಮಾಜ ವಿರೋಧಿಗಳ ಈ ಕೃತ್ಯವನ್ನು ನಿಲ್ಲಿಸಲು 'ನಾವು ಏನೂ ಮಾಡುವುದಿಲ್ಲ' ಎಂದು ಪೋಲೀಸರು ಸ್ಪಷ್ಟವಾಗಿ ಹೇಳಿದರು! ಮಾಲ್ಡಾದ ಆ ಸಭೆಯೇನೋ ಸುಗಮವಾಗಿ ನಡೆಯಿತು. ಆದರೆ ನಮ್ಮ ಮೇಲೆ ಅಪಾಯದ ಕತ್ತಿ ತೂಗುತ್ತಲೇ ಇತ್ತು. ಅದು ಮಾಮೂಲಿ ಆಗಿತ್ತು.

ಐಎಲ್‌ಓ ಕಳವಳ

ಕಾರ್ಮಿಕ ವರ್ಗವನ್ನು ಪೂರ್ಣವಾಗಿ ಅವಹೇಳನ ಮಾಡುವ ಈ ಪ್ರವೃತ್ತಿಯನ್ನು ಪ್ರತಿಭಟಿಸಲು ಜಿನೇವಾದಲ್ಲಿರುವ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ) ಗೆ ನಾವು ಸಮಗ್ರ ದಾಖಲೆಗಳನ್ನು ಒಳಗೊಂಡ ಒಂದು ದೂರನ್ನು ಕಳಿಸಿಕೊಟ್ಟೆವು.

1972 ರ ಆರಂಭದಲ್ಲಿ ಅಧಿಕಾರ ವಶಪಡಿಸಿಕೊಂಡಾಗಿನಿಂದ ಆ ವರ್ಷದ ಡಿಸೆಂಬರ್‌ವರೆಗೆ ಕಾಂಗ್ರೆಸ್ ಮತ್ತು ಅದರ ಗೂಂಡಾ ಪಡೆಗಳು 360 ಕ್ಕೂ ಹೆಚ್ಚು ಟ್ರೇಡ್ ಯೂನಿಯನ್ ಕಚೇರಿಗಳನ್ನು ಒಂದೋ ಸುಟ್ಟು ಹಾಕಿದರು. ಇಲ್ಲವೇ ಬಲಾತ್ಕಾರವಾಗಿ ವಶಪಡಿಸಿಕೊಂಡರು. ಈ ಸಂಖ್ಯೆ ಕಲ್ಕತ್ತ, ನಾಡಿಯಾ ಮತ್ತು ಬರ್ಧಮಾನ್ ಜಿಲ್ಲೆಗಳಿಗೆ ಮಾತ್ರ ಸಂಬಂಧಿಸಿದ್ದು. ಉತ್ತರ ಬಂಗಾಳದ ಚಹಾ ತೋಟಗಳು ಮತ್ತು ಹೌರಾ ಹಾಗೂ ಹೂಗ್ಲಿಯ ಕೈಗಾರಿಕಾ ಪ್ರದೇಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. 1970 ರ ಮಾರ್ಚ್ ನಿಂದ 1973 ರ ಮಾರ್ಚ್ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಎರಡನೇ ಸಂಯುಕ್ತ ರಂಗ ಸರ್ಕಾರವನ್ನು ಉರುಳಿಸಲಾಗಿತ್ತು. ಈ ಅವಧಿಯಲ್ಲಿ 785 ಕ್ಕೂ ಹೆಚ್ಚು ಟ್ರೇಡ್ ಯೂನಿಯನ್ ಮುಖಂಡರು ಮತ್ತು ಕಾರ್ಯಕರ್ತರ ಹತ್ಯೆಯಾಯಿತು.

(ಮುಂದುವರಿಯುವುದು)

ಓದುಗರ ಪತ್ರ

ಸಂಪಾದಕರೇ,

ಪತ್ರಿಕೆಯಲ್ಲಿ ಜ್ಯೋತಿಬಸುರವರ ರಾಜಕೀಯ ಆತ್ಮಕಥನ ತುಂಬಾ ಚೆನ್ನಾಗಿ ಬರುತ್ತಿದೆ. ಪತ್ರಿಕೆ ಸಿಗದೇ ಹೋದರೆ ನಡುವೆ ಕೊಂಡಿ ತಪ್ಪಿದಂತಾಗಿ ಚಡಪಡಿಕೆ ಮೂಡುತ್ತದೆ.

ತೃಷಾಂತ್
ಶ್ರೀರಾಂಪುರ-ಬೆಂಗಳೂರು.

* * *

ಸಮಾಜದ ಬೆನ್ನಲುಬಾಗಿರುವ ಕಾರ್ಮಿಕ ವರ್ಗದ ನೋವು ಸಂಕಟಗಳನ್ನು ಅಸಮಧಾನ ಆಕ್ರೋಶಗಳನ್ನು ವೈಶಿಷ್ಟ್ಯಪೂರ್ಣವಾಗಿ ಹೊರಗೆಡಹುತ್ತಿರುವ "ಐಕ್ಯರಂಗ"ಕ್ಕೆ ಮೈಸೂರು ಕಾರ್ಮಿಕರ ಪರವಾಗಿ ಅನಂತ ಧನ್ಯವಾದಗಳು.

ಪತ್ರಿಕೆಯಿಂದಾಗಿ ದುಡಿಯುವ ಕಾರ್ಮಿಕ ಚೈತನ್ಯಶೀಲನಾಗಲಿ. ಅವನ ಬತ್ತಿಹೋದ ಕಣ್ಣುಗಳಲ್ಲಿ ಭರವಸೆಯ ಹೊಳಪು ತುಂಬಲಿ

ಅನುಶ್ರೀ
ಮೈಸೂರು.

* * *

ನಾನು ತುಮಕೂರಿನಲ್ಲಿದ್ದಾಗ ಐಕ್ಯರಂಗ ಪತ್ರಿಕೆಯನ್ನು ಓದುತ್ತಿದ್ದೆ. ಈಗ ನಾನು ಹೋಟೇಲ್‌ನಲ್ಲಿ ಕೆಲಸಕ್ಕಾಗಿ ಮುಂಬಯಿನಲ್ಲಿದ್ದೇನೆ. ನನಗೆ ಐಕ್ಯಂರಂಗ ಪೇಪರ್ ಬಹಳ ಇಷ್ಟವಾಗಿದೆ. ಈಗಲೇ ಚಂದಾ ಕಳುಹಿಸುವೆ. ಪತ್ರಿಕೆ ಮಾತ್ರ ತಪ್ಪದೇ ಕಳಿಸಿ.

ಸುರೇಶ್
ಮುಂಬೈ

ತೆಹಲ್ಕಾ ಹಗರಣ - ಬೆಂಗಳೂರಿನಲ್ಲಿ ಪ್ರತಿಭಟನೆ

ಇತ್ತೀಚಿಗೆ ರಚನೆಗೊಂಡ 'ಪೀಪಲ್ಸ್ ಫ್ರಂಟ್' ಕರ್ನಾಟಕದಲ್ಲಿ ಇನ್ನೂ ಅಧಿಕೃತವಾಗಿ ಆರಂಭಗೊಳ್ಳದಿದ್ದರೂ ಮಾರ್ಚ್ 22 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ), ಸಿಪಿಐ, ಜನತಾದಳ (ಜಾತ್ಯಾತೀತ) ಪಕ್ಷಗಳು ಜಂಟಿಯಾಗಿ ತೆಹಲ್ಕಾ ಬಹಿರಂಗ ಗೊಳಿಸಿದ ರಕ್ಷಣಾ ಲಂಚ ಪ್ರಕರಣದ ಹಿನ್ನೆಲೆಯಲ್ಲಿ ಕೇಂದ್ರದ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ರಾಜಿನಾಮೆಗೆ ಒತ್ತಾಯಿಸಿ ನಡೆಸಿದ ಬೃಹತ್ ರ್‍ಯಾಲಿ ಮತ್ತು ಬಹಿರಂಗಸಭೆಯು ಕರ್ನಾಟಕದಲ್ಲಿ ಈ ಅವಧಿಯಲ್ಲಿ ಐಕ್ಯ ಚಳುವಳಿ ಬಲಗೊಳಿಸಲು ನಾಂದಿಯಾಯಿತು ಎನ್ನಬಹುದು.

ಸಭೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ), ಸಿಪಿಐ ಮತ್ತು ಜನತಾದಳ(ಜಾತ್ಯಾತೀತ) ಪಕ್ಷಗಳ ಮುಖಂಡರು, ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಕೆಳಗಿಳಿಸಲು ಮತ್ತು ಕಾಂಗ್ರೆಸ್-ಬಿಜೆಪಿಗೆ ಪರ್ಯಾಯವಾದ ಮೂರನೇ ರಂಗವನ್ನು ಬಲಪಡಿಸಲು ಕರೆ ನೀಡಿದರು.

ಬಹಿರಂಗ ಸಭೆಯಲ್ಲಿ ದೇವೇಗೌಡ, ಸಿದ್ದರಾಮಯ್ಯ, ಸೂರಿ ಮುಂತಾದವರು



ಬೆಂಗಳೂರಿನ ಬಸವೇಶ್ವರ ವೃತ್ತದಲ್ಲಿ ನೆರೆದಿದ್ದ ಸಾವಿರಾರು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಮಾಜಿ ಪ್ರಧಾನಮಂತ್ರಿ ಮತ್ತು ಜನತಾದಳ (ಜಾತ್ಯಾತೀತ) ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಹೆಚ್.ಡಿ.ದೇವೇಗೌಡರವರು ಮಾತನಾಡಿ - ಪ್ರಧಾನಮಂತ್ರಿ ಕಛೇರಿಯೇ ಲಂಚದ ಆರೋಪಕ್ಕೆ ಗುರಿಯಾಗಿದೆ. ಕೇವಲ ಮೂರ್‍ನಾಲ್ಕು ಅಧಿಕಾರಿಗಳ ವಿಚಾರಣೆ, ಸಚಿವರ ರಾಜಿನಾಮೆ ಪಡೆದರಷ್ಟೆ ಸಾಲದು ವಾಜಪೇಯಿ ನೇತೃತ್ವದ ಸರ್ಕಾರವೇ ನೈತಿಕ ಹೊಣೆ ಹೊತ್ತು ಅಧಿಕಾರದಿಂದ ಕೆಳಗಿಳಿಯಬೇಕೆಂದು ಆಗ್ರಹಪಡಿಸಿದರು.

ಇಷ್ಟೆಲ್ಲಾ ಆರೋಪಗಳಿದ್ದರೂ ತಮಗೆ ಸಂಖ್ಯಾಬಲವಿದೆ ಎಂಬ ಕಾರಣಕ್ಕೆ ಅಧಿಕಾರದಲ್ಲಿ ಮುಂದುವರಿಯುವುದು ಅಸಹ್ಯ ಹುಟ್ಟಿಸುವಂತದ್ದು. ಇಲ್ಲಿ ಸಂಖ್ಯಾಬಲ ಮುಖ್ಯವಲ್ಲ - ನೈತಿಕತೆ ಮುಖ್ಯ ಎಂದರು.

ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಕಾಂ. ಎಸ್.ಸೂರ್ಯನಾರಾಯಣ ರಾವ್ ತೆಹಲ್ಕಾ ಡಾಟ್ ಕಾಂ ರಕ್ಷಣಾ ಹಗರಣವನ್ನು ಬಯಲಿಗೆಳೆದಿದ್ದರ ಹಿಂದೆ, ವಿರೋಧ ಪಕ್ಷಗಳ ಕುತಂತ್ರವಿದೆ ಎನ್ನುವುದನ್ನು ತೀವ್ರವಾಗಿ ಖಂಡಿಸಿ ಮಾತನಾಡಿದ ಅವರು ಹಾಗಾದರೆ ಪ್ರಧಾನಮಂತ್ರಿ ವಾಜಪೇಯಿ ಅವರು ಸಚಿವರ ರಾಜಿನಾಮೆಗಳನ್ನು ಸ್ವೀಕರಿಸಿದ್ದಾರೆಯೋ? ಎಂದು ಪ್ರಶ್ನಿಸಿದರು. ಬಿಜೆಪಿ ಸರ್ಕಾರವನ್ನು ಕೆಳಗಿಳಿಸಲು ದೇಶಾದ್ಯಂತ ನಡೆಯುತ್ತಿರುವ ಹೋರಾಟ ಕರ್ನಾಟಕದಲ್ಲಿ ಈಗ ಆರಂಭಗೊಂಡಿದೆ - ರಾಜ್ಯದಲ್ಲಿ ಬಿಜೆಪಿ-ಕಾಂಗ್ರೆಸ್(ಐ)ಗಳಿಗೆ ಪರ್ಯಾಯವಾದ ಪೀಪಲ್ಸ್ ಫ್ರಂಟ್ ಆರಂಭಿಸಲು ಈ ಪ್ರತಿಭಟನೆ ಸಹಾಯಕವಾಗಿದೆ ಎಂದರು.

ಮಾಜಿ ಉಪಮುಖ್ಯಮಂತ್ರಿ, ಜನತಾದಳ (ಜಾತ್ಯಾತೀತ) ಪಕ್ಷದ ರಾಜ್ಯಾಧ್ಯಕ್ಷರಾದ ಎಸ್. ಸಿದ್ದರಾಮಯ್ಯನವರು ಮಾತನಾಡಿ, ವಾಜಪೇಯಿ ಸರ್ಕಾರಕ್ಕೆ ನೈತಿಕತೆ ಎನ್ನುವುದಿದ್ದರೆ, ತಕ್ಷಣ ರಾಜಿನಾಮೆ ನೀಡಿ ಎಂದು ಪ್ರಧಾನಿಗೆ ಸವಾಲು ಹಾಕಿದರು. ಇಲ್ಲದಿದ್ದಲ್ಲಿ - ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನಗಳನ್ನು ನಡೆಲಾಗುವುದೆಂದು ಹೇಳಿದರು.

ಸಿಪಿಐನ ರಾಜ್ಯ ಕಾರ್ಯದರ್ಶಿ ಕಾಂ. ಎಂ.ಸಿ.ವೆಂಕಟರಾಮ್‌ರವರು ಕೇಂದ್ರ ಸರ್ಕಾರ ವಿದೇಶಿಯರ ಕೈಯಲ್ಲಿ ರಾಷ್ಟ್ರವನ್ನು ಒತ್ತೆಯಿಡಲು ಹೊರಟಿದೆ ಎಂದು ಆರೋಪಿಸಿದರು.

ಬಹಿರಂಗ ಸಭೆಗಿಂತ ಮೊದಲು - ಸಿಪಿಐ(ಎಂ)ನ ಕಾರ್ಯಕರ್ತರು ಬನಪ್ಪ ಪಾರ್ಕಿನಿಂದ, ಸಿಪಿಐ ಕಾರ್ಯಕರ್ತರು, ಮಿನರ್ವ ಮಿಲ್ ಕಾರ್ನರ್‌ನಿಂದ, ಜನತಾದಳ(ಜಾತ್ಯಾತೀತ) ಕಾರ್ಯಕರ್ತರು ಜನತಾದಳ ಕಛೇರಿಯಿಂದ ಬಸವೇಶ್ವರ ವೃತ್ತದವರೆಗೆ ಪ್ರತ್ಯೇಕವಾಗಿ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿದರು.

ಭ್ರಷ್ಟ ಎನ್‌ಡಿಎ ಸರ್ಕಾರದ ರಾಜಿನಾಮೆಗೆ ಆಗ್ರಹಿಸಿ ವಿವಿಧೆಡೆ ಪ್ರತಿಭಟನೆ

ಏಕೈಕ ದೇಶಭಕ್ತ, ಶುದ್ಧ, ಸಮರ್ಥ ಎಂಬಿತ್ಯಾದಿ ಬೊಗಳೆಗಳಿಂದ ಕೇಂದ್ರದಲ್ಲಿ ಅಧಿಕಾರದ ಗದ್ದುಗೇರಿದ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ದೇಶದ ರಕ್ಷಣಾ ಇಲಾಖೆಯಲ್ಲಿ ಭ್ರಷ್ಟಾಚಾರವೆಸಗಿ ಖುದ್ದು ಸಿಕ್ಕಿಬಿದ್ದಿರುವಾಗ, ಸರ್ಕಾರದ ರಾಜೀನಾಮೆ ನೀಡದೆ ಭಂಡತನ ಪ್ರದರ್ಶಿಸುತ್ತಿರುವ ವಾಜಪೇಯಿ ಸರ್ಕಾರ ಕೂಡಲೇ ರಾಜಿನಾಮೆ ನೀಡಬೇಕೆಂದು ಆಗ್ರಹಿಸಿ ಸಿಪಿಐ(ಎಂ), ಸಿಪಿಐ, ಜನತಾದಳ(ಎಸ್), ರೈತ ಸಂಘ ಜಂಟಿಯಾಗಿ ರಾಜ್ಯದ ವಿವಿಧೆಡೆ ನಡೆಸಿರುವ ಪ್ರತಿಭಟನೆಗಳ ವರದಿ.

ಬಿಜಾಪುರ: ಮಾರ್ಚ್ 20 ರಂದು ಸಿಪಿಐ(ಎಂ), ಸಿಪಿಐ, ಜನತಾದಳ(ಜಾ), ರಾಜ್ಯ ರೈತ ಸಂಘದ ನೂರಾರು ಕಾರ್ಯಕರ್ತರು ನಗರದ ವಿವಿಧೆಡೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರದ ಭೂತದಹನ ನಡೆಸಿದರು. ಮೆರವಣಿಗೆಯಲ್ಲಿ ವಿದ್ಯಾರ್ಥಿ-ಯುವಜನತೆ, ಮಹಿಳೆಯರು, ಕಾರ್ಮಿಕರು, ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಹಿರಿಯ ಮುಖಂಡ ಕಾಂ. ಎನ್.ಕೆ.ಉಪಾಧ್ಯಾಯ, ಸಿಪಿಐನ ಚಂಚಲಕರ, ಪ್ರಾಂತ ರೈತ ಸಂಘದ ಭೀಮಸಿ ಕಲಾದಗಿ, ಜಾತ್ಯಾತೀತ ಜನತಾದಳದ ಎಸ್.ಡಿ.ಕರ್ಪೂರಮಠ, ರಾಜ್ಯ ರೈತ ಸಂಘದ ಬಸಪ್ಪ ಅಂಕಲಿ ಹಾಗೂ ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ ಮುಂತಾದವರು ಮಾತನಾಡಿ ವಾಜಪೇಯಿ ನೇತೃತ್ವದ ಸರ್ಕಾರ ಕೂಡಲೇ ರಾಜಿನಾಮೆ ನೀಡುವಂತೆ ಆಗ್ರಹಿಸಿದರು.

ಬಳ್ಳಾರಿ: ಸಿಪಿಐ(ಎಂ), ಜೆಡಿ(ಎಸ್), ಸಿಪಿಐ ಜಂಟಿಯಾಗಿ ಭೂತದಹನ ಮಾಡಿದರು. ಸಭೆಯನ್ನುದ್ದೇಶಿಸಿ ಎಸ್.ಪ್ರಸನ್ನಕುಮಾರ್, ಯು.ಬಸವರಾಜು ಮೊದಲಾದವರು ಮಾತನಾಡಿದರು. ಜಿಲ್ಲಾದ್ಯಂತ ಧರಣಿ ಸತ್ಯಾಗ್ರಹ ನಡೆಸಲಾಗಿದೆ.

ಕುಂದಾಪುರ: ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಹಾಗೂ ಸಾರ್ವಜನಿ ಸಭೆ ನಡೆಯಿತು. ಸಭೆನ್ನುದ್ದೇಶಿಸಿ ಹಿರಿಯ ಮುಖಂಡರಾದ ವಿ.ಜೆ.ಕೆ.ನಾಯರ್ ಮಾತನಾಡಿ ಟೇಪುಗಳೇ ಎಲ್ಲವನ್ನು ಸ್ಪಷ್ಟವಾಗಿ ತೋರಿರುವಾಗ ಯಾವುದೇ ತನಿಖೆ ಅಗತ್ಯವಿಲ್ಲ. ರಾಜಿನಾಮೆ ಒಂದೇ ದಾರಿ. ನ್ಯಾಯಾಂಗ ತನಿಖೆ ಕೇವಲ ಒಂದು ನಾಟಕವಷ್ಟೆ ಎಂದರು. ಸಭೆಯಲ್ಲಿ ಮಾಜಿ ಪುರಸಭಾ ಅದ್ಯಕ್ಷರಾದ ವಿ.ನರಸಿಂಹ ಹಾಗೂ ತಾಲ್ಲೂಕು ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಸದಸ್ಯರಾದ ಸಿ.ನಾರಾಯಣ ವಹಿಸಿದ್ದರು.

ಸಿದ್ದಾಪುರ: ಸಿಪಿಐ(ಎಂ) ನೇತೃತ್ವದಲ್ಲಿ ನೂರಾರು ಜನರು ಪ್ರತಿಭಟನೆ ಮೆರವಣಿಗೆ ಮೂಲಕ ಎನ್‌ಡಿಎ ಸರ್ಕಾರದ ಭೂತ ದಹನ ನಡೆಸಿದರು. ಸಭೆಯನ್ನುದ್ದೇಶಿಸಿ ಹೆಚ್.ಎಂ.ಕಾಳಯ್ಯ, ಪೀಟರ್ ಲೋಬೋ ಮೊದಲಾದವರು ಮಾತನಾಡಿದರು.

ಹೆಗ್ಗಳ - ವಿರಾಜಪೇಟೆ ತಾಲೂಕಿನ ಹೆಗ್ಗಳದಲ್ಲಿ ಸಿಐಟಿಯು ಹಾಗೂ ಡಿವೈಎಫ್‌ಐ ಜಂಟಿಯಾಗಿ ಪ್ರತಿಭಟನೆ ಹಮ್ಮಿಕೊಂಡಿದ್ದವು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಅಶ್ರಣ್ಣನವರು



ಬಿಜಾಪುರದಲ್ಲಿ ಭೂತ ದಹನ

ಉದ್ಘಾಟಿಸಿ ಭ್ರಷ್ಟ ಸರ್ಕಾರದ ರಾಜಿನಾಮೆ ಅನಿವಾರ್ಯ ಎಂದರು. ಸಭೆಯನ್ನುದ್ದೇಶಿಸಿ ಪೀಟರ್, ಯಶೋಧರ್, ಎಸ್.ವೈ.ಗುರುಶಾಂತ್ ಮಾತನಾಡಿದರು. ಪಂಚಾಯ್ತಿ ಸದಸ್ಯೆಯರಾದ ಯಶೋಧಾ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು: ವಿದ್ಯಾರ್ಥಿ-ಯುವಜನರ ಪ್ರತಿಭಟನೆ- ರಕ್ಷಣಾ ಲಂಚ ಹಗರಣದಲ್ಲಿ ಭಾಗಿಯಾಗಿರುವ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜಿನಾಮೆ ನೀಡಬೇಕೆಂದು ಆಗ್ರಹಿಸಿ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ ವಾಜಪೇಯಿ ಸರ್ಕಾರದ ಪ್ರತಿಕೃತಿ ದಹನ ಮಾಡಿದರು.

ಪ್ರತಿಭಟನಾ ಕಾರ್ಯಕ್ರಮದಲ್ಲಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಜಿಲ್ಲಾ ಅಧ್ಯಕ್ಷರಾದ ಎಸ್.ಲಕ್ಷ್ಮಣ್ ಕುಮಾರ್, ಕಾರ್ಯದರ್ಶಿ ಕೆ.ಶ್ರೀನಿವಾಸ್, ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್, ಜಿಲ್ಲಾ ಮುಖಂಡರಾದ ಬಿ.ರಾಜಶೇಖರ ಮೂರ್ತಿ ಮೊದಲಾದವರು ಪಾಲ್ಗೊಂಡು ಮಾತನಾಡಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಕೂಡಲೇ ರಾಜಿನಾಮೆ ನೀಡಬೇಕೆಂದು ಆಗ್ರಹಪಡಿಸಿದರು.



ಧಾರವಾಡದಲ್ಲಿ ಪ್ರತಿಭಟನಾ ಮೆರವಣಿಗೆ

'ಪ್ರಜಾಶಕ್ತಿ' - ಈಗ ತಿರುಪತಿಯಿಂದಲೂ ಪ್ರಕಟ

ಪ್ರಜಾಶಕ್ತಿ-ತೆಲುಗು ದಿನಪತ್ರಿಕೆಯೀಗ ಕರ್ನಾಟಕದ ಗಡಿಯ ತಿರುಪತಿಯಿಂದಲೇ ಲಭ್ಯ. ಪತ್ರಿಕೆಯ ನಾಲ್ಕನೇಯ ಆವೃತ್ತಿಯನ್ನು ಮಾರ್ಚ್ 26 ರ ಉಗಾದಿ ದಿನದಂದು 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕ, ಸಿಪಿಐ(ಎಂ) ನ ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ಬಿಡುಗಡೆಗೊಳಿಸಿ ಈ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದರು. ಈ ಆಕರ್ಷಕ ಸಮಾರಂಭದಲ್ಲಿ ಆಂಧ್ರ ವಾರ್ತಾ ಸಚಿವ ಎನ್.ಶಿವಪ್ರಸಾದ್, ಪತ್ರಿಕಾ ಅಕಾಡೆಮಿಯ ಅಧ್ಯಕ್ಷ ಪೋತೂರಿ ವೆಂಕಟೇಶ್ವರ ರಾವ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವಲು, ಚಿತ್ತೂರು ಜಿಲ್ಲಾಧಿಕಾರಿ ಪಿ.ವಿ.ಸತ್ಯನಾರಾಯಣ ಮೂರ್ತಿ ಮುಂತಾದವರು ಪಾಲ್ಗೊಂಡಿದ್ದರು.

ಈ ಆವೃತ್ತಿಯ ಬಹುಮುಖ ಪ್ರಯೋಜನವನ್ನು ಪಡೆಯಲು ಕರ್ನಾಟಕ ಜನರಿಗೆ ಅವಕಾಶ ಹೆಚ್ಚಿದೆ, ಪತ್ರಿಕೆ ಬೆಳೆದು, ಬೆಳಗಲಿ ಎಂದು ಐಕ್ಯರಂಗ ಶುಭಾಶಯ ಕೋರಿದೆ.

ತನ್ನದು ರೈತರ ಪರ ಬಜೆಟ್ ಎಂದೆಲ್ಲಾ ಬಣ್ಣಿಸಿಕೊಂಡ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಬಜೆಟ್ ಯಾರ ಹಿತ ರಕ್ಷಿಸಲು ಕಾತರಿಸಿದೆ? ಇದು ಅಭಿವೃದ್ಧಿ ಪರವೂ ಅಲ್ಲ ರೈತ, ಕೂಲಿಕಾರರು, ಯುವಜನರ ಪರವಂತೂ ಅಲ್ಲವೇ ಅಲ್ಲ. ಇಲ್ಲಿರುವುದು ಯಾವುದರ ನೆರಳು?

ಕರ್ನಾಟಕ ಬಜೆಟ್

ರೈತರನ್ನೂ ರಕ್ಷಿಸದ ಅಭಿವೃದ್ಧಿಯೂ ಕಾಣದ

ಸೋಗಿನ ಸರಕು


ಎಸ್. ಸೂರ್ಯನಾರಾಯಣ ರಾವ್

ಕಳೆದ ವರ್ಷ ಕೇಂದ್ರ ಸರ್ಕಾರ ವ್ಯವಸಾಯೋತ್ಪನ್ನಗಳ ಆಮದಿನ ಮೇಲೆ ಇದ್ದ ನಿರ್ಬಂದ ತೆಗೆದು ಆಮದು ಶುಲ್ಕ ಕಡಿಮೆ ಮಾಡಿ, ರೈತರು ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅನೇಕ ಕಡೆಗಳ ರೈತರ ಪ್ರತಿಭಟನಾಕಾರರ ಮೇಲೆ ಲಾಠಿಚಾರ್ಜ್, ರೈತರ ಬಂಧನ ಪ್ರತಿಭಟನಾಕಾರರಿಗೆ ಬೇಡಿ ತೊಡಿಸುವ ಘಟನೆಗಳು ನಡೆದಿದ್ದವು. ಅದೇ ರೀತಿ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಶೇ. 50ರಷ್ಟು ಸಣ್ಣ ಉದ್ಯಮಗಳು ದಿವಾಳಿಯಾಗುವ ಪರಿಸ್ಥಿತಿಗೆ ಬಂದು ಅಲ್ಲಿಯೂ ಸಹ ಪ್ರತಿಭಟನೆ ಹೋರಾಟಗಳು ನಡೆದಿದ್ದವು. ಈ ಹಿನ್ನಲೆಯಲ್ಲಿ ರೈತರ ಪರ ಎಂದು ಹೇಳಿಕೊಳ್ಳುತ್ತಿರುವ ಎಸ್.ಎಂ. ಕೃಷ್ಣ ರೈತರ ಹಿತಾಸಕ್ತಿ ಕಾಪಾಡಲು ಅನುಕೂಲವಾಗುವ ಬಜೆಟ್ ಮಂಡಿಸುತ್ತಾರೆಂದು ತಿಳಿದು ಜನತೆಗೆ ಖುಷಿಯಾಗಿತ್ತು.

ಉಗಾದಿ ಹಬ್ಬದ ಮರುದಿನ ಮಂಡಿಸಿದ ಬಜೆಟ್ ಮೇಲ್ನೋಟಕ್ಕೆ ರೈತರ ಪರ ಎಂದು ಕಾಣಿಸಿದರೂ ಬಜೆಟ್‌ನ ಅಂಶಗಳನ್ನು ಅಧ್ಯಯನ ಮಾಡಿದರೆ ಇದು ರೈತರ ಪರವಾಗಿಯೂ ಇಲ್ಲ, ಸಣ್ಣ ಕೈಗಾರಿಕೆಗಳ ರಕ್ಷಣೆಗೂ ಇಲ್ಲ. ವಿಶ್ವವಾಣಿಜ್ಯ ಸಂಘಟನೆ (W.T.O) ಮತ್ತು ವಿಶ್ವಬ್ಯಾಂಕ್‌ನ ನಿರ್ದೇಶನಕ್ಕೆ ಅನುಗುಣವಾಗಿದೆ ಎಂದು ತೋರಿಸುವ ನಿರಾಶಾದಾಯಕ ಬಜೆಟ್ ಇದಾಗಿದೆ.

ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ಬೆರಳು ಮಾಡಿ ತೋರಿಸುವ ಬದಲು, ಉತ್ಪತ್ತಿ ಜಾಸ್ತಿಯಾಗಿದೆ. ಆದರಿಂದ ಬೆಲೆ ಕುಸಿತ ಎಂದು ಹೇಳಿ WTO ತೀರ್ಮಾನಗಳನ್ನು ಸಮರ್ಥಿಸಿದ್ದಾರೆ. ಕೇಂದ್ರ ಸರ್ಕಾರ ಪ್ರಮಾಣಾತ್ಮ ನಿರ್ಬಂದ ಹಿಂತೆಗೆದುಕೊಂಡುದನ್ನು ಟೀಕಿಸುವ ಗೋಜಿಗೆ ಹೋಗಲಿಲ್ಲ. ಕೇಂದ್ರ ಸರ್ಕಾರ ಇನ್ನು ಮುಂದೆ ರೈತರ ಫಸಲನ್ನು ಫುಡ್ ಕಾರ್ಪೋರೇಷನ್ ಕೊಳ್ಳುವುದಿಲ್ಲ ಎಂದು ಹೇಳಿದ್ದನ್ನು ಸಹಾ ಟೀಕಿಸಲಿಲ್ಲ. ಮಾತ್ರವಲ್ಲ ರೈತರು ಬೆಳೆದು ಫಸಲಿಗೆ ಲಾಭದಾಯಕ ಬೆಲೆ ಕೊಡುವ ಬಗ್ಗೆಯೂ ಸಹ ಚಕಾರ ಎತ್ತಿಲ್ಲ. ಅದಕ್ಕೆ ಬದಲು ಕಳೆದ ಬಾರಿ ಬೆಲೆ ಕುಸಿದ ಸಂದರ್ಭದಲ್ಲಿ ಸರ್ಕಾರ ಖರೀದಿಸಲು 100 ಕೋಟಿ ಇದ್ದುದನ್ನು 200 ಕೋಟಿಗೆ ಏರಿಸಿದ್ದೇವೆ. ಕೇಂದ್ರ ಸರ್ಕಾರದಿಂದಲೂ 200 ಕೋಟಿಗೆ ಪ್ರಯತ್ನಿಸುತ್ತೇವೆ ಎಂದು ಕಾರ್ಯರೂಪಕ್ಕೆ ಬರದ ಭರವಸೆ ಮಾತ್ರ ಕೊಟ್ಟಿದ್ದಾರೆ. ಒಂದೆಡೆ ಬೆಲೆ ಕುಸಿತ, ಇನ್ನೊಂದೆಡೆ ವಿದ್ಯುತ್ ಶಕ್ತಿ ದರ ಏರುವುದನ್ನು ಪ್ರತಿಭಟಿಸಿ ಪಂಪ್‌ಸೆಟ್ ಬಳಕೆದಾರರು ರಾಜ್ಯವ್ಯಾಪಿ ಹೋರಾಟ, ಧರಣಿ ಕಾರ್ಯಕ್ರಮ ಹಮ್ಮಿಕೊಂಡಿದ್ದನ್ನು ಗಣನೆಗೆ ತೆಗೆದುಕೊಳ್ಳದೆ, ಅವೈಜ್ಞಾನಿಕವಾಗಿ ಕೊಟ್ಟಿರುವ 10-20-30 ಸಾವಿರ ರೂ ಬಿಲ್ಲುಗಳನ್ನು ಜಾರಿಗೊಳಿಸುವುದಿಲ್ಲ ಎಂಬ ಭರವಸೆ ಇಲ್ಲ. ಅವರಿಗೆ ತಡೆಯಿಲ್ಲದ ವಿದ್ಯುತ್ ಸರಭರಾಜಿನ ಭರವಸೆ ಇಲ್ಲ. ಶ್ರೀಮಂತ ರೈತರನ್ನು ತೃಪ್ತಿಪಡಿಸುವ ತತ್ಕಾಲ ಯೋಜನೆಯ ಮೂಲಕ 25 ಸಾವಿರ ರೂ. ಸಂದಾಯ ಮಾಡಿದರೆ, ಪ್ರತಿ ಯೂನಿಟ್‌ಗೆ ರೂ 1.35ರ ದರದಲ್ಲಿ ಕೊಡಲಾಗುವುದು ಎಂದು ಹೇಳುವುದರ ಮೂಲಕ ಹಲವಾರು ತಿಂಗಳಿಂದ ಅರ್ಜಿ ಹಾಕಿ ಕಾಯುತ್ತಿರುವ ಸಾಮಾನ್ಯರಿಗೆ ಸೌಲಭ್ಯ ಅಸಾಧ್ಯ ಎಂಬಂತಾಗಿದೆ ಮತ್ತು ಶ್ರೀಮಂತರೂ ಸಹ ಈ ದುಬಾರಿ ಬೆಲೆಯಲ್ಲಿ ವಿದ್ಯುತ್ ಉಪಯೋಗ ಮಾಡಲು ಕಷ್ಟವಾಗುತ್ತದೆ. ಇದರ ಅರ್ಥ ಉತ್ಪಾದನೆ ವೆಚ್ಚ ಹೆಚ್ಚಾಗಿ, ಆಮದು ವಸ್ತುಗಳಿಗೆ ಸ್ಪರ್ದೆ ನೀಡಲು ಸಾಧ್ಯವಾಗದೇ ನೆಲ ಕಚ್ಚಬೇಕಾಗುತ್ತದೆ. ರೈತರು ದಿವಾಳಿಕೋರರಾಗಬೇಕಾಗುತ್ತದೆ. ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುವ ಪ್ರಸಂಗ ಒದಗುವಂತಾಗಿದೆ. ನೀರಾವರಿ ದರಗಳು ಏರಿಕೆ ಪ್ರಸ್ತಾಪವೂ ಇದೆ. ಸಾಲದ ಬಾರದಿಂದ ನರಳುತ್ತಿರುವ ರೈತರಿಗೆ ಮಧ್ಯಾವದಿ, ದೀರ್ಘಾವದಿಯನ್ನಾಗಿಸಬೇಕು. ಸಾಲದ ಮೇಲಿನ ಬಡ್ಡಿ ಮನ್ನಾ, ಸಹಕಾರಿ ಸಂಘಗಳು ನೀಡಿರುವ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ತನ್ನ ನಿರ್ಲಕ್ಷ್ಯ ತೋರಿಸಿದೆ.

ಫುಡ್ ಕಾರ್ಪೋರೇಷನ್‌ನವರು ಆಹಾರ ದಾನ್ಯಗಳನ್ನು ಖರೀದಿ ಮಾಡದಿದ್ದರೆ, ರೈತರು ದಲ್ಲಾಳಿಗಳ ಮರ್ಜಿಗೆ ಸಿಕ್ಕಿ ಆರಕ್ಕೆ ಮೂರಕ್ಕೆ ತಮ್ಮ ದಾನ್ಯಗಳನ್ನು ಮಾರಾಟ ಮಾಡುವ ಪರಿಸ್ಥಿತಿ ಬರುತ್ತದೆ. ಇದನ್ನು ತಡೆಗಟ್ಟುವ ಯಾವ ಭರವಸೆಯೂ ಇಲ್ಲ.



ನಮ್ಮ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಉದ್ಯೋಗವನ್ನು ದೊರಕಿಸಿಕೊಡುವ ಸಣ್ಣ ಕೈಗಾರಿಕೆಗಳು ಮುಗ್ಗಟ್ಟಿನಲ್ಲಿವೆ. ಇದನ್ನು ಪುನರುಜ್ಜೀವನಗೊಳಿಸುವ ಪ್ರಸ್ತಾಪವೇ ಇಲ್ಲ. ಸಣ್ಣ ಉದ್ಯಮದಾರರು ಈ ನಿರ್ಲಕ್ಷದ ಬಗ್ಗೆ ತಮ್ಮ ಪ್ರತಿಭಟನೆ ತೋರಿಸಿದ್ದಾರೆ.


ಅಧಿಕಾರ ವಿಕೇಂದ್ರಿಕರಣ, ಪಂಚಾಯ್ತಿಗೆ ಹೆಚ್ಚು ಅಧಿಕಾರ ಎಂದು ಹೇಳುತ್ತಿದ್ದ ಕಾಂಗ್ರೆಸ್, ಈಗ ಜಿಲ್ಲಾಧಿಕಾರಿಗಳಿಗೆ ಹೆಚ್ಚು ಅಧಿಕಾರ; ಶಾಸಕರಿಗೆ 25 ಲಕ್ಷ ರೂಪಾಯಿ ನಿಧಿ ನೀಡಿ ವಿಕೇಂದ್ರೀಕರಣದ ಸಿದ್ಧಾಂತಕ್ಕೆ ಮಸಿ ಬಳಿದಿದ್ದಾರೆ.

ನಮ್ಮ ರಾಜ್ಯದ ಸರ್ಕಾರ ಸ್ವಾಮ್ಯದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಬದಲು ಅವುಗಳನ್ನು ಮುಚ್ಚುವ ಅಥವಾ ಖಾಸಗಿಕರಿಸುವ ಪ್ರಸ್ತಾಪ ಮಾಡಿ ಸಾವಿರಾರು ಕಾರ್ಮಿಕರು ಬೀದಿ ಪಾಲಾಗುವ ರಾಜ್ಯದ ಅಭಿವೃದ್ದಿಗೆ ಮಾರಕವಾಗುವ ನೀತಿಯನ್ನೇ ಅನುಸರಿಸುತ್ತಿದೆ. ಇದು ವಿಶ್ವಬ್ಯಾಂಕ್ ಆದೇಶದ ಮೇರೆಗೆ ಇದೆ ಎಂದರೆ ತಪ್ಪಾಗಲಾರದು. ಈ ನೀತಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಎಐಸಿಸಿ ಅಧಿವೇಶನದಲ್ಲಿ ಲಾಭದಾಯಕ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳನ್ನು ಮುಚ್ಚಬಾರದೆಂದು ಹೇಳಿದ್ದರೂ ಕೇಂದ್ರ ಸರ್ಕಾರ ಬಾಲ್ಕೋ ಕಂಪನಿಯನ್ನು ಸ್ಟರ್ ಲೈಟ್ ಕಂಪನಿಗೆ ಮಾರಿದುದನ್ನು ಪ್ರತಿಭಟಿಸುತ್ತಿದ್ದರೂ ಸಹ ಕೃಷ್ಣ ಹೇಳಿಕೆ ಇದಕ್ಕೆ ತದ್ವಿರುದ್ಧವಾಗಿದೆ.

ಈ ಸಾಲಿನ ಬಜೆಟ್‌ನಲ್ಲಿ ನಿರುದ್ಯೋಗವನ್ನು ತಡೆಗಟ್ಟುವ ಪ್ರಸ್ತಾಪವೇ ಇಲ್ಲ. ರೂ. 1000-1200 ಕೋಟಿ ರೂ.ಗಳ ಅಬ್ಕಾರಿ ಸೋರಿಕೆಯನ್ನು ತಡೆಗಟ್ಟಲು ಕ್ರಮ ವಹಿಸದೆ, ಅವರ ಪ್ರಭಾವಕ್ಕೊಳಗಾಗಿ ಹೆಂಗಸರು, ಮಕ್ಕಳು, ವ್ಯಾಪಾರ ಮಾಡುವ ಕಿರಾಣಿ ಅಂಗಡಿಗಳಲ್ಲಿ ಬಿಯರ್, ವೈನ್ ಮಾರಾಟ ಮಾಡಲು ಲೈಸೆನ್ಸ್ ಕೊಡುತ್ತೇವೆಂದು ಹೇಳಿದ್ದು, ನಂತರ ಅದನ್ನು ಸಮರ್ಥಿಸಿಕೊಂಡಿದ್ದು ನಾಚಿಕೆಗೇಡಿನ ಸಂಗತಿ. ಈಗ ವಿರೋಧ ಪಕ್ಷದ ಜೊತೆಗೆ ಕಾಂಗ್ರೆಸ್‌ನ ಒಳಗೂ ಈ ವಿಷಯವಾಗಿ ವಿರೋಧ ಬಂದು ಇದನ್ನು ಕೈಬಿಡುವ ಯೋಚನೆಯಲ್ಲಿದ್ದಾರೆ ಎಂದು ತಿಳಿದುಬಂದಿದೆ. ಕೇಂದ್ರ ಸರ್ಕಾರದ ನೀತಿಗನುಗುಣವಾಗಿ ಪಡಿತರ ಕಾರ್ಡುಗಳ ವಿತರಣೆ ಕಡಿತ ಮಾಡಿ ಸುಮಾರು ಕೇವಲ 20 ಲಕ್ಷ ಪಡಿತರ ಚೀಟಿ ನೀಡುವುದಾಗಿ ಹೇಳಿದ್ದು ಅವೈಜ್ಞಾನಿಕವಾಗಿದ್ದು, ಇದು ಕೃಷಿ ಕಾರ್ಮಿಕರಿಗೆ ಮತ್ತು ಬಡಜನತೆಗೆ ಆಘಾತ ತರುವ ವಿಷಯವಾಗಿದೆ.

ಬಡ ಜನರು ಉಪಯೋಗಿಸುವ ವಸ್ತುಗಳ ಮೇಲೂ ಸಹ ತೆರಿಗೆ ಹಾಕಿರುವುದು ಜನವಿರೋಧಿಯಲ್ಲದೆ ಬೇರೇನೂ ಅಲ್ಲ. ಬೀಡಿ ಕೈಗಾರಿಕೆ ಸಂಕಷ್ಟದಲ್ಲಿರುವಾಗ ಅದರಲ್ಲೂ ಸುಮಾರು 7 ಲಕ್ಷ ಜನ ಕಾರ್ಮಿಕರು ಅದರಲ್ಲೂ ಬಹುತೇಕ ಮಹಿಳೆಯರು ದುಡಿಯುತ್ತಿರುವ ವಿಷಯ ಸರ್ಕಾರಕ್ಕೆ ಗೊತ್ತಿದ್ದರೂ ಬೀಡಿ ಮೇಲೆ ಶೇ 2 ತೆರಿಗೆ ವಿಧಿಸಿರುವುದು ಮೂರ್ಖತನದ ಪರಮಾವಧಿ. ಸರ್ಕಾರ ಪುಸ್ತಕಗಳಿಗೆ ಶೇ 4 ರಷ್ಟು ಮಾರಾಟ ತೆರಿಗೆ ವಿಧಿಸಿರುವುದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಪುಸ್ತಕ ಮಳಿಗೆಗಳು ಮುಚ್ಚುವ ಮೂಲಕ ಬಂದ್ ಆಚರಿಸುವಂತೆ ಕರ್ನಾಟಕ ಲೇಖಕರ ಸಂಘ, ಪ್ರಕಾಶಕರ, ಮಾರಾಟಗಾರರ ಮತ್ತು ಓದುಗರ ಕ್ರಿಯಾ ಸಮಿತಿ ಕರೆ ನೀಡಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಪ್ರೊಫೆಸರ್ ಯು.ಆರ್. ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಚಿದಾನಂದಮೂರ್ತಿ ಮುಂತಾದ ಸಾಹಿತಿಗಳು ಇದು ಅವೈಜ್ಞಾನಿಕ ಎಂದು ಟೀಕಿಸಿದ್ದಾರೆ.

ಹೊರದೇಶಗಳಿಂದ ಸಾಲ ಪಡೆದು ರಾಜ್ಯದ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುವುದು ಅರ್ಥವಿಲ್ಲದ ಮಾತು. ಇಂದಿನ ಖೋತಾ ಬಜೆಟ್



ಸಹ ಜನತೆಯ ಕೊಳ್ಳುವ ಶಕ್ತಿ ಕಡಿಮೆಯಾದರೆ ಭರ್ತಿ ಮಾಡಲು ಸಾಧ್ಯವಿಲ್ಲ. ಇದನ್ನು ನಮ್ಮ ಮಾಹಿತಿ ತಂತ್ರಜ್ಞಾನದ ಮುಖ್ಯಮಂತ್ರಿಗಳು ಅರಿಯದಿರುವುದು ವಿಷಾದನೀಯ.

ಈ ಬಜೆಟ್‌ನಲ್ಲಿ ಭೂಕಂದಾಯವನ್ನು ಏರಿಸುವ ಪ್ರಸ್ತಾಪವೂ ಇದೆ. ಈ ಬಜೆಟನ್ನು ವಿರೋಧ ಪಕ್ಷಗಳು ಟೀಕಿಸಿವೆ. ಕೃಷ್ಣರವರ ರೈತರ ಪರ ಸೋಗು ಬಯಲಾಗಿದೆ. ಸರ್ಕಾರ ರೈತ ವಿರೋಧಿ, ಜನ ವಿರೋಧಿ ಬಜೆಟ್ಟನ್ನು ಪುನರ್ ವಿಮರ್ಶಿಸಿ ರಾಜ್ಯದ ಅಭಿವೃದ್ಧಿಗೆ ರೈತರ ಉತ್ಪಾದನಾ ಶಕ್ತಿ ಹೆಚ್ಚಿಸುವುದಕ್ಕೆ ಸಣ್ಣ ಕೈಗಾರಿಕೆಗಳು ಸಂಕಷ್ಟದಿಂದ ಪಾರಾಗುವುದಕ್ಕೆ ತನ್ಮೂಲಕ ಉದ್ಯೋಗವಕಾಶ ದೊರೆಯುವುದಕ್ಕೆ ಅನುಕೂಲಕರವಾದ ಮಾರ್ಪಾಡು ಮಾಡಬೇಕೆಂದು ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ನಿರ್ಬಂಧಗಳನ್ನು ತೆಗೆದಿರುವುದನ್ನು ಉಗ್ರವಾಗಿ ಖಂಡಿಸಿ, ಆಮದು ಶುಲ್ಕವನ್ನು ಶೇ 300 ರಷ್ಟಾದರೂ ಏರಿಸಿ ರಾಜ್ಯದ ಜನತೆಗೆ ಪರಿಹಾರ ಸಿಗುವಂತೆ ಮಾಡಬೇಕು.

ರೈತರಿಗೆ

ರೈತರೇ ನೀವೆಲ್ಲ ಕೊಟ್ಟಿರುವ ಓಟು
ನಿಮ್ಮದೇ ಕೈಗಳಿಗೆ ಕೊಡಿಸಿಹುದು ತಾಟು
ಕಾರಣವು ಗೊತ್ತೇನು ಕೇಂದ್ರ ಸರ್ಕಾರ
ಉಳ್ಳವರ ಹರಿಕಾರ ಕಾವಿ ಪರಿವಾರ

- ವಿಡಂಬಾರಿ

ಉದ್ಯೋಗ ಭರವಸೆ

ಚುನಾವಣೆ ಕಾಲಕ್ಕೆ ನಿಮಗೆಲ್ಲ ಇತ್ತ
ಉದ್ಯೋಗ ಭರವಸೆಯ ಮರೆತಿಲ್ಲ ಗೊತ್ತಾ?
ಅಸಂಖ್ಯ ಗೋರಿಗಳ ತೋಡಿಸಲು ಎಂದು
ಅರ್ಜಿಯನು ಕರೆದಿಹೆವು ತ್ವರೆ ಮಾಡಿ ಇಂದು

- ವಿಡಂಬಾರಿ

ಯುವಜನ ವಿರೋಧಿ ಬಜೆಟ್‌ನ್ನು ವಿರೋಧಿಸಿ ಬೆಂಗಳೂರು ಡಿವೈಎಫ್ಐ ನಿಂದ ಪ್ರತಿಭಟನೆ



ಭ್ರಷ್ಟಾಚಾರವೆಂಬುದು ಕೆಲವರ ನೈತಿಕ ಅಧಃಪತನದಿಂದ ದಿಢೀರನೇ ಉದ್ಭವಿಸಿತೇ? ಭ್ರಷ್ಟಾಚಾರಕ್ಕೂ ಜಾಗತೀಕರಣ-ಉದಾರೀಕರಣಕ್ಕೂ ಸಂಬಂಧವಿದೆಯೇ? ಹಿಂದೆ ತನಿಖೆಗೊಪ್ಪಿಸಿದ ಹಗರಣಗಳ ಗತಿ ಏನಾಗಿದೆ? ಭ್ರಷ್ಟಾಚಾರದ ಆಳ-ಅಗಲಗಳನ್ನು ಬಿಡಿಸಿಟ್ಟಿದ್ದಾರೆ ಲೇಖಕರು.

ಉದಾರೀಕರಣಗೊಂಡ ಭ್ರಷ್ಟಾಚಾರ

ಪ್ರಕಾಶ್ ಕಾರಟ್

ತೆಹಲ್ಕಾ ಪ್ರಕರಣ ಬಯಲಾಗಿ ಎರಡು ವಾರ ಕಳೆದು ಹೋಗಿದೆ. ವಿಡಿಯೋ ಟೇಪಿನಲ್ಲಿ ತೆಗೆದುಕೊಂಡದ್ದು ಕಂಡುಬಂದಿದ್ದರೂ ಇದುವರೆಗೂ ಸಂಬಂಧಪಟ್ಟವರ ವಿರುದ್ಧ ಮೊಕದ್ದಮೆ ಹೂಡಿಲ್ಲ ಅಥವಾ ಅವರನ್ನು ಬಂಧಿಸಿಲ್ಲ. ಚಿರಪರಿಚಿತ, ಅಪರಿಚಿತ ಶತ್ರುಗಳು ಸರಕಾರವನ್ನು ಅಸ್ಥಿರಗೊಳಿಸುತ್ತಿದ್ದಾರೆ ಎಂಬ ಮಾತು ದಿನೇ ದಿನೇ ಹೆಚ್ಚುತ್ತಿದೆ. ಜಾರ್ಜ್ ಫರ್ನಾಂಡಿಸ್ ಮಟ್ಟಿಗಂತೂ ಇದೊಂದು ಜಾಗತಿಕ ಪಿತೂರಿ!

ಈ ಪ್ರಕರಣವನ್ನು ಮುಚ್ಚಿಹಾಕುವ ಕಾರ್ಯಾಚರಣೆ ಆಗಲೇ ತತ್ಪರತೆಯಿಂದ ಆರಂಭವಾಗಿದೆ. ಬಂಗಾರು ಲಕ್ಷ್ಮಣ್ ಮತ್ತು ಜಯಾ ಜೆಟ್ಲಿ ತಂತಮ್ಮ ಪಕ್ಷಗಳ ಅಧ್ಯಕ್ಷ ಸ್ಥಾನಗಳಿಗೆ ರಾಜಿನಾಮೆ ಕೊಟ್ಟು, ತಮ್ಮ ನಷ್ಟಗಳನ್ನು ಸೀಮಿತಗೊಳಿಸಿದ್ದೇವೆ ಎಂಬುದು ವಾಜಪೇಯಿ ಸರ್ಕಾರದ ನಿರೀಕ್ಷೆ. ಆದರೆ ತೆಹಲ್ಕಾ ಟೇಪುಗಳಲ್ಲಿ ಸಚಿತ್ರವಾಗಿ ಕಂಡುಬಂದ ಆಳವಾಗಿ ಬೇರುಬಿಟ್ಟ ಭ್ರಷ್ಟಾಚಾರವನ್ನು ಮಾತ್ರ ಹಾಗೆಯೇ ಚಾಪೆಯಡಿ ಸಾರಿಸಿಬಿಡುವ ಬಲವಾದ ಯತ್ನ ಸರ್ಕಾರ ನಡೆಸಿದೆ. ನಿವೃತ್ತ ನ್ಯಾಯಾಧೀಶರನ್ನು ನೇಮಿಸಿದ ಆಯೋಗಕ್ಕೆ ನೀಡಿರುವ ಕಾರ್ಯವ್ಯಾಪ್ತಿ ಈ ಕಸರತ್ತಿನ ಹಿಂದಿರುವ ನಿಜವಾದ ಉದ್ದೇಶದ ಸ್ಪಷ್ಟ ಸಂಕೇತ ನೀಡಿದೆ. ತೆಹಲ್ಕಾ ಟೇಪುಗಳಲ್ಲಿ ಪ್ರಸ್ತಾಪಿಸಿದ ರಕ್ಷಣಾ ಖರೀದಿಗಳನ್ನು ಸರಿಯಾದ ವಿಧಾನಗಳಲ್ಲಿ ಮಾಡಲಾಗಿದೆಯೇ, ಈ ಕಾರ್ಯಕ್ರಮಗಳು ಮತ್ತು ವ್ಯವಹಾರಗಳಲ್ಲಿ ಸಾರ್ವಜನಿಕ ಅಧಿಕಾರದಲ್ಲಿರುವವರು ಅಥವಾ ಇತರ ಸಂಘಟನೆಗಳು ನ್ಯಾಯಬಾಹಿರ ಪ್ರಯೋಜನ ಪಡೆದಿದ್ದಾರೆಯೇ ಎಂದು ಆಯೋಗ ತನಿಖೆ ಮಾಡಬೇಕಂತೆ.

ಆದರೆ ಲಂಚಕೋರತನ, ಭ್ರಷ್ಟಾಚಾರ ನಡೆಯುವುದು ವಿಧಿ-ವಿಧಾನಗಳ ಉಲ್ಲಂಘನೆಯೇ ಅಲ್ಲ, ಯಾವುದೇ ತನಿಖೆಯಲ್ಲೂ ಎಲ್ಲಾ ವಿಧಿ-ವಿಧಾನಗಳನ್ನು ಎಲ್ಲಾ ಹಂತಗಳಲ್ಲಿ ಅನುಸರಿಸಿದ್ದು ಕಂಡು ಬರುತ್ತದೆ. ಆದರೆ ಪ್ರಮುಖ ಲಂಚ ವ್ಯವಹಾರ ನಡೆಯುವುದು ಆದಾಗಲೇ ಪರೀಕ್ಷಣೆಗಳ ನಂತರ ಮಂಜೂರಾಗಿ ಪಟ್ಟಿಯಾಗಿರುವ ಕೆಲವೇ ಕಂಪನಿಗಳಲ್ಲಿ ಯಾವ ಒಂದು ಕಂಪನಿಯನ್ನು ಆರಿಸಿಕೊಳ್ಳಬೇಕು ಎನ್ನುವ ಹಂತದಲ್ಲಿ. ನ್ಯಾಯಾಂಗ ತನಿಖೆಯಲ್ಲಿ ಎಲ್ಲಾ ವಿಧಿ-ವಿಧಾನಗಳನ್ನು ಪರಿಪಾಲಿಸಿರುವುದಾಗಿ ಕಂಡುಬರುತ್ತದೆ. ಇಲ್ಲಿ ಆಯ್ಕೆಯಾದ ಕಂಪನಿಯ ಉಪಕರಣಗಳ ಗುಣಮಟ್ಟದ ಪ್ರಶ್ನೆ ಕೂಡಾ ಬರುವುದಿಲ್ಲ. ಆದರೆ ಈ ಇಡೀ ಪ್ರಕ್ರಿಯೆಯನ್ನು ಹೇಗೆ ತೆರೆಮರೆಯಲ್ಲಿ ಪ್ರತಿ ಹಂತದಲ್ಲಿ ಲಂಚಗಳ ಮೂಲಕ ತಲೆಕೆಳಗು ಮಾಡಲಾಗುತ್ತದೆ ಎಂಬುದು ಮಾತ್ರ ತನಿಖೆಯಲ್ಲಿ ಸಾಬೀತಾಗುವುದಿಲ್ಲ.

ಜಸ್ವಂತ್ ಸಿಂಗ್ ರಕ್ಷಣಾ ಮಂತ್ರಿಯಾದ ಮೇಲೆ ಇಂತಹ ತನಿಖೆ ನಡೆಸಲು ನೇಮಿಸಿದ ಏಕ ಸದಸ್ಯ ಆಯೋಗ ಕೂಡಾ ಒಂದು ಕಣ್ಣೊರೆಸುವ ತಂತ್ರ. ಇದು ವ್ಯವಸ್ಥೆಯಲ್ಲಿ ವ್ಯಾಪಕವಾಗಿರುವ ಬೃಹತ್ ಭ್ರಷ್ಟಾಚಾರವನ್ನು ಬಯಲಿಗೆ ತರುವುದಿಲ್ಲ.

ವರ್ಷಾನುಗಟ್ಟಲೆಯಿಂದ ಆಳವಾಗಿ ಬೇರೂರಿದ ಭ್ರಷ್ಟಾಚಾರದ ಹರಹನ್ನು ಹೊರಗೆಳೆಯಬೇಕಾದರೆ

ತೆಹಲ್ಕಾ ಟೇಪುಗಳಲ್ಲಿ ಆಪಾದಿತರಾದ ಎಲ್ಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಕಬೇಕು, ಅವರನ್ನು ಬಂಧಿಸಿ ತನಿಖೆ ನಡೆಸಬೇಕು. ಇದೇ ಏಕೈಕ ಮಾರ್ಗ. ಇಂತಹ ಒಂದು ತನಿಖೆ ಭ್ರಷ್ಟ ಅಧಿಕಾರಶಾಹಿಗಳು ಹಾಗೂ ಸೇನಾಪಡೆಗಳ ಅಧಿಕಾರಿಗಳು ಮತ್ತು ಅಧಿಕಾರಸ್ಥ ರಾಜಕಾರಣಿಗಳ ದುಷ್ಟಕೂಟಕ್ಕೆ ಬೆದರಿಕೆ ತರುತ್ತದೆ. ಆದ್ದರಿಂದಲೇ ಬಿಜೆಪಿ ನೇತೃತ್ವದ ಸರ್ಕಾರ ಇಂತಹ ಒಂದು ದೃಢ ಮತ್ತು ನಿರ್ಣಾಯಕ ಕಾರ್ಯಾಚರಣೆ ನಡೆಸಲು ಹಿಂಜರಿಯುತ್ತದೆ.

ಭ್ರಷ್ಟಾಚಾರ : ಎರಡು ಅರೆಸತ್ಯಗಳು

ತೆಹಲ್ಕಾ ಟೇಪ್‌ಗಳನ್ನು ಬದಿಗೆ ತಳ್ಳುವ, ಅದರ ಹಿಂದೆ ಪಿತೂರಿಯಿದೆಯೆನ್ನುವ ಮೂಲಕ ಬಿಜೆಪಿಗೆ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇತ್ತೀಚಿನ ಬಿಜೆಪಿ - ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಯ ನಂತರ ಪ್ರಧಾನಮಂತ್ರಿಗಳು ಭ್ರಷ್ಟಾಚಾರ ಇದೆ, ಅದನ್ನು ಬಯಲಿಗೆಳೆದದ್ದಕ್ಕೆ ಮಾಧ್ಯಮವನ್ನು ದೂರುವುದು ತಪ್ಪು ಎಂದರು. ಚುನಾವಣಾ ವ್ಯವಸ್ಥೆ ರಾಜಕೀಯ ಭ್ರಷ್ಟಾಚಾರದ ಮೂಲ ಸೆಲೆ ಎಂದು ಅವರ ಅಂಬೋಣ. ಚುನಾವಣೆಯಲ್ಲಿ ಅಪಾರ ಹಣದ ಅಗತ್ಯವು ರಾಜಕೀಯ ವ್ಯವಸ್ಥೆಯನ್ನು ಭ್ರಷ್ಟಗೊಳಿಸಿದೆಯೆಂದು ಅವರು ಹೇಳಿದರು.

ಇಲ್ಲಿ ಭ್ರಷ್ಟಾಚಾರವನ್ನು ಕುರಿತಂತೆ ವ್ಯಾಪಕವಾಗಿ ಹರಡಿಸಿರುವ ಎರಡು ಅರೆಸತ್ಯಗಳನ್ನು ಪರಿಶೀಲಿಸುವುದು ಅಗತ್ಯ. ಮೊದಲನೆಯದು,

> **ತೆಹಲ್ಕಾ ಟೇಪುಗಳಲ್ಲಿ ಸಚಿತ್ರವಾಗಿ ಕಂಡುಬಂದ ಆಳವಾಗಿ ಬೇರುಬಿಟ್ಟ ಭ್ರಷ್ಟಾಚಾರವನ್ನು ಮಾತ್ರ ಹಾಗೆಯೇ ಚಾಪೆಯಡಿ ಸಾರಿಸಿಬಿಡುವ ಬಲವಾದ ಯತ್ನ ಸರ್ಕಾರ ನಡೆಸಿದೆ. ನಿವೃತ್ತ ನ್ಯಾಯಾಧೀಶರನ್ನು ನೇಮಿಸಿದ ಆಯೋಗಕ್ಕೆ ನೀಡಿರುವ ಕಾರ್ಯವ್ಯಾಪ್ತಿ ಈ ಕಸರತ್ತಿನ ಹಿಂದಿರುವ ನಿಜವಾದ ಉದ್ದೇಶದ ಸ್ಪಷ್ಟ ಸಂಕೇತ ನೀಡಿದೆ.**

ವಾಜಪೇಯಿ ಹೇಳಿದ ಚುನಾವಣೆ ಮತ್ತು ಭ್ರಷ್ಟಾಚಾರದ ನಡುವಿನ ಸಂಬಂಧ. ಚುನಾವಣಾ ಉದ್ದೇಶಗಳಿಗೆ ರಾಜಕಾರಣಿಗಳು ಅಪಾರ ಕಪ್ಪು ಹಣವನ್ನು ಬಳಸುತ್ತಾರೆ ಎಂಬುದು ನಿಜ. ಆದರೆ ಕೇವಲ ಇದೇ ಭ್ರಷ್ಟಾಚಾರದ ಮೂಲವಲ್ಲ. ಅದು ಹೆಚ್ಚು ವ್ಯವಸ್ಥಿತವಾಗಿದೆ. ಅದರ ಬೇರು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯಲ್ಲೇ, ಬಂಡವಾಳಶಾಹಿ ಬೆಳವಣಿಗೆಯ ದಾರಿಯಲ್ಲೇ ಇದೆ. ಚುನಾವಣಾ ರಂಗದ ಹೊರಗೂ ಭ್ರಷ್ಟಾಚಾರ ವ್ಯಾಪಕವಾಗಿ ಹರಡಿದೆ. ಒಂದೆಡೆ ಸಾರ್ವಜನಿಕ ಸೇವಕರಿಂದ ಸಾರ್ವಜನಿಕ ನಿಧಿಯ ಲೂಟಿ ನಡೆದರೆ, ಇನ್ನೊಂದೆಡೆ ದೊಡ್ಡ ವ್ಯಾಪಾರಸ್ಥರು, ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪ್ರಯೋಜನಕ್ಕಾಗಿ ಸರ್ಕಾರದ ನೀತಿ-ಧೋರಣೆಗಳ ಮೇಲೆ ಪ್ರಭಾವ ಬೀರಲು ಕಾನೂನುಬಾಹಿರ ಹಣವನ್ನು ಹರಿಯಬಿಟ್ಟು ಕಲುಷಿತ ವಾತಾವರಣ ಸೃಷ್ಟಿಸಿದ್ದಾರೆ. ಬೂರ್ಜ್ವಾ ರಾಜಕಾರಣಿಗಳು, ಉನ್ನತ ಅಧಿಕಾರಶಾಹಿಗಳು ಮತ್ತು ಸಾರ್ವಜನಿಕ ಸೇವಕರು ಈ ರೀತಿ ಗಳಿಸಿದ ಹಣದಲ್ಲಿ ದೊಡ್ಡ ಭಾಗ ಚುನಾವಣೆಗಳಿಗಾಗಿ ಹೋಗುವುದಿಲ್ಲ. ಬದಲಿಗೆ ಅವರ ಜೇಬುಗಳಿಗೇ ಹೋಗುತ್ತದೆ. ಜನಗಳನ್ನು ಬಲಿಗೊಟ್ಟು ಬಂಡವಾಳ ಶೇಖರಿಸಲಿಕ್ಕೇ ಬಳಕೆಯಾಗುತ್ತದೆ. ಆದ್ದರಿಂದ ಹಣದ ಕಾನೂನುಬಾಹಿರ ಬಳಕೆಯಾಗದಂತೆ ತಡೆಯಲು ಚುನಾವಣಾ ಕಾನೂನುಗಳನ್ನು ತಿದ್ದುಪಡಿ ಮಾಡುವುದರಿಂದ ಮಾತ್ರವೇ ಸಾರ್ವಜನಿಕ ಜೀವನವನ್ನು ಪ್ರವೇಶಿಸಿರುವ ಈ ಹೊಲಸನ್ನು ಭ್ರಷ್ಟಾಚಾರವನ್ನು ಎದುರಿಸಿಲು ಸಾಧ್ಯವಾಗುವುದಿಲ್ಲ.

ದಾರಿತಪ್ಪಿಸಲು ಬಳಸುವ ಎರಡನೆಯ ಅರೆಸತ್ಯವೆಂದರೆ ರಕ್ಷಣಾ ವಲಯದಲ್ಲಿ ಭ್ರಷ್ಟಾಚಾರ ಸದಾ ಇತ್ತು. ತೆಹಲ್ಕಾ ಟೇಪುಗಳು ಈ ಹಿಂದೆ ಬೋಫೋರ್ಸ್ ಹೆಚ್.ಡಿ.ಡಬ್ಲ್ಯು. ಹಗರಣಗಳಲ್ಲಿ ಹೊರಬಂದವುಗಳನ್ನ ದೃಢಪಡಿಸಿವೆ ಎಂಬ ಮಾತು. ಶಸ್ತ್ರಾಸ್ತ್ರಗಳನ್ನು ಖರೀದಿಸುವಾಗ ಇರುವ ಗೋಪ್ಯತೆಯಿಂದಾಗಿ ಅಲ್ಲಿ ಭ್ರಷ್ಟಾಚಾರ ಜಗತ್ತಿನ ಎಲ್ಲಾ ದೇಶಗಳಲ್ಲೂ ಇವೆ ಎಂಬುದು ಅವರ ತರ್ಕ. ಆದರೆ ಈ ಲಂಚಕೋರತನ ದಳ್ಳಾಳಿತನ ರಕ್ಷಣಾ ವಲಯದಲ್ಲಿ ಮಾತ್ರವಲ್ಲ, ನಮ್ಮ ಸರ್ಕಾರದ, ಸಾರ್ವಜನಿಕ ಜೀವನದ ಪ್ರತಿಯೊಂದು ವಲಯದಲ್ಲೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ ಎಂಬ ಸತ್ಯವನ್ನು ತರ್ಕ ನಿರ್ಲಕ್ಷಿಸುತ್ತದೆ. ನಮ್ಮ ಆರ್ಥಿಕದ ಇತರ ವಲಯಗಳಲ್ಲಿ ಪರಿಸ್ಥಿತಿ ರಕ್ಷಣಾ ವಲಯಕ್ಕಿಂತ ಉತ್ತಮವಾಗಿಯೇನೂ ಇಲ್ಲ.

ಉದಾರೀಕರಣದ ಮೊದಲು ನಂತರ:

ಆದ್ದರಿಂದ ನಮ್ಮ ಸಮಾಜದಲ್ಲಿ ವ್ಯತ್ಯಾಸವೇನಿದೆ? ಭ್ರಷ್ಟಾಚಾರದ ರಾಜಕೀಯ ಅರ್ಥಶಾಸ್ತ್ರವನ್ನು ತಿಳಿಯುವುದು ಅಗತ್ಯ. ಕಳೆದ ಒಂದು ದಶಕದಲ್ಲಿ ಮತ್ತೆ-ಮತ್ತೆ ಹಗರಣಗಳು ಭುಗಿಲೆದ್ದಿರುವುದನ್ನು ಕಂಡು ಮುಜುಗರ ಪಟ್ಟರೂ ಉದಾರೀಕರಣವಾದಿಗಳು ಇದಕ್ಕೆ ಈ ಹಿಂದೆ ಇದ್ದ ಲೈಸೆನ್ಸ್-ಪರ್ಮಿಟ್ ರಾಜ್ಯಭಾರವೇ ಕಾರಣ ಎಂದು ವಾದಿಸುತ್ತಾರೆ. ಇವರ ತರ್ಕದ ಪ್ರಕಾರ ಆರ್ಥಿಕ ವಲಯದಲ್ಲಿ ನಿಯಮ-ಹತೋಟಿಗಳು ಕೈಯಲ್ಲಿರುವುದರಿಂದ ಸರ್ಕಾರಿ ಭ್ರಷ್ಟಾಚಾರ ಹರಡಿದೆ. ಒಂದು ಲೈಸೆನ್ಸ್ ಅಥವಾ ಪರ್ಮಿಟ್ ಪಡೆಯಬೇಕಾದರೆ ವಿವಿಧ ಹಂತಗಳಲ್ಲಿ ಲಂಚಗಳನ್ನು ಕೊಡಬೇಕು. ನಿಜ, ಲೈಸೆನ್ಸ್ ವ್ಯವಸ್ಥೆಯಲ್ಲಿ ಲೈಸೆನ್ಸ್, ರಿಯಾಯ್ತಿ ಇತ್ಯಾದಿಗಳನ್ನು ಪಡೆಯಲು ದೊಡ್ಡ ಬಂಡವಾಳಶಾಹಿ ಗುಂಪುಗಳು ಭಾರಿ ಹಣ ಚೆಲ್ಲುತ್ತಿದ್ದವು. ಆದರೆ ಉದಾರೀಕರಣದ ನಂತರ ಇಂತಹ ಭ್ರಷ್ಟಾಚಾರವನ್ನು ಮೀರಿಸಿದ ಭ್ರಷ್ಟಾಚಾರ ಆರಂಭವಾಗಿದೆ.

ಉದಾರೀಕರಣದ ಮೊದಲಿನ ಮತ್ತು ನಂತರ ಭ್ರಷ್ಟಾಚಾರದಲ್ಲಿ ವ್ಯತ್ಯಾಸವೇನಿದೆ?

ಉದಾರೀಕರಣದ ಹಿಂದಿನ ವರ್ಷಗಳಲ್ಲಿ, ವಿಶೇಷವಾಗಿ 80 ರ ದಶಕದ ಮಧ್ಯಭಾಗದ ವರೆಗೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಮೂಲವೆಂದರೆ ದೊಡ್ಡ ಬಂಡವಾಳಶಾಹಿ ಗುಂಪುಗಳು ಯಾವುದೋ ಲೈಸೆನ್ಸ್‌ನ್ನು ಪಡೆಯಲೋ ಅಥವಾ ನಿಯಮಾವಳಿಯನ್ನು ತಪ್ಪಿಸಲೋ ಸಂಬಂಧಪಟ್ಟ ಮಂತ್ರಿ, ಅಧಿಕಾರಶಾಹಿಗಳಿಗೆ ಲಂಚ ತಿನ್ನಿಸುತ್ತಿದ್ದರು. ಆದರೆ ಈಗ ಉದಾರೀಕರಣ ಮತ್ತು ಹತೋಟಿ ರದ್ದತಿಗಳ ನಂತರ ಸರ್ಕಾರದ ಇಡೀ ಧೋರಣೆಯೇ **ಮಾರಾಟಕ್ಕೆ ಇಡಲ್ಪಟ್ಟಿದೆ**. ದೇಶೀ ಮತ್ತು ವಿದೇಶಿ ಬಂಡವಾಳಿಗರು ರಾಜರೋಷವಾಗಿ ಅತಿ ಹೆಚ್ಚು ಹರಾಜು ಕೂಗಿ ಇಡೀ ಒಂದು ಉದ್ಯಮಕ್ಕೆ ಸಂಬಂಧಪಟ್ಟಂತೆ ಧೋರಣೆಗಳನ್ನೇ ಬದಲಿಸುವಂತೆ ಮಾಡಲು ಅವಕಾಶವಿದೆ ಈಗ? ಸರಿಯಾದ 'ಬೆಲೆ' ಕೊಟ್ಟರೆ ರಾತ್ರಿ ಬೆಳಗಾಗುವಷ್ಟರಲ್ಲಿ ಹೀಗೆ ಧೋರಣೆಗಳೇ ಬದಲಾಗುತ್ತವೆ! ಟೆಲಿಕಾಂ



ವಲಯದಲ್ಲಿ ಇದು ಅತ್ಯಂತ ನಗ್ನ ರೀತಿಯಲ್ಲಿ ನಡೆಯಿತು. ಈಗ ವಿದ್ಯುತ್, ತೈಲ ಮತ್ತಿತರ ಪ್ರಮುಖ ವಲಯಗಳಲ್ಲಿ ಮುಂದುವರೆಯುತ್ತಿದೆ. ದೊಡ್ಡ ಭಾರತೀಯ ಬಂಡವಾಳಿಗರು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಯಾವ ಕೂಟ ಎಷ್ಟು ಹಣ ಕೊಡುತ್ತದೆ ಎಂಬುದರ ಆಧಾರದಲ್ಲಿಯೇ ಈ ಎಲ್ಲಾ ವಲಯಗಳಲ್ಲಿ ಧೋರಣೆಗಳು ನಿರ್ಧಾರವಾಗುತ್ತವೆ ಅಥವಾ ಬದಲಾಗುತ್ತವೆ. ಸರ್ಕಾರದ ಎಲ್ಲಾ ಸಂಸ್ಥೆಗಳು ದೊಡ್ಡ ಬಂಡವಾಳಕ್ಕೆ ಅಡಿಯಾಳಾಗಿವೆ. ಭಾರತದಲ್ಲಿ ಕೂಡಾ ಥೈಲಾಂಡ್, ಫಿಲಿಪ್ಪೈನ್ಸ್, ಇಂಡೋನೇಶ್ಯಾಗಳಂತೆ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಬಾಲಬಡುಕ ಬಂಡವಾಳಶಾಹಿ ಆಟಗಳಿಗೆ ಮುಕ್ತ ಅವಕಾಶ ದೊರಕುತ್ತಿರುವುದು ಎಲ್ಲರ ಗಮನಕ್ಕೆ ಬರುತ್ತಿದೆ.

ಹಿಂದೆ ಭ್ರಷ್ಟಾಚಾರದ ವಿರುದ್ಧ 'ಧರ್ಮಯುದ್ಧ' ನಡೆಸಿದ್ದ ಅರುಣ್ ಶೌರಿ ಈಗ ಶೇರು ಮಾರಾಟ ಮಂತ್ರಿಯಾಗಿ ಸಂಸತ್ತಿನ ಒಳಗೆ, ಹೊರಗೆ ಬಾಲ್ಕೋವನ್ನು ಖಾಸಗಿ ಕಂಪನಿಗೆ ಮಾರಿದುದರ ಗುಣಗಾನ ಮಾಡುತ್ತಿರುವುದು ತಮಾಷೆಯೆನಿಸುತ್ತದೆ. ಇದಾದ ಕೂಡಲೇ ತೆಹಲ್ಕಾ ಟೇಪುಗಳು ಹೇಗೆ ಸರ್ಕಾರದ ಎಲ್ಲಾ ಮಟ್ಟಗಳಲ್ಲಿ ಲಂಚಗಳ, ಕಮಿಷನ್‌ಗಳ ವಾಣಿಜ್ಯ ವ್ಯಾಪಕವಾಗಿ ಹರಡಿದೆ ಎಂದು ಉದಾಹರಣೆ ಸಹಿತ ಚಿತ್ರಿಸಿದವು. ಇದಾದ ನಂತರ ಬಾಲ್ಕೊ ವ್ಯವಹಾರದಲ್ಲೂ ಲಂಚಗಳು, ಕಮಿಷನ್‌ಗಳು, ಪಕ್ಷಕ್ಕೆ 'ಹಣ' ಇರಲಿಲ್ಲ ಎಂದು ನಂಬುವ ಯಾವ ನಾಗರೀಕನು ಭಾರತದಲ್ಲಿ ಇರಲಿಕ್ಕಿಲ್ಲ.

ಭ್ರಷ್ಟಾಚಾರದ ಅವಕಾಶ ವಿಸ್ತರಿಸಿದೆ

ಉದಾರೀಕರಣದ ಪ್ರಗತಿ ಉನ್ನತ ಸ್ಥಾನಗಳಲ್ಲಿ ಹೊಲಸುತನ, ಭ್ರಷ್ಟಾಚಾರಕ್ಕೆ ಅವಕಾಶವನ್ನು ಅಪಾರವಾಗಿ ವಿಸ್ತರಿಸಿದೆ. ಕೆಲವು ವರ್ಷಗಳ ಹಿಂದೆ, 1995 ರಲ್ಲಿ ನರಸಿಂಹ ರಾವ್ ಸರ್ಕಾರದಡಿ ಸಾರ್ವಜನಿಕ ವಲಯದ ಎನ್.ಎಂ.ಡಿ.ಸಿ.(ರಾಷ್ಟ್ರೀಯ ಗಣಿ ಅಭಿವೃದ್ಧಿ ನಿಗಮ) ನಡೆಸುತ್ತಿದ್ದ ಬೈಲಾಡಿಲಾ ಒಂದು ಕಬ್ಬಿಣದ ಅದಿರಿನ ಗಣಿಯನ್ನು ಒಂದು ದೇಶೀ ಮತ್ತು


ಪುಟ 9 ಕ್ಕೆ

ಪಶ್ಚಿಮ ಬಂಗಾಳ: ಮ…

ಬಂಡವಾಳಗಾರರ ಕಣ್ಣು ಕೆಂಪಾಗಿದೆ. ಮಾಜಿ ಭೂಮಾಲೀಕರ ಚಡಪಡಿಕೆ ಹೆಚ್ಚಾಗಿದೆ. ಸುಲಿಗೆಕೋರರ ತಾಳ್ಮೆ ಮಿತಿ ಮೀರುತ್ತಿದೆ. ಕಾರಣ ಪಶ್ಚಿಮ ಬಂಗಾಳ! ಅಲ್ಲಿ ಎಡರಂಗ ಸರ್ಕಾರದ 24 ವರ್ಷಗಳ ಆಡಳಿತವು ದೀನ ದಲಿತರ, ಬಡಬಗ್ಗರ ಕೂಲಿಗಾರರ, ಕಾರ್ಮಿಕರ, ಬಡ ರೈತರ- ಒಟ್ಟಾರೆ ಎಲ್ಲಾ ದುಡಿಯುವ ಜನರ ಬದುಕಿಗೆ ಹೊಸ ದಿಗಂತ ತೋರಿಸಿದೆ. ಬೆಳ್ಳಿ ಚುಕ್ಕಿಯಾಗಿ ಬೆಳಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಜಾಸತ್ತೆಯು ಬೇರು ಆಳ್ಕಳಿಯುತ್ತಿದೆ. ಸಾಮಾನ್ಯ ಜನ ಡೋಂಗಿ ಪಕ್ಷಗಳ ಬಣ್ಣ ಬಯಲು ಮಾಡುತ್ತಿದ್ದಾರೆ. ಹಣ ಹೆಂಡಗಳ ಹೊಳೆ ಹರಿಸಿ ಓಟು ಕೊಳ್ಳುವ ಪದ್ಧತಿಗೆ ತಿಲಾಂಜಲಿ ಇತ್ತಿದ್ದಾರೆ. ಅಕ್ಷರಸ್ಥರು ಮತ್ತು ವಿದ್ಯಾವಂತರ ಸಂಖ್ಯೆ ಅಲ್ಲಿ ಹೆಚ್ಚು. ಆಲೋಚಿಸಿ ಮತ ನೀಡುವ ಜನರ ಸಂಖ್ಯೆಯೇ ಬಹುಪಾಲು. ಈಗ ಮತ್ತೆ ವಿಧಾನಸಭಾ ಚುನಾವಣೆ ಬರುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿ ಸಾಮಾನ್ಯವಾಗಿದ್ದರೆ ಜನ ಮತ್ತೆ ಎಡರಂಗವನ್ನು ಅಧಿಕಾರಕ್ಕೆ ತರುವುದು ಖಂಡಿತಾ. ಅದಕ್ಕೆ ಬೇರೊಂದು ಉಪಾಯ ಹೂಡಲೇಬೇಕು. ಹೇಗಾದರೂ ಮಾಡಿ 'ನಾನು' ಅಧಿಕಾರಕ್ಕೆ ಬರಬೇಕು. ದೇಶದ ಪ್ರಜಾಪ್ರಭುತ್ವದ ರಕ್ಷಣೆಯ ಕೋಟೆಯಂತಿರುವ ಪ.ಬಂಗಾಳದಲ್ಲಿ ಎಡರಂಗ ಸರ್ಕಾರವನ್ನು ತೊಲಗಿಸಬೇಕು. ಇದು ಪಶ್ಚಿಮ ಬಂಗಾಳದ ಪುಂಡ ಪೋಕರಿಗಳ ಮತ್ತು ಗೂಂಡಾಗಳಿಗೆ ನಾಯಕತ್ವ ನೀಡುತ್ತಿರುವ ಮಮತಾ ಬ್ಯಾನರ್ಜಿ ಆಲೋಚನೆ, ಅಲ್ಲ ದುರಾಲೋಚನೆ. ಹಿಂಸೆಯನ್ನು ಪ್ರಚೋದಿಸುತ್ತಾ, ಜನಸಾಮಾನ್ಯರಲ್ಲಿ ಭಯೋತ್ಪಾದನೆ ಹುಟ್ಟುಹಾಕಿ ಅವರು ಮತಗಟ್ಟೆಗೆ ಬರದಂತೆ ನೋಡಿಕೊಂಡರೆ ಸಾಕು. ಆಗ 'ನಾನು' ಮುಖ್ಯಮಂತ್ರಿಯಾಗುವುದು ಸಾಧ್ಯ ಎಂಬ ಕನಸು ವೈದ್ಯವೃತ್ತಿಯ ಸುಳ್ಳು ಪದವಿ ಪತ್ರ ಹೊಂದಿರುವ ಮಮತಾಳದು. ದುಡಿಯುವ ವರ್ಗದ ನಾಯಕಿ ಗೀತಾ ಮುಖರ್ಜಿ ಸತತವಾಗಿ ಗೆದ್ದು ಬರುತ್ತಿದ್ದ ಪೆನ್‌ಸುಕರಾ ಲೋಕಸಭಾ ಕ್ಷೇತ್ರದಲ್ಲಿ ಎಡರಂಗದ ಅಭ್ಯರ್ಥಿ ಸೋಲು ಕಂಡದ್ದು ಮಮತಾಳ ಈ ಹಿಂಸಾತಂತ್ರಗಳಿಂದಲೇ ಎಂಬುದು ಈಗಾಗಲೇ ಜಗಜ್ಜಾಹೀರಾಗಿದೆ. ಇದರಿಂದ ಸ್ಫೂರ್ತಿ(?) ಪಡೆದ ಬಂಡವಾಳಿಗರ ಭೂಮಾಲೀಕರ ಕಣ್ಮಣಿ ಇಡೀ ಪಶ್ಚಿಮ ಬಂಗಾಳದಲ್ಲಿ ಹಿಂಸೆಯ ತಾಂಡವ ನೃತ್ಯ ನಡೆಸುವ ತರದೂದಿನಲ್ಲಿದ್ದಾಳೆ. ಎಡರಂಗದ ವಿರುದ್ಧ ಕೇವಲ ಭಾರತದ ಬಂಡವಾಳಿಗರು ಮತ್ತು ಭೂಮಾಲೀಕರು ಮಾತ್ರವಲ್ಲದೆ ವಿಶ್ವದ ಸುಲಿಗೆಕೋರ ಸಾಮ್ರಾಜ್ಯಶಾಹಿಗಳೂ, ಬಹುರಾಷ್ಟ್ರೀಯ ಕಂಪನಿಗಳು ಕತ್ತಿ ಮಸೆಯುತ್ತಿರುವ ಸಂಗತಿ ಎಲ್ಲರಿಗೂ ತಿಳಿದದ್ದೆ. ಅವರೂ ಕೂಡ ಮಮತಾಳಿಗೆ ಎಲ್ಲಾ ರೀತಿಯ ಕುಮ್ಮಕ್ಕು ಬೆಂಬಲ ನೀಡುತ್ತಿರುವ ಸುದ್ದಿ ಈಗ ಗುಟ್ಟಾಗಿ ಉಳಿದಿಲ್ಲ. ಅವರ ನಿಯಂತ್ರಣದ ಎಲ್ಲಾ ಮಾಧ್ಯಮಗಳೂ ಎಡರಂಗದ ವಿರುದ್ಧ ವಿಷಪೂರಿತ ಸುದ್ದಿಗಳು, ಹಸಿ ಸುಳ್ಳುಗಳ, ಅರ್ಧಸತ್ಯಗಳ ಮಹಾಪೂರವನ್ನೇ ಹರಿಸುತ್ತಿವೆ. ಅಮೇರಿಕಾದ ರಾಯಭಾರಿಯೇ ಅಲ್ಲಿಗೆ ಭೇಟಿ ನೀಡಿ, ಈ ಎಲ್ಲಾ ಪಿತೂರಿಗಳಿಗೆ ಕುಮ್ಮಕ್ಕು ನೀಡಿ, ನಿರ್ದೇಶಿಸಿದ್ದಾನೆ ಎಂದರೆ ಅದರ ಪ್ರಮಾಣ ಅರ್ಥವಾಗದೇ?

ಪಶ್ಚಿಮ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ

ಕಾನೂನು ಮತ್ತು ವ್ಯವಸ್ಥೆ ಹದಗೆಡುತ್ತಿದೆ. ಅಲ್ಲಿ ಜನ ಬದುಕುವುದೇ ಕಷ್ಟವಾಗುತ್ತಿದೆ ಎಂಬ ದೊಡ್ಡ ಅಪಪ್ರಚಾರವನ್ನು ತೃಣಮೂಲ ಕಾಂಗ್ರೆಸ್ ಬಿಜೆಪಿಯೊಡನೆ ಸೇರಿಕೊಂಡು ನಡೆಸುತ್ತಿದೆ. ಪ್ರದೇಶ ಕಾಂಗ್ರೆಸ್ ಕೂಡ ದನಿ ಗೂಡಿಸುತ್ತಿದೆ. ಭಾವೋದ್ರೇಕದ ಭಾಷಣಗಳನ್ನು ಮಾಡಿ ಪುಂಡ ಪೋಕರಿಗಳನ್ನು ಹುರಿದುಂಬಿಸಿ ಸಾಮಾನ್ಯ ಜನರ ಮೇಲೆ ಧಾಳಿ ನಡೆಸಲು ವ್ಯವಸ್ಥಿತವಾದ ಪ್ರಯತ್ನ ಅಲ್ಲಿ ಸತತವಾಗಿ ಮಾಜಿಯಾಗಿರುವ ಕೇಂದ್ರ ರೈಲ್ವೆ ಮಂತ್ರಿಯಿಂದ ನಡೆಯುತ್ತಿದೆ.



ಎಡರಂಗ ಅಧಿಕಾರಕ್ಕೆ ಬಂದ ಮೇಲೆ ಜಾ… ಮಾಡಿದ ಯಶಸ್ವೀ ಭೂಸುಧಾರಣೆಯಿಂದಾ… ಬಡರೈತರು ಭೂಹೀನ ಕೃಷಿಕೂಲಿಗಾರರು ಅಲ್ಪಸ್ವ… ಭೂಹಿಡುವಳಿ ಪಡೆಯಲು ಸಾಧ್ಯವಾಗಿದೆ. … ಮೂಲಕ ಇಂದು ಪಶ್ಚಿಮ ಬಂಗಾಳ ಆಹಾ… ಉತ್ಪಾದನೆ-ಭತ್ತದ ಉತ್ಪಾದನೆ-ಯಲ್ಲಿ ಪಂಜಾಬ… ರಾಜ್ಯವನ್ನು ಮೀರಿಸಿ ಮೊದಲನೇ ಸ್ಥಾನ ಪಡೆದ… ಮತ್ತೆ ಜಮೀನುಗಳನ್ನು ಕಬಳಿಸುವ ಕುತಂ… ಹೂಡುತ್ತಿದ್ದಾರೆ. ಮಾಜಿ ಭೂಮಾಲಿಕರು ಈ… ಮಮತಾಳ ಸಹಾಯ ಪಡೆದು ಮ… ಜಮೀನುಗಳನ್ನು ಕಬಳಿಸುವ ಕುತಂತ್ರ ಹೂಡುತ್ತಿದ್ದಾ… ಮಾಜಿ ಭೂಮಾಲೀಕರಿಗೂ ನಾಯಕತ್ವವನ್ನು … ಮಹಾಮಾರಿ ನೀಡುತ್ತಿದ್ದಾಳೆ. ಇಂದು ಬಂಗಾಳದ… ನಡೆಯುತ್ತಿರುವ ಹೆಚ್ಚಿನ ಘರ್ಷಣೆಗಳಿಗೆ ಮಾ… ಭೂಮಾಲಿಕರ ಪುಂಡಾಟಗಳೇ ಕಾರಣ. ಇದೊಂ… ನಿಜವಾದ ವರ್ಗ ಹೋರಾಟವಾ… ಪರಿವರ್ತಿತವಾಗುತ್ತಿದೆ.

ಇಷ್ಟೆಲ್ಲಾ ಇದ್ದಾಗ್ಯೂ ಪಶ್ಚಿಮ ಬಂಗಾಳದ… ಹಿಂದೆಂದಿಗಿಂತಲೂ ರಾಜಕೀಯ ಘರ್ಷಣೆ ಕಳ್ಳತ… ಮತ್ತು ದರೋಡೆಗಳ ಸಂಖ್ಯೆ ಗಣನೀಯವಾ… ಕಡಿಮೆಯಾಗುತ್ತಿವೆ.

	1998	1999	2000
ರಾಜಕೀಯ ಘರ್ಷಣೆಗಳು	827	646	507
ದರೋಡೆ	393	344	[illegible]
ಕಳ್ಳತನ	759	756	611

ಜನಸಾಮಾನ್ಯರ ಸಹಕಾರ, ಪಕ್ಷ…

ಯಾರ ತಲೆಬುರುಡೆ - ಯಾರದೋ ಮೂಳೆ

ಚುನಾವಣೆ ಸಮೀಪಿಸುತ್ತಿರುವಂತೆ ಮಮತಾ ಬ್ಯಾನರ್ಜಿ ಈಗ ಕಂಗಾಲು, ಆಕೆಯ ಒಂದಂಶದ ಕಾರ್ಯಕ್ರಮ ಎಡರಂಗ ಸರ್ಕಾರವನ್ನು 'ಉರುಳಿಸುವುದು' ಅದಕ್ಕಾಗಿ ಪಡುತ್ತಿರುವ ಪಾಡು ಅಷ್ಟಿಷ್ಟಲ್ಲ. ಮಾಡಬಾರದ ಕೆಲಸಗಳು, ಆಡಬಾರದ ಆಟಗಳು ಒಂದೆರಡಲ್ಲ. ಯಾರ ಕೈ ಅಥವಾ ಕಾಲು ಹಿಡಿಯಲೂ ಸಿದ್ಧಳೀಗ. ಘನಿಖಾನ್ ಚೌಧರಿ ಅಥವಾ ನಕ್ಸಲೀಯರೋ… ಯಾರ ತಲೆ ಬುರುಡೆಯೋ, ಮೂಳೆಯೋ, ಅಲ್ಲಿನ ಪತ್ರಿಕೆಗಳೋ… ಬೋಟೋ ಅಂಗಾರಿಯಾದ ಘಟನೆ ಮಮತಾ ಬ್ಯಾನರ್ಜಿ ಕುತಂತ್ರಗಳನ್ನು ಮತ್ತೆ ತೆರೆದಿಟ್ಟಿದೆ. ಈ ಬಗ್ಗೆ ಕೋಲ್ಕತ್ತಾದಿಂದ ಪತ್ರಿಕೆಯ ಬರಹಗಾರ ಜಿ.ಎಸ್.ಮಣಿಯವರ ವರದಿ

ತೈಲದ ಬೆಲೆಯೇರಿಸಲು ಎನ್‌ಡಿಎ ಸಭೆಯಲ್ಲಿ ನಿರ್ಧರಿಸಿದಾಗ ಸುಮ್ಮನೆ ಇದ್ದು ಹೊರಗೆ ಬಂದು ನಂತರ ಪ್ರತಿಭಟಿಸಿ ರಾಜಿನಾಮೆ ಪತ್ರ ಕಳುಹಿಸಿದ ನಾಟಕ ಜನಗಳಿಗೆ ತಿಳಿದುಹೋಗಿ ಮಮತಾ ಬ್ಯಾನರ್ಜಿಯ ಬೆಂಬಲ ತೀವ್ರವಾಗಿ ಕುಸಿಯತೊಡಗಿದಾಗ ಆಕೆ ಹಲವು ನಾಟಕಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಆಕೆಯ ಬೆಂಗಾವಲಾಗಿ ಆಕೆಯ ಪ್ರಚಾರಕರಾಗಿರುವ ಬೂರ್ಜ್ವಾ ಪತ್ರಿಕೆಗಳು 'ಇಲಿ ಹೋದರೆ ಹುಲಿ ಹೋಯಿತು' ಎಂದು ಬರೆಯಲು ಕಾತರರಾಗಿ ಪ್ರತಿದಿನವೂ ಕಾಯುತ್ತಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಈ ಸಾರಿ ವಿಧಾನಸಭೆಯ ಚುನಾವಣೆಯಲ್ಲಿ ಎಡರಂಗವೇ ಗೆಲ್ಲುವುದು ಎಂದು ಮಮತಾ ಬ್ಯಾನರ್ಜಿಗೂ ಗೊತ್ತಾಗಿದೆ. ಆದ್ದರಿಂದಲೇ ಆಕೆ ಹತಾಶರಾಗಿ ಷಡ್ಯಂತ್ರಗಳ ರಚನೆಯಲ್ಲಿ ತೊಡಗಿರುವುದು. ಇತ್ತೀಚಿಗೆ **ಬೋಟೋ ಅಂಗಾರಿಯ ಎಂಬ ಹಳ್ಳಿಯಲ್ಲಿ ನಡೆದ ಘಟನೆ ಮತ್ತು ಅದರ ನಂತರ ನಡೆದ ರಾಜಕೀಯ ವಿದ್ಯಮಾನಗಳು ಹೇಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸಾಮ್ರಾಜ್ಯಶಾಹಿಗಳೊಡನೆ ಕೈಗೂಡಿಸಿ ಎಡರಂಗದ ವಿರುದ್ಧ ಶಕ್ತಿಗಳನ್ನೆಲ್ಲ ಕ್ರೋಢೀಕರಿಸಿ ಅನ್ಯಾಯವನ್ನೇ ಮೆರೆಯುವ ಹುನ್ನಾರದಲ್ಲಿ ತೊಡಗಿದೆ ಎಂಬುದಕ್ಕೆ ಉತ್ತಮ ಉದಾಹರಣೆ.**

ತಲೆಬುರುಡೆ, ಎಲುಬು ಹಿಡಿದು ಪ್ರಧಾನಿ ಬಳಿಗೆ

ಬೋಟೋ ಅಂಗಾರಿಯಾದ ಅಬ್ದುಲ್ ರೆಹಮಾನ್ ಮೆಂಡಲ್ ಎಂಬಾತನ ಎರಡಂತಸ್ತಿನ ಮನೆಯೊಂದು ಬೆಂಕಿಗೆ ಆಹುತಿಯಾಯಿತು. ಆತ ಪೋಲೀಸ್ ಸ್ಟೇಷನ್ನಿನಲ್ಲಿ ಒಂದು ದೂರು ನೀಡಿದ. ತಮ್ಮ ಮನೆಯಲ್ಲಿ ಹಲವಾರು ಜನರಿದ್ದರು. ಅವರೆಲ್ಲಾರನ್ನೂ ನರಮೇಧ ಮಾಡಲಾಗಿದೆ ಎಂದು. ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಇದನ್ನು ದೊಡ್ಡದಾಗಿ ಬಿಂಬಿಸಿ ಪ್ರಚಾರ ಪಡೆಯಲು ಪ್ರಯತ್ನಿಸಿತು. ಪೋಲೀಸರ ತನಿಖೆಯ ಪ್ರಕಾರ ಈ ಮನೆಯೊಳಗೆ ಯಾರೂ ಸತ್ತ ಕುರುಹುಗಳೇ ಇಲ್ಲ. ಆದರೂ ಮಮತಾ ಬ್ಯಾನರ್ಜಿ ಒಂದು ತಲೆಬುರುಡೆ, ಹಲವು ಎಲುಬುಗಳು ಗುಂಡಿನ ಕವರ್‌ಗಳನ್ನು ಈ ಸ್ಥಳದಿಂದ ಸಂಗ್ರಹಿಸಿ (ಇಲ್ಲದಿರುವುದನ್ನು ಸಂಗ್ರಹಿಸುವುದರಲ್ಲಿ ಈಕೆ ನಿಸ್ಸೀಮೆ) ದೆಹಲಿಗೆ ಹೋಗಿ ಪ್ರದರ್ಶಿಸಿದರು. ಆಕೆಯ ಗೋಳಾಟಕ್ಕಾಗಿ ಕಾದಿರುವವರಂತೆ ಎನ್‌ಡಿಎಯ ಎಲ್.ಕೆ.ಅಡ್ವಾಣಿ ಒಂದು ನಿಯೋಗವನ್ನು ಕಳುಹಿಸಿಕೊಟ್ಟರು. ಈ ನಿಯೋಗ ಇಲ್ಲಿಗೆ ಬಂದು ಇನ್ನಷ್ಟು ಸುಳ್ಳುಗಳ ಫೋಟೋಗಳನ್ನು ಹೊತ್ತುಕೊಂಡು ದೆಹಲಿಗೆ ಹಿಂದಿರುಗಿ ಪಶ್ಚಿಮ ಬಂಗಾಳದಲ್ಲಿ ಕಾನೂನು ಸ್ಥಿತಿ ತೀರಾ ಹದಗೆಟ್ಟಿದೆ ಎಂದಿತು.

ಮಮತಾ ಬ್ಯಾನರ್ಜಿ ತಲೆಯ ಬುರುಡೆ, ಗುಂಡಿನ ಕವಚ ಇತ್ಯಾದಿಗಳನ್ನು ಮಾನ್ಯ ಪ್ರಧಾನ ಮಂತ್ರಿಗಳಿಗೂ ತೋರಿಸಿಯಾಯಿತು. ಅವರಿಂದ ಕ್ರಮ ಕೈಗೊಳ್ಳುವ ಬಗ್ಗೆ ಆಶ್ವಾಸನೆಯೂ ಬಂದಿದೆ!

ಈ ನಡುವೆ ಅಬ್ದುಲ್ ರಹಮಾನ್ ಮೊಂಡಲ್ ಅವರು ತೃಣಮೂಲ ಕಾಂಗ್ರೆಸ್ಸಿನ ಅತಿಥಿಗಳಾಗಿಬಿಟ್ಟರು. ಅವರನ್ನು ಪೋಲೀಸರು ಪ್ರಶ್ನಿಸಲೂ ಬಿಡಲಿಲ್ಲ; ಕೊನೆಗೆ ಅವರನ್ನು ಅವರ ಊರಿನಿಂದ ಕೊಲ್ಕತ್ತಾಗೆ ತರಲಾಯಿತು. (ತೃಣಮೂಲದ ಅತಿಥಿಗಳಾಗಿಯೇ)

ಪೋಲೀಸರ ತನಿಖೆಯ ಪ್ರಕಾರ ಮೊಂಡಲ್ ಅವರ ಮನೆ ಬೆಂಕಿಗೆ ಆಹುತಿಯಾಗಿದ್ದು ನಿಜ. ಅಲ್ಲಿ ಗುಂಡುಗಳು ಸ್ಫೋಟಿಸಿದ್ದೂ ನಿಜ. ಆದರೆ ಹೋರಾಟ ನಡೆಯಲಿಲ್ಲ. ಪೀಪಲ್ಸ್ ವಾರ್ ಗ್ರೂಪ್‌ನ ನಕ್ಸಲೀಯರ. ಶಸ್ತ್ರಾಸ್ತ್ರ ಸಂಗ್ರಹ ಸ್ಥಳ ಈ ಮನೆಯಾಗಿತ್ತು ಎಂದು ಗೊತ್ತಾಗಿದೆ. ಬೆಂಕಿ ತಗುಲಿದಾಗ ಗುಂಡುಗಳು ಸ್ಫೋಟಿಸಿದೆ. ಇದನ್ನು ಮಟ್ಟ ಹಾಕಲು ಸಿಪಿಐ(ಎಂ) ವಿರುದ್ಧ ದೂರು ನೀಡುವವರ ರಕ್ಷಣೆಯ ಮಹಾನ್ ಜವಾಬ್ದಾರಿ ಹೊತ್ತಿರುವ ಮಮತಾ ಬ್ಯಾನರ್ಜಿ ಸುಮ್ಮನಿರಲು ಸಾಧ್ಯವೇ?

ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಆಕೆ ಪ.ಬಂಗಾಳದಲ್ಲಿ ಸಂವಿಧಾನದ 356 ನೇ ವಿಧಿಯ ಪ್ರಕಾರ ರಾಷ್ಟ್ರಪತಿ ಆಡಳಿತ ಹೇರಬೇಕೆಂಬ ಬೇಡಿಕೆಯನ್ನು ಪುನಃ ಪುನಃ ಮಾಡಿದರು.

ಮೊಂಡಲ್ ಅವರು ಬಹಳ ನಿತ್ರಾಣೆಯಾಗಿದ್ದಾರೆ. ಆದ್ದರಿಂದ ಪೋಲೀಸರ ವಿಚಾರಣೆಯನ್ನು ತಡೆದುಕೊಳ್ಳಲಾರ ಎಂದು ತೃಣಮೂಲಿಗರು ಬಹಳ ದಿನಗಳವರೆಗೆ ಹೇಳಿಕೊಂಡು ಬಂದರು. ಇದೀಗ ಮೊದಲ ಸುತ್ತಿನ ವಿಚಾರಣೆಯನ್ನು ಪೋಲೀಸರು ಮಾಡಿದ್ದಾರೆ.

ತೃಣಮೂಲ ಕಾಂಗ್ರೆಸ್ಸು ಎಂತಹ ಹತಾಶ ಸ್ಥಿತಿಯನ್ನು ತಲುಪಿದೆ ಎಂಬುದಕ್ಕೆ ಈ ಘಟನೆ ಕನ್ನಡಿ ಹಿಡಿಯುತ್ತದೆ.

ನಕ್ಸಲೀಯರಾದರೂ ಪರವಾಗಿಲ್ಲ, ಸಿಪಿಐ(ಎಂ) ನ… ವಿರುದ್ಧವಾದರೆ ನಾವೂ ಅವರೊಡನೆ ಕೈ ಸೇರಿಸಲು ಸಿದ್ದ ಎಂಬ… ನಿಲುವು ಅವರಲ್ಲಿದೆ. ಇದಲ್ಲದೆ ಎಬಿಎ ಘನಿಖಾನ್ ಚೌಧರಿ ಎಂಬ… ಮಾಜಿ ರೈಲ್ವೆ ಮಂತ್ರಿಗಳ ನೇತೃತ್ವದಲ್ಲಿ ಕಾಂಗ್ರೆಸ್ಸನ್ನು ಒಡೆಯುವ… ಹುನ್ನಾರವನ್ನೂ ಮಮತಾ ಬ್ಯಾನರ್ಜಿ ಯಶಸ್ವಿಯಾಗಿ ನಡೆಸಿದ್ದಾರೆ. ಘನಿಖಾನ್‌ರು ಕಾಂಗ್ರೆಸ್ ಬಿಟ್ಟಾದರೂ ತೃಣಮೂಲದ ಜೊತೆ… ಸೇರಿ ಮಹಾಜೋತ್(ಮಹಾ ಒಕ್ಕೂಟ) ಮಾಡಿಕೊಳ್ಳುವ… ತರಾತುರಿಯಲ್ಲಿದ್ದರು. ಆದರೀಗ ಕಾಂಗ್ರೆಸ್ ಒಂದು ಗುಂಪ್… ಮಮತಾ ಬಣ ಸೇರಿದೆ. ಘನಿಖಾನ್‌ನ ಬೆಂಬಲಿಗರು ಸ್ಪರ್ಧಿಸುವಲ್ಲಿ… ಟಿಎಂಸಿ ಅಭ್ಯರ್ಥಿಗಳು ಇರುವುದಿಲ್ಲ ಎಂಬ ಸುದ್ದಿಯೂ ಪ್ರಕಟವಾಗಿದೆ.

ಹಿಂದೆ ಮಾಲ್ಡಾದಲ್ಲಿ ಕಂಪ್ಯೂಟರೀಕೃತ ಟಿಕೆಟ್ ಕಾಯ್ದಿರಿಸುವ… ಮುಂಗಟ್ಟೆಯನ್ನು ಘನಿಖಾನರಿಂದಲೇ ಉದ್ಘಾಟನೆ… ಮಾಡಿಸಲಾಯಿತು. ಅವರೊಡನೆ ಹಿಂದಿನ ಕಾಂಗ್ರೆಸ್ (ಈಗಿನ… ತೃಣಮೂಲ ವಿಧಾನಸಭಾ ಸದಸ್ಯ) ಸುಲ್ತಾನ್ ಅಹಮದ್ ಇದ್ದರು.

ತೃಣಮೂಲಿಗರ ಹೆದರಿಕೆ ಎಂತಹದ್ದೆಂದು ಇದರಿಂದ… ಗೊತ್ತಾಗುತ್ತದೆ. ಶತಾಯ ಗತಾಯ, ಯಾವುದೇ ಅನೈತಿ… ವಿಧಾನದಿಂದಲಾದರೂ ಪ.ಬಂಗಾಳದಲ್ಲಿ ವಾಮರಂಗವನ್ನು… ಅಧಿಕಾರದಿಂದ ಕಿತ್ತೊಗೆಯಬೇಕೆಂಬ ಏಕೈಕ ಉದ್ದೇಶವನ್ನು… ಅವರು ಪ್ರದರ್ಶಿಸುತ್ತಿದ್ದಾರೆ.

ಸುಳ್ಳು ಬರೆಯುವುದು ಅದೂ ಎಡರಂಗದ ವಿರುದ್ಧ

ಇಲ್ಲಿನ ಬೂರ್ಜ್ವಾ ಪತ್ರಿಕೆಗಳು (ಅದರಲ್ಲೂ ಇಂಗ್ಲೀಷ್ ಪತ್ರಿಕೆಗಳು) ಎಂತಹವೆಂದರೆ ಸುಳ್ಳು ಬರೆಯುವುದೇ ತಮ್ಮ ಧರ್ಮ, ಆದರೆ … ಸುಳ್ಳುಗಳು ವಾಮರಂಗದ ವಿರುದ್ಧವಾಗಿರಬೇಕು ಎಂಬ ತತ್ವವನ್ನು… ಮೈಗೂಡಿಸಿಕೊಂಡಿದ್ದಾರೆ.

ಸಿಪಿಐ(ಎಂ) ನಿಂದ ಸಿಡಿದು ಹೋಗಿರುವ ಸೈಪುದ್ದೀನ್… ಚೌಧರಿಯವರಿಗೆ ಯದ್ವಾತದ್ವಾ ಪ್ರಚಾರ ಸಿಗುತ್ತಿದೆ. ಆದರೆ ಎಲ್ಲೂ… ಜನ ಬೆಂಬಲವಿಲ್ಲದೆ ಅವರು ಕಾಂಗ್ರೆಸ್ ನವರ ನೆರವನ್ನು… ಪಡೆಯುತ್ತಿರುವುದು ಇದೇ ಪತ್ರಿಕೆಗಳನ್ನು ವರದಿಗಳನ್ನು ಚಿಕಿತ್ಸ… ಮನಸ್ಸಿನಿಂದ ನೋಡಿದರೆ ಗೊತ್ತಾಗುತ್ತದೆ.

ಮುಂಬರುವ ದಿನಗಳಲ್ಲೂ ಮಮತಾ ಬ್ಯಾನರ್ಜಿಯವ… ಹುನ್ನಾರಗಳು ಹೆಚ್ಚಾಗಲಿವೆ. ಕೇಂದ್ರದ ಎನ್‌ಡಿಎ ಅಮೆರಿಕನ… ಸಾಮ್ರಾಜ್ಯಶಾಹಿ, ಬೂರ್ಜ್ವಾ ಮತ್ತು ಅವರ ಸಮೂ… ಮಾಧ್ಯಮಗಳು ಎಲ್ಲವೂ ಸೇರಿಕೊಂಡು ವಾಮರಂಗದ ವಿರು… ಅನೈತಿಕ ಸಮರ ಹೂಡಲಿದೆ. ವಾಮರಂಗ ಇದಕ್ಕೆ ತಯಾ… ಗಿಂತಿದೆ. ಪ.ಬಂಗಾಳದ ಜನತೆ ವಾಮರಂಗದ ಹಿಂದೆ ಅಚಲರಾ… ನಿಂತಿದ್ದಾರೆ.

ತಾ ಹಿಂಸಾ ರಾಜಕೀಯ

ಕಾರ್ಯಕರ್ತರ ದಿಟ್ಟತನ ಹಾಗೂ ರಾಜ್ಯ ಆಡಳಿತೆಯ ಮುತುವರ್ಜಿಗಳಿಂದಾಗಿ ತೃಣಮೂಲ ಕಾಂಗ್ರೆಸ್‌ನ ಈ ಪುಂಡಾಟಿಕೆಯನ್ನು ತಡೆಹಿಡಿಯಲು ಸಾಧ್ಯವಾಗಿದೆ. ಗರ್ಬೆಟಾ, ಕೇಶಪುರ್, ಸಬಾಂಗ್, ಪಿಂಗಳಾ, ಖಾನಾಕುಲ್, ಗೋಘಾಟ್ ಮತ್ತು ಕೋತುಲ್‌ಪುರ್ ಪ್ರದೇಶಗಳು ಈಗಾಗಲೇ ಹೆಚ್ಚುಕಡಿಮೆ ಸಹಜಸ್ಥಿತಿಗೆ ಮರಳಿವೆ. ಕೆಲವು ಕುಖ್ಯಾತರನ್ನು ಹೊರತುಪಡಿಸಿ ವಿವಿಧ ಪಕ್ಷಗಳ ಕಾರ್ಯಕರ್ತರು ತಮ್ಮತಮ್ಮ ಹಳ್ಳಿಗಳಿಗೆ ಮನೆಗಳಿಗೆ ಹಿಂತಿರುಗಿದ್ದಾರೆ. ಈ ಪ್ರದೇಶದಲ್ಲಿ ಸಿಪಿಐ(ಎಂ) ಪಕ್ಷವು ನಡೆಸಿದ ಸಭೆಗಳಿಗೆ ದೊಡ್ಡ ಸಂಖ್ಯೆಯಲ್ಲಿ ಜನರು ಬಂದಿದ್ದಾರೆ. ಇದನ್ನು ಸಹಿಸದ ತೃಣಮೂಲ ಕಾಂಗ್ರೆಸ್ ಭಯೋತ್ಪಾದನೆಯ ಮತ್ತು ಹಿಂಸೆಯ ವಾತಾವರಣವನ್ನು ಮುಂದುವರಿಸುವ ಪಿತೂರಿಗಳನ್ನು ನಡೆಸುತ್ತಲೇ ಇದೆ. ಗರ್ಬೆಟಾದಲ್ಲಿ ಹಿಂಸೆಯ ಓಕುಳಿಯಾಡಿ ಅದರ ಸಂಪೂರ್ಣ ಹೊಣೆಯನ್ನು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹೊರಿಸಿ ರಾಷ್ಟ್ರಪತಿ ಆಡಳಿತವನ್ನು ಪಶ್ಚಿಮ ಬಂಗಾಳದ ಮೇಲೆ ಹೇರ ಬೇಕೆಂಬ ಒತ್ತಾಯವನ್ನು ತೃಣಮೂಲ ಕಾಂಗ್ರೆಸ್ ಮಾಡಿದೆ.

ಜನವರಿ ಮೂರರಂದು ನಡೆದದ್ದಾದರೂ ಏನು?

ಕಳೆದ ಎರಡೂವರೆ ವರ್ಷಗಳಿಂದ, ತೃಣಮೂಲ ಬಿಜೆಪಿ ಕೂಟವು ಮಿಡ್ನಾಪುರ, ಹೂಗ್ಲಿ ಮತ್ತು ಬಂಕುರಾ ಜಿಲ್ಲೆಗಳಲ್ಲಿ ಗಲಭೆಗಳನ್ನು ಎಬ್ಬಿಸುವ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಈ ಅಕ್ಕಪಕ್ಕದ ಜಿಲ್ಲೆಗಳಲ್ಲಿ 10000 ಎಕರೆಗಳಿಗಿಂತಲೂ ಹೆಚ್ಚಿನ ವ್ಯವಸಾಯ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರ/ರೈತರಿಗೆ ಎಡರಂಗ ಸರ್ಕಾರವು ವಿತರಿಸಿದೆ. ಆದರೆ ಭೂಮಾಲಕರು ತಮ್ಮ ಬಾಡಿಗೆ ಗೂಂಡಗಳನ್ನು ಬಿಟ್ಟು ತಮ್ಮ ಭೂಮಿಗಳನ್ನು ಹಿಂದಕ್ಕೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಈ ಭೂಮಾಲೀಕರಿಗೆ ತೃಣಮೂಲ ಕಾಂಗ್ರೆಸ್ ಆಸರೆ ನೀಡುತ್ತಿದೆ. ತನ್ನ ರಾಜಕೀಯದಾಟಕ್ಕೆ ಸಮಾಜಘಾತುಕ ಶಕ್ತಿಗಳನ್ನು ಸಂಘಟಿಸುತ್ತಿದೆ ಮತ್ತು ಈ ಶಕ್ತಿಗಳನ್ನೇ ಬಹುದೊಡ್ಡ ಸಂಖ್ಯೆಯಲ್ಲಿ ಪನ್‌ಸುಕುರಾ ಲೋಕಸಭಾ ಕ್ಷೇತ್ರದಲ್ಲಿ ಬಳಸಿದೆ ಕೂಡ. ಆದರೆ ಆನಂತರ ಸಿಪಿಐ(ಎಂ) ಹಾಗೂ ಎಡರಂಗವು ಪ್ರತಿಭಟನಾ ಚಳುವಳಿಯನ್ನು ಪ್ರಾರಂಭಿಸಿದಾಗ ಜನರಿಂದ ಅನಿರೀಕ್ಷಿತ ಅಪಾರ ಬೆಂಬಲ ದೊರೆಯಿತು.



ಎರಡೂವರೆ ವರ್ಷಗಳ ಈ ಅವಧಿಯಲ್ಲಿ ಕೇವಲ ಈ ಮೂರು ಜಿಲ್ಲೆಗಳಲ್ಲಿ ಎಡರಂಗದ 136 ಕಾರ್ಯಕರ್ತರು ಬಲಿಯಾಗಿದ್ದಾರೆ, ಅದರಲ್ಲೂ ಮಿಡ್ನಾಪುರ ಒಂದರಲ್ಲೇ 98 ಕಾರ್ಯಕರ್ತರು ಹತರಾಗಿದ್ದಾರೆ.

ಕಳೆದ ಆರು ತಿಂಗಳಲ್ಲಿ ಈ ಪ್ರದೇಶಗಳಲ್ಲಿ ಹಲವಾರು ಸಭೆಗಳನ್ನು ಸಿಪಿಐ(ಎಂ) ಸಂಘಟಿಸಿದೆ, 16 ಬೃಹತ್ ಬಹಿರಂಗ ಸಭೆಗಳನ್ನು ನಡೆಸಿದೆ ಪ್ರತಿಯೊಂದು ಸಭೆಯಲ್ಲಿ 50000 ಒಂದು ಲಕ್ಷಕ್ಕಿಂತಲೂ ಹೆಚ್ಚಿನ ಜನರು ಭಾಗವಹಿಸಿದ್ದಾರೆ. ದೊಡ್ಡ ಸಂಖ್ಯೆಯ ಸಮಾಜಘಾತುಕರು ಹಳ್ಳಿಗಳಿಂದ ಓಡಿ ಹೋಗಿದ್ದಾರೆ. ಸೂರು ಕಳೆದುಕೊಂಡ ಅನೇಕ ಹಳ್ಳಿಗರಿಗೆ ಸಿಪಿಐ(ಎಂ) ಪುನರ್ವಸತಿ ಕಲ್ಪಿಸಿಕೊಟ್ಟಿದೆ. ತೃಣಮೂಲ ಕಾಂಗ್ರೆಸ್‌ನಿಂದ ಪ್ರೇರಿತ ಪುಂಡರಿಂದ 1100 ಕ್ಕಿಂತಲೂ ಹೆಚ್ಚಿನ ಮನೆಗಳು ಸುಟ್ಟು ಭಸ್ಮವಾಗಿವೆ. ಕೇಶ್‌ಪುರದಲ್ಲಿ ಸಭೆ ನಡೆಸುವುದಾಗಿ ಮಮತಾ ಬ್ಯಾನರ್ಜಿ ಅನೇಕ ಬಾರಿ ಪ್ರಕಟ

ಪುಟ 8 ಕ್ಕೆ

ಅಲ್ಲಿ ಹಣ, ಅಸ್ತ್ರಗಳು, ಪಿತೂರಿ ಹೆಣೆಯುವ ಹಲವು ಕೈಗಳು - ಬೆಚ್ಚಿಬೀಳಿಸುವ ವರದಿಗಳು

ದೇಶ ವಿದೇಶಗಳ ಎಲ್ಲರ ಗಮನ ಈಗ ಪಶ್ಚಿಮ ಬಂಗಾಳದತ್ತ. ಮೇ ಮೊದಲ ವಾರದಲ್ಲಿನ ವಿಧಾನ ಸಭಾ ಚುನಾವಣೆಯಲ್ಲಿ ಎಡರಂಗ ಮತ್ತೆ ಜನರಿಂದ ಆಯ್ಕೆಯಾಗಿ ಆರನೆಯ ಅವಧಿಗೆ ನಿರಂತರ ಮುನ್ನಡೆಯುವುದೇ? ಈಗಾಗಲೇ ಇರುವ ವಿಶ್ವಾಸಾರ್ಹತೆಯನ್ನು ಗಟ್ಟಿಯಾಗಿ ಉಳಿಸುವುದೇ? ದುಡಿವ ಜನರ ಹಿತರಕ್ಷಣೆಗಾಗಿ, ಪ್ರಜಾಪ್ರಭುತ್ವ- ಧರ್ಮನಿರಪೇಕ್ಷತಾ ರಾಷ್ಟ್ರೀಯ ಸಮಗ್ರತೆಗಾಗಿ ಈ ಎಡರಂಗ ಸರ್ಕಾರ ಗೆಲ್ಲಬೇಕು. ಕೃಷಿ ಕೈಗಾರಿಕೆ, ಶಿಕ್ಷಣ ಜನರ ಕೈಗೆ ಅಧಿಕಾರ ನೀಡಿದ ಹೊಸ ಜನಪರ ಪರ್ಯಾಯ ರೂಪಿಸಿ ಜಗತ್ತನ್ನೇ ಬೆರಗುಗೊಳಿಸಿದ ಈ ಸರ್ಕಾರ ಬರಲೇಬೇಕು. ಬಹುತೇಕ ವಿಷಯಗಳು ಸರ್ಕಾರಗಳು ಹಗರಣದಲ್ಲಿ ಮುಳಿಗಿಟ್ಟ ಭ್ರಷ್ಟತೆ ಭ್ರಷ್ಟತೆಯಷ್ಟೇ ಬಂಢತನದಿಂದ ಇರುವಾಗ ಯಾವುದೇ ಹಗರಣ, ಭ್ರಷ್ಟತೆ ಇಲ್ಲದ ಹೊಳೆವ ದೃವತಾರೆ ಎಡರಂಗ ಸರ್ಕಾರ ಉಳಿಯಬೇಕು. ವಿನಾಶಕಾರಿ ಉದಾರೀಕರಣ, ಜಾಗತೀಕರಣ, ಖಾಸಗೀಕರಣಗಳಿಗೆ ತಡೆಗೋಡೆಯಂತಿರುವ ಎಡರಂಗದ ಜನಪ್ರತಿನಿದಿಗಳು, ರಾಜ್ಯದಲ್ಲಿಯೂ, ದೇಶದಲ್ಲಯೂ ಅವರ ಸಿಂಹ ಘರ್ಜನೆ ಮುಂದುವರಿಯಲೇಬೇಕು.... ಅನ್ಯಾಯದಲ್ಲಾಳಕೆ, ಗಲೆದರು ಸೆಣಸಾಟ ಶೋಷಣೆಯೋಗಿ ಸದಾ ಸ್ಪಂದಿಸುವ ದುಡಿಯುವ ಜನರ ಸರ್ಕಾರ ಉಳಿಯಲೇಬೇಕು.... ಇದು ನ್ಯಾಯಕ್ಕಾಗಿ, ಸಮಾನತೆಗಾಗಿ, ದೇಶದ ಉಳಿವಿಗಾಗಿ ನಿಂತ ಕೋಟಿ ಕೋಟಿ ಜನರ ದಿನನಿತ್ಯದ ಈ ನಿರೀಕ್ಷೆ ಕೇಳಿಕೆ, ಹಂಬಲ, ಬದ್ದತೆ, ಆದರೆ...

ದೇಶ ವಿದೇಶಗಳ ಜನವಿರೋಧಿ ವಿದ್ರೋಹಿಗಳ ಚಡಪಡಿಕೆ ತಾರಕ್ಕೇರುತ್ತಿದೆ. ವಾಶಿಂಗ್ಟನ್‌ನಿಂದ ವಾಜಪೇಯಿ ಕೂಟದವರೆಗೆ ಅಲ್ಲಿಂದ ಮಮತಾ ಬ್ಯಾನರ್ಜಿ ದೇಶದ ವಿದೇಶಿಯ ಪ್ರತಿಭೂಮಾಲಿಕ, ಬಂಡವಾಳಗಾರ ಪ್ರತಿಗಾಮಿಗಳವರೆಗೆ... ಎಡರಂಗ ಸರ್ಕಾರವನ್ನು ಉರುಳಿಸಲೇ ಬೇಕು. ಅದಕ್ಕಾಗಿ ಏನು ಮಾಡಲು ಸಿದ್ದ. ಎಂದು ನಿತ್ಯವೂ ಹಲವಾರು ಷಡ್ಯಂತ್ರಗಳನ್ನೂ ಪಿತೂರಿಗಳನ್ನೂ ನಡೆಸಲಾಗಿದೆ. ಬಿಜೆಪಿ ಕೂಟ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಪರ್ಯಾಯವಾಗಿರುವ ಮೂರನೇ ಶಕ್ತಿಗೆ ಸತ್ವ ನೀಡುತ್ತಿರುವುದೇ ಸಿಪಿಐ(ಎಂ) ಕೇರಳ, ಪ.ಬಂಗಾಳ ಎಡರಂಗ. ಈ ಶಕ್ತಿ ಇರುವುದೇ ಬಂಗಾಳದಲ್ಲಿ, ಅಂದರೆ ಇಲ್ಲಿಯೇ ಇದನ್ನು ನಿರ್ಮೂಲನಗೊಳಿಸಿದರೆ .. ಎಂಬುದು ಆಳುವವರ ಲೆಕ್ಕಾಚಾರ. ಅದಕ್ಕಾಗಿಯೇ ಏನೆಲ್ಲಾ ಸಿದ್ದತೆ ಎಷ್ಟೆಲ್ಲಾ ತಂತ್ರಗಳು...

ಈ ಭಾರಿ ಸಂಚುಗಳ ಬಗ್ಗೆ ಬೆಚ್ಚಿಬಿಳಿಸುವ ವಿವರಗಳೊಂದಿಗೆ ಈ ಸಂಚಿಕೆ ಸಿದ್ದಗೊಂಡಿದೆ. ಬಂಗಾಳದಲ್ಲಿ ನಡೆದಿರುವ ಹೋರಾಟ ಅಲ್ಲಿಯ ಜನರದಷ್ಟೇ ಅಲ್ಲ. ನಮ್ಮ ನಿಮ್ಮೆಲ್ಲರದ್ದು. ಅದಕ್ಕಾಗಿ ಇಡೀ ದೇಶವೇ ಎದ್ದುನಿಲ್ಲಬೇಕು. ಎಡರಂಗ ಕಟ್ಟಿದ್ದು ಜನತೆಯೇ ಉಳಿಸಿಕೊಳ್ಳಬೇಕಾದ್ದು ಜನತೆಯೇ.

- ಸಂ.

ಪಶ್ಚಿಮ ಬಂಗಾಳಕ್ಕೆ ಬೆಂಕಿ

ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶದಲ್ಲಿ ಜನ ಸಂಪರ್ಕದ ಹಿಡಿತ ಕಳೆದುಕೊಂಡಿರುವ ತೃಣಮೂಲ ಕಾಂಗ್ರೆಸ್ ಇದೀಗ ಅಕ್ರಮ ವ್ಯವಹಾರಗಳಿಂದ ಈ ಹಿಡಿತ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಜೊತೆಯಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಬೊಬ್ಬಿಡುವುದು. ಹೀಗೆ ಎರಡು ರೀತಿಯ ಮುಖವಾಡಗಳನ್ನು ತೃಣಮೂಲ ಕಾಂಗ್ರೆಸ್ ಅಳವಡಿಸಿಕೊಂಡಿದೆ. ಒಂದು ಬದಿಯಲ್ಲಿ ಗ್ರಾಮೀಣ ಬಡಜನತೆ ವಿರುದ್ಧ ಅಕ್ರಮಗಳನ್ನು ನಡೆಸುವುದು, ಮತ್ತೊಂದು ಬದಿಯಲ್ಲಿ ಸಿಪಿಐ(ಎಂ) ಅಕ್ರಮಗಳಿಂದ ಸಾಮಾನ್ಯ ಜನ ಜೀವನ ಅಸ್ತವ್ಯಸ್ತವಾಗಿದೆ ಎಂದು ಕೋಲಾಹಲ ನಡೆಸುವುದು. ತೃಣಮೂಲದ ಈ ಕೃತ್ಯಗಳಿಗೆ ಬಲಪಂಥೀಯ ಸುದ್ದಿ ಮಾಧ್ಯಮಗಳ ಬೆಂಬಲವಿದೆ.

ಜನವರಿ 4 ರಂದು ನಡೆದ ಕೊಲೆಗಳ ಬಗ್ಗೆ ಇದೀಗ ಬಹಿರಂಗವಾಗಿರುವ ವಿವರಗಳು ತೃಣಮೂಲ ಕಾಂಗ್ರೆಸ್ ಈ ಸುಳ್ಳು ಪ್ರಚಾರಗಳನ್ನು ಎಷ್ಟು ಸುಸೂತ್ರವಾಗಿ ನಡೆಸಿದೆ ಎಂದು ವ್ಯಕ್ತವಾಗುತ್ತಿದೆ. ತೃಣಮೂಲ ಕಾಂಗ್ರೆಸ್‌ನ ಸುಳ್ಳುಗಳನ್ನು ಪ್ರಚಾರ ಮಾಡಿ ವಿವರಣೆ ಪ್ರಕಟಿಸಿದ ಸುದ್ದಿ ಮಾಧ್ಯಮಗಳೀಗ ಇಕ್ಕಟ್ಟಿಗೆ ಸಿಲುಕಿಕೊಂಡಿವೆ.

ಸೋಟಾ ಮಾತಾಪಿತರು

ಮಿಡ್ನಾಪುರ ಜಿಲ್ಲೆಯ ಪಿನ್‌ಕ್ಲಾ ಗ್ರಾಮದಲ್ಲಿ ಹತ್ಯೆಯಾದ ನಾಲ್ಕು ಸಿ.ಪಿ.ಐ(ಎಂ) ಕಾರ್ಯಕರ್ತರ ಶವಗಳು ದೊರೆತವು. ಈ ನಾಲ್ಕು ಶವಗಳು ತಮ್ಮ ಕಾರ್ಯಕರ್ತರದೆಂದು ಹಾಗೂ ಇವರನ್ನು ಸಿಪಿಐ(ಎಂ) ಪಕ್ಷದವರು ಹತ್ಯೆ ಮಾಡಿರುತ್ತಾರೆ ಎಂದು ತೃಣಮೂಲ ಕಾಂಗ್ರೆಸ್‌ನವರು ಬೊಬ್ಬಿಡಲು ಆರಂಭಿಸಿದರು. ಇದಲ್ಲದೆ ಈ ನಾಲ್ಕು ಜನರ ಮಾತಪಿತರೆಂದು ಹೇಳಿ ಕೆಲವು ಜನರನ್ನು ಮುಂದೆ ಕರೆತಂದರು. ಆದರೆ ಶವಗಳು ಕೊಳೆತ ಕಾರಣ ಫೋರೇನ್ಸಿಕ್ ಪರೀಕ್ಷೆ ಮಾಡಲು ಸಾಧ್ಯವಾಗಲಿಲ್ಲ. ಈ ಪ್ರಯುಕ್ತ ಡಿ.ಎನ್.ಎ. ಪರೀಕ್ಷೆ ನಡೆಸಿ, ಅವರ ಮಾತಾಪಿತರೆಂದು ಹೇಳಿಕೊಳ್ಳುವವರ ರಕ್ತಕ್ಕೆ ಹೋಲಿಸಿ ಪರೀಕ್ಷೆ ನಡೆಸಬೇಕೆಂದು ತಜ್ಞರು ಹೇಳಿದರು. ಆದರೆ ಹಿಂತಿರುಗಿ ನೋಡಿದಾಗ ಮಾತಪಿತರೆಂದು ಹೇಳಿಕೊಂಡ ವ್ಯಕ್ತಿಗಳು ನಾಪತ್ತೆಯಾಗಿದ್ದರು ಹಾಗೂ ಈ ವೇಷ ತೊಡಿಸಿ ಜನರನ್ನು ಕರೆತಂದ ತೃಣಮೂಲ ಕಾಂಗ್ರೆಸ್ ವ್ಯಕ್ತಿಗಳೂ ನಾಪತ್ತೆಯಾಗಿದ್ದರು.

ಕಾರ್ಯಕರ್ತನನ್ನು ಕೊಲ್ಲಲೂ ಹಿಂಜರಿಯದವರು

ಐಜೂರ ಗ್ರಾಮದಲ್ಲಿ ತೃಣಮೂಲ ಕಾಂಗ್ರೆಸ್ ಸಭೆ ನಡೆಯುವ ಸ್ಥಳದಲ್ಲಿ ಸುಜಾದ್‌ದಾಸ್ ಎಂಬ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತನ ಕತ್ತು ತಿರುಗಿಸಿ ಕೊಲೆ ನಡೆಸಿದ್ದು ಕಾಣಲಾಯಿತು. ಸುಜಾದ್‌ದಾಸ್‌ನ ಹಂತಕರು ಸಿಪಿಐ(ಎಂ) ನವರೆಂದು ತೃಣಮೂಲದವರು ಪ್ರಚಾರಗೈದರು. ತೃಣಮೂಲದ ಈ ಹೇಳಿಕೆಗೆ ಮಾಧ್ಯಮಗಳು ತಾಳಹಾಕಲಾರಂಭಿಸಿದವು. ಆದರೆ, ತನಿಖೆಯಲ್ಲಿ ಸ್ಪಷ್ಟವಾಗಿ ಸುಜಾದ್‌ದಾಸ್‌ನ ಹತ್ಯೆ ಗೈದವರು ತೃಣಮೂಲ ಕಾಂಗ್ರೆಸ್‌ನವರೇ ಎಂದು ವ್ಯಕ್ತವಾಗಿದೆ. ಹತ್ಯೆ ಮಾಡಿದ ನಂತರ ಸುಜಾದ್‌ದಾಸ್‌ನ ಮೃತ ಶರೀರವನ್ನು ಊರಿನಲ್ಲಿಲ್ಲದ ಸಿಪಿಐ(ಎಂ) ಕಾರ್ಯಕರ್ತನೊಬ್ಬನ ಗುಡಿಸಲಿನ ಮುಂದೆ ಕೊಂಡೊಯ್ದು ಇಡಲಾಯಿತು. ಕೊಲೆ ಮಾಡಿದ ನಂತರ ಶವವನ್ನು ದೂರದಿಂದ ಎಳೆದು ತಂದ ಗುರುತುಗಳು ಭೂಮಿಯಲ್ಲಿ ಸ್ಪಷ್ಟವಾಗಿದ್ದವು. ಸುಜಾದ್‌ದಾಸ್ ಹತ್ಯೆಯಾಗುವ ಸ್ವಲ್ಪ ಸಮಯದ ಮೊದಲು ಅವರು ತೃಣಮೂಲ ಕಾಂಗ್ರೆಸ್ ಗೂಂಡಾಗಳ ಜೊತೆ ನಡೆದುಕೊಂಡು ಹೋದುದನ್ನು ಕಂಡವರಿದ್ದಾರೆ. ಸುಜಾದ್‌ದಾಸ್‌ನ ತಂದೆ ತಾಯಿಗಳು ದುಃಖದಿಂದ ಗೋಳಿಡುವ ಛಾಯಾಚಿತ್ರಗಳನ್ನು ಪತ್ರಿಕೆಯವರು ಪ್ರಕಟಿಸಿ ಮಾರ್ಕ್ಸಿಸ್ಟರ ಅಕ್ರಮಗಳಿಂದು ಹಲವು ಲೇಖನಗಳನ್ನು ಬರೆಯಲಾಯಿತು. ಈ ಲೇಖನಗಳನ್ನು ಪ್ರಕಟಿಸಲು ಮಾಧ್ಯಮಗಳು ಪೈಪೋಟಿಯಿಂದ ಮುಂದೆ ಬಂದವು.



ಮಾರ್ಕ್ಸಿಸ್ಟರ ಆಕ್ರಮಣ ಎಂಬ ಸುಳ್ಳು ಕತೆಗಳನ್ನು ಪ್ರಚಾರ ಮಾಡಲಿಕ್ಕಾಗಿಯೇ ತಮ್ಮ ಸ್ವಂತ ಕಾರ್ಯಕರ್ತನನ್ನು ಕೊಲೆಗೈಯಲು ತೃಣಮೂಲದವರು ಹಿಂಜರಿದಿಲ್ಲ. ಇದಕ್ಕಾಗಿ ಏನೇ ಮಾಡಲು ಅವರು ತಯಾರಿದ್ದಾರೆ.

24 ಪರಗಣ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕಾಂ। ಕಾಳಿಪದಾ ಹಲ್ದರ್‌ರವರನ್ನು ಜನವರಿ 11 ರಂದು ತೃಣಮೂಲ ಬಿಜೆಪಿ ಗೂಂಡಾಗಳು ಅಕ್ರಮವಾಗಿ ಕೊಲೆಗೈದರು. ಇದನ್ನು ಪ್ರತಿಭಟಿಸಿ ಆ ಪ್ರದೇಶದಲ್ಲಿ ಸಾರ್ವತ್ರಿಕ ಮುಷ್ಕರ ನಡೆಯಿತು. ಜನರು ಹೆಚ್ಚೆಚ್ಚಾಗಿ ಸಿಪಿಐ(ಎಂ)ಗೆ ಬೆಂಬಲ ನೀಡುವುದು ಉದಾಹರಣೆ ಮೂಲಕ ಕಂಡು ಬಂದಿತು.

ಗೂಂಡಾಗಳಿಗೆ ತರಬೇತಿ ನೀಡುತ್ತಿರುವ ಪೀಪಲ್ಸ್ ವಾರ್‌ಗ್ರೂಪ್ ನಕ್ಸಲೀಯರು

ತೃಣಮೂಲ-ಬಿಜೆಪಿ ಗೂಂಡಾಗಳ ಜೊತೆ ಪೀಪಲ್ಸ್ ವಾರ್ ಗ್ರೂಪ್ ಎಂಬ ನಕ್ಸಲೈಟ್ ಗುಂಪು ಸಿಪಿಐ(ಎಂ)ಗೆ ಎದುರಾಗಿ ಕೈಗೂಡಿಸಿ ಮುಂಚೂಣಿಯಲ್ಲಿದೆ. ಇವರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಶಕ್ತಿಯುತ ಸ್ಫೋಟಕಗಳನ್ನು ಉಪಯೋಗಿಸುತ್ತಿದ್ದಾರೆ. ಇವರು ದಟ್ಟಕಾಡುಗಳಲ್ಲಿ ತಮ್ಮ ಭೂಗತ ನೆಲೆಗಳನ್ನು ರಚಿಸಿರುತ್ತಾರೆ. ಇಲ್ಲಿಗೆ ಪೊಲೀಸರಾಗಲಿ, ತನಿಖಾ ದಳದವರಾಗಲಿ ಪ್ರವೇಶಿಸಲು ಸಾಧ್ಯವಿಲ್ಲದಷ್ಟು ಪ್ರದೇಶ

ಪುಟ 8 ಕ್ಕೆ

...ಎಡರಂಗ ಉರುಳಿಸಲು ಭಾರೀ ಸಂಚು

ಪುಟ 7 ರಿಂದ

ಮಾಡಿದ್ದರೂ, ಅದನ್ನು ನಡೆಸಲಾಗಿರಲಿಲ್ಲ. ಜನವರಿ 3, 2001 ರಂದು ಅಲ್ಲೊಂದು ಬಹಿರಂಗ ಸಭೆಯನ್ನು ನಡೆಸಲಾಯಿತು. ಅದಕ್ಕೆ ತೃಣಮೂಲ ಕಾಂಗ್ರೆಸ್ ಎಂಟು ಜಿಲ್ಲೆಗಳಿಂದ ಜನರನ್ನು ಸಂಘಟಿಸಿ ಅವರನ್ನು ಸಾಗಿಸಲು 1500 ಕ್ಕೂ ಹೆಚ್ಚು ಬಸ್ ಮತ್ತಿತರ ವಾಹನಗಳನ್ನು ಏರ್ಪಡಿಸಲಾಗಿತ್ತು. ಸಭೆಯ ದಿನ ತೃಣಮೂಲ ಕಾಂಗ್ರೆಸ್ ಗೂಂಡಾಗಳು ಹಳ್ಳಿಯ ಜನರ ಮೇಲೆ ದಾಳಿ ನಡೆಸಿದರು. ಇದನ್ನರಿತ ಹಳ್ಳಿಯವರು ಸನ್ನದ್ಧರಾಗಿ ಅಷ್ಟೇ ಉಗ್ರವಾಗಿ ತಮ್ಮ ಪ್ರತಿಧಾಳಿ ನಡೆಸಿದರು. ಈ ಗೂಂಡಾಗಳ ಧಾಳಿಯಲ್ಲಿ 32 ಪೋಲೀಸರಿಗೂ ಗಾಯಗಳಾಗಿವೆ. ಹಾಗಿದ್ದೂ ಪೋಲೀಸರು ತಾಳ್ಮೆಗೆಡಲಿಲ್ಲ. ಹೇಗಾದರೂ ಮಾಡಿ ಪೋಲೀಸರನ್ನು ಕೆಣಕಿ ಅವರು ಗೋಲೀಬಾರ್ ಮಾಡಬೇಕೆಂಬುದು ತೃಣಮೂಲದ ಲೆಕ್ಕಾಚಾರವಾಗಿತ್ತು. ಅದು ಫಲಿಸದೆ ಹಳ್ಳಿಯ ಜನರ ಪ್ರತಿರೋಧ ಹೆಚ್ಚಾದಾಗ ತಾವು ಬಂದ ಬಸ್‌ಗಳನ್ನು ಅಲ್ಲೇ ಬಿಟ್ಟು ಅವರು ತಮ್ಮ ಕಾಲಿಗೆ ಬುದ್ಧಿ ಹೇಳಬೇಕಾಯಿತು. ತಮ್ಮ ಮೇಲೆ ದಾಳಿಯಾಗಿದೆ ಎಂಬ ನೆಪದಲ್ಲಿ ಜನವರಿ 5 ರಂದು ಸಾರ್ವತ್ರಿಕ ಮುಷ್ಕರಕ್ಕೆ ತೃಣಮೂಲ ಕರೆ ನೀಡಿತು.

ಅದೇ ಸಂದರ್ಭದಲ್ಲಿ ಅವರು ಗರ್ಬೆಟಾವನ್ನು ಮರುವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಪಿಡಬ್ಲ್ಯೂಜಿ(ಪೀಪಲ್ಸ್ ವಾರ್ ಗ್ರೂಪ್ ಎಂಬ ನಕ್ಸಲೀಯರು) ಸೇರಿ ಒಂದು ಕುಗ್ರಾಮದಲ್ಲಿ ಶಸ್ತ್ರಾಸ್ತ್ರಗಳನ್ನು ಮದ್ದು ಗುಂಡುಗಳನ್ನು ರಾಶಿ ಹಾಕಿದರು. ನಾಲ್ಕು ಗ್ರಾಮಗಳನ್ನು ವಶಪಡಿಸಿಕೊಂಡು ನಾಲ್ಕು ಸಿಪಿಐ(ಎಂ) ನ ಪ್ರಮುಖ ಕಾರ್ಯಕರ್ತರನ್ನು ಕೊಲೆ ಮಾಡಬೇಕೆಂಬುದು ಅವರ ಹಂಚಿಕೆಯಾಗಿತ್ತು. ಇವರ ಪಿತೂರಿಯ ಸುಳಿಯನ್ನು ಪಡೆದ ಹಳ್ಳಿಯ ಜನರು ಅವರ ಸಂಚನ್ನು ಭಂಗಗೊಳಿಸಿದರು. ಅಂದಿನಿಂದ ಏಳು ಜನರು ನಾಪತ್ತೆಯಾಗಿದ್ದಾರೆ. ಪೋಲೀಸರ ತನಿಖೆ ಮುಂದುವರಿಯುತ್ತಿದೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ.

ಈ ಮಧ್ಯೆ, ಜಲಪೈಗುರಿ, ಕೂಚ್ ಬಿಹಾರ್ ಮತ್ತು ಡಾರ್ಜಿಲಿಂಗ್ ಜಿಲ್ಲೆಗಳಲ್ಲಿ ಉತ್ತರ ಬಂಗಾಳದ ಪ್ರದೇಶಗಳಲ್ಲಿ ತೃಣಮೂಲ ಕಾಂಗ್ರೆಸ್‌ನ ಕುಮ್ಮಕ್ಕು ಪಡೆದ ದೊಡ್ಡ ಸಂಖ್ಯೆಯ ಪ್ರತ್ಯೇಕತಾವಾದಿಗಳು ಗಲಭೆ ಎಬ್ಬಿಸಲು ಹವಣಿಸುತ್ತಿವೆ. ಇವರು ರಾಜ್‌ಭನ್ಸಿ ಬುಡಕಟ್ಟಿಗೆ ಸೇರಿದವರಾಗಿದ್ದಾರೆ. ಇಲ್ಲಿ ಕೂಡಾ ಭೂಮಿಯ ಪ್ರಶ್ನೆಯೇ ಮುಖ್ಯವಾದದ್ದು. ಬಹುಪಾಲು ರಾಜಭನ್ಸಿ ಬುಡಕಟ್ಟಿನ ಜನರು ಎಡರಂಗದ ಪರವಾಗಿದ್ದು ವರ್ಗ ಹೋರಾಟದ ದೊಡ್ಡ ಪರಂಪರೆಯನ್ನೇ ಹೊಂದಿದ್ದಾರೆ. ಅಸ್ಸಾಮಿನ ಉಲ್ಫಾದವರಿಂದ ಬೆಂಬಲ ಪಡೆದ ಪ್ರತ್ಯೇಕತವಾದಿಗಳು ಅದು ಪ್ರತ್ಯೇಕ ಕಾಮಾಟ್‌ಪುರ ರಾಜ್ಯ ರಚನೆಯಾಗಬೇಕು ಎಂಬ ಕೂಗೆತ್ತಿದ್ದಾರೆ. ಒಬ್ಬ ಜಿಲ್ಲಾ ಸಮಿತಿ ಸದಸ್ಯ ಹಾಗೂ ಮೂರು ವಲಯ ಸಮಿತಿ ಸದಸ್ಯರನ್ನು ಒಳಗೊಂಡಂತೆ ಎಂಟು ಸಿಪಿಐ(ಎಂ) ಕಾರ್ಯಕರ್ತರನ್ನು ಅವರು ಕೊಲೆಮಾಡಿದ್ದಾರೆ. ಗಲಭೆಪೀಡಿತ ಪ್ರದೇಶಗಳಿಗೆ ಜ್ಯೋತಿಬಸು ಭೇಟಿ ನೀಡಿದ ಮೇಲೆ ಬೃಹತ್ ರಾಜಕೀಯ ಚಟುವಟಿಕೆಗಳು ಪ್ರಾರಂಭವಾಗಿ ಅಲ್ಲಿಯ ಪರಿಸ್ಥಿತಿ ಉತ್ತಮಗೊಂಡಿದೆ. ಜಿಲ್ಲೆಯ ಜನತೆ ದ್ವೇಷಮಯ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗುತ್ತಿದ್ದಾರೆ.

ತೃಣಮೂಲದ ಹಸೀ ಸುಳ್ಳುಗಳ ಸರಮಾಲೆ

ಸಿಪಿಐ(ಎಂ) ಹಾಗೂ ಎಡರಂಗದ ವಿರುದ್ಧ ಮಮತಾ ಬ್ಯಾನರ್ಜಿ ಕೂಟ ಹರಡುತ್ತಿರುವ ಸುಳ್ಳುಗಳಿಗೆ ಲೆಕ್ಕವೇ ಇಲ್ಲ. ಪಿಂಗಳಾ ಘಟನೆ ....ದಾಸ್ ಪ್ರಕರಣ ಸಾಕಲ್ಲವೇ?

ತೃಣಮೂಲ ಸೃಷ್ಟಿಸಿದ ಸುಳ್ಳುಗಳೆಷ್ಟೋ, ಕೊಲೆಗಳೆಷ್ಟೋ? ಎಷ್ಟು ಅಮಾಯಕರು ಬಲಿಯಾಗಿದ್ದಾರೋ, ಮುಂದೆ ಆಗಲಿದ್ದಾರೋ? ಆದರೆ ಪ್ರಜಾಸತ್ತೆಯಲ್ಲಿ ಅದಮ್ಯ ನಂಬಿಕೆ ಇಟ್ಟಿರುವ ಬಂಗಾಳದ ಜನರು ಮಮತಾಳ ಮಂಗಾಟಕ್ಕೆ ಬಲಿ ಬೀಳುವುದಿಲ್ಲ. ಅವಳ ಹಿಂಸಾ ರಾಜಕೀಯಕ್ಕೆ ಮಂಗಳ ಹಾಡೇ ಹಾಡುತ್ತಾರೆಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ತಮ್ಮ ಆಶಯ ವ್ಯಕ್ತಪಡಿಸಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆಯ ಕುಸಿತು' ಜಾರ್ಜ್ ಹಸೀ ಸುಳ್ಳಿಗೆ ಅವರದೇ ಸರ್ಕಾರದ ಅಂಕಿ ಅಂಶಗಳ ಉತ್ತರ!

ರಕ್ಷಣಾ ಇಲಾಖೆ ಹಗರಣದ ಕುಖ್ಯಾತ ನಾಯಕ ಜಾರ್ಜ್ ಫರ್ನಾಂಡೀಸ್ ಕೆಲ ತಿಂಗಳ ಹಿಂದೆ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿದ್ದರು. ಎನ್‌ಡಿಎ ನ ಸಂಚಾಲಕ ಎಂದ ಮೇಲೆ ಮೈತ್ರಿಕೂಟದ ಅಂಗಪಕ್ಷವನ್ನು ಓಲೈಸಲೇ ಬೇಕಲ್ಲ. ಮಮತಾ ಕೂಗಿದ ಕೂಡಲೇ ಅಲ್ಲಿ ಜಾರ್ಜ್ ಹಾಜರಾಗಲೇಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಚಳಿಜ್ವರ! ಅದೂ ಹೇಳಿ ಕೇಳಿ ಜಾರ್ಜ್‌ಗೆ ಕಮ್ಯುನಿಸ್ಟರನ್ನು ಕಂಡರೆ ಕೆಂಡಮಂಡಲ. ಬಂಗಾಳದಲ್ಲಿನ ಕರಾಮತ್ತಿಗೆ ಜಾರ್ಜ್ ಜಾರ್ಜ್, ಅಡ್ವಾಣಿ ನಿಯೋಜಿತರಾಗಿದ್ದು ಮುಖಭಂಗ ಅನುಭವಿಸಿದ್ದು ಗೊತ್ತಲ್ಲ. ಮಮತಾ ಕರೆಯಂತೆ ಜಾರ್ಜ್ ಭೇಟಿ ಕೊಟ್ಟಿದ್ದು ಮೂರು ಹಳ್ಳಿಗಳು - ಮಿಡ್ನಾಪುರ ಜಿಲ್ಲೆಯಲ್ಲಿ ಅಲ್ಲಿ ತಂಗಿದ್ದು ಕೆಲವೇ ಗಂಟೆಗಳು ಮಾತ್ರ. ದೆಹಲಿಗೆ ಹಿಂದುರುಗಿದ ಕೂಡಲೇ ಪತ್ರಿಕಾಗೋಷ್ಠಿ ಕರೆದು ಹೇಳಿಕೆ ಕೊಟ್ಟೇ ಕೊಟ್ಟರು. 'ಪಶ್ಚಿಮ ಬಂಗಾಳದಲ್ಲಿ ಭಯಂಕರ ಸ್ಥಿತಿ ಇದೆ. ಕಾನೂನು ಸುವ್ಯವಸ್ಥೆಯ ಸ್ಥಿತಿ ಬಿಹಾರಕ್ಕಿಂತಲೂ ಕೆಟ್ಟದಾಗಿದೆ. ಹಿಂಸೆಯ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ 9ನೇ ಸ್ಥಾನಪಡೆದರೆ, ಬಿಹಾರ ಹತ್ತನೇ ಸ್ಥಾನದಲ್ಲಿದೆ".

ಅವರ ಮತ್ತೊಬ್ಬ ಗೆಳೆಯ ಆಂಧ್ರದ ಚಂದ್ರಬಾಬು ನಾಯ್ಡು ಜಾರ್ಜ್‌ರನ್ನು ಹಿಂದಕ್ಕೆ ಹಾಕಿ ಮತ್ತೊಂದು ಹೇಳಿಕೆ ನೀಡಿದರು "ಪಶ್ಚಿಮ ಬಂಗಾಳದ ಸ್ಥಿತಿ 'ಗಂಭೀರ'ವಾಗಿದೆ. ಕೇಂದ್ರ ಏನಾದರೂ ಕ್ರಮ ಕೈಗೊಳ್ಳಲೇಬೇಕು' ಎಂದು ನಾಯ್ಡು ಆಗ್ರಹ.

ವಿಪರ್ಯಾಸವೆಂದರೆ ಇವರಿಬ್ಬರಿಗೂ ಸರಿಯಾದ ಉತ್ತರವನ್ನು ಅವರ ಸರ್ಕಾರದ ಗೃಹಮಂತ್ರಿಯವರೇ ಕೊಡುವುದರ ಮೂಲಕ ಅವರ ಅಸತ್ಯವನ್ನು ನಗ್ನಗೊಳಿಸಿದರು.

ಮಳೆಗಾಲದ ಅಧಿವೇಶನ(2000ನೇ ಇಸವಿ) ಮತ್ತು ಮುಂಚಿನ ಬಜೆಟ್ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಬೇರೆ ಬೇರೆ ರಾಜ್ಯಗಳಲ್ಲಿನ ಕಾನೂನು ಸುವ್ಯವಸ್ಥೆ ಪರಿಸ್ಥಿತಿಯ ಅಂಕಿ ಸಂಖ್ಯೆಯನ್ನು ಬಿಚ್ಚಿಟ್ಟಿದ್ದಾರೆ. ಎನ್‌ಡಿಎ ಸಂಚಾಲಕರ ಸುಳ್ಳಿನ ತಲೆಯ ಮೇಲೆ ಮೊಳೆ ಹೊಡೆದಿದ್ದಾರೆ.

ದಲಿತರ ಮೇಲಿನ ದೌರ್ಜನ್ಯಗಳು ಬಿಜೆಪಿ ಆಡಳಿತದ ಉತ್ತರ ಪ್ರದೇಶದಲ್ಲಿ ದಾಖಲಾಗಿರುವುದನ್ನು ನೋಡಬಹುದು.

ನಾಯ್ಡುರವರ ಆಂಧ್ರಪ್ರದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಏನೂ ಕಡಿಮೆಯಿಲ್ಲ.

ಪಶ್ಚಿಮ ಬಂಗಾಳದಲ್ಲಿ ಒಂದೇ ಒಂದು ದೌರ್ಜನ್ಯ ಪ್ರಕರಣವಿಲ್ಲದಿರುವುದು ಗಮನಿಸಬೇಕಾದ ಅಂಶ.

ಹೀಗೆ ಹೇಳುವಾಗ ಸಹಜವಾಗಿಯೇ ಒಂದು ಅನುಮಾನ ಸುಳಿದು ಹೋಗುತ್ತದೆ. ಪಶ್ಚಿಮ ಬಂಗಾಳದಲ್ಲಿ ದಲಿತರ ಮೇಲಿನ ದೌರ್ಜನ್ಯಗಳನ್ನು ವರದಿ ಮಾಡದೆಯೇ ಇರಬಹುದು ಅಥವಾ ಮೊಕದ್ದಮೆ ಹೂಡದೇ ಇರಬಹುದು ಎಂದು. ಆದರೆ ಒಂದಂಶ ಮರೆಯಬಾರದು. ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಪ್ರಜ್ಞಾವಂತರಾಗಿರುವ ಹಾಗೂ ಧ್ರುವೀಕರಣಗೊಂಡಿರುವ ಬಂಗಾಳದಲ್ಲಿ ಹೀಗೆ ಆಗುವುದು ಸಾಧ್ಯವೇ ಇಲ್ಲ. ಬೇರೆ ರಾಜ್ಯಗಳ ಕುರಿತು ಹಾಗೆ ಹೇಳಲು ಸಾಧ್ಯವಿಲ್ಲ.

ಈ ಅಂಕಿ ಅಂಶಗಳನ್ನು ನೋಡಿದ ಮೇಲೆ ಒಂದು ಸ್ಪಷ್ಟ ಅಭಿಪ್ರಾಯ ನಮ್ಮ ಕಣ್ಣ ಮುಂದೆ ಬರುತ್ತದೆ. ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳದ ಕಾನೂನು ಸುವ್ಯವಸ್ಥೆಯ ಕುರಿತು ದಿನಬೆಳಗಾದರೆ ಏಕೆ ಬೊಬ್ಬೆ ಇಡುತ್ತಿದ್ದಾರೆ ಎಂಬುದು ಸ್ಪಟಿಕದಷ್ಟೇ ನಿಚ್ಚಳ. ಕೇಂದ್ರದ ಆಡಳಿತವನ್ನು ಹೇರಿ ಹೇಗಾದರೂ ಮಾಡಿ ಚುನಾವಣೆಗಳಲ್ಲಿ ಅಧಿಕಾರಕ್ಕೆ ಬರಬೇಕೆಂಬುದೇ ಮಮತಾಳ ಸಂಚು. ಅವಳ ತಾಳಕ್ಕೆ ಸರಿಯಾಗಿ ಕುಣಿಯುವ ಜಾರ್ಜ್, ಅಡ್ವಾಣಿ, ನಾಯ್ಡು, ಬೇರೆಯವರ ಬಗ್ಗೆ ಮಾತನಾಡುವಾಗ ತಮ್ಮ ಕಾಲಬುಡ ನೋಡಿಕೊಂಡರೆ ಒಳಿತು.

- ಟಿ.ಸುರೇಂದ್ರ ರಾವ್

ಗೃಹ ಸಚಿವಾಲಯದ ಕೋಷ್ಟಕ

1. 1999 ರಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯಗಳು

	ಕೊಲೆಗಳು	ಗಾಯ	ಅತ್ಯಾಚಾರ	ಒಟ್ಟು
ಆಂಧ್ರಪ್ರದೇಶ	26	43	61	
ಪಶ್ಚಿಮ ಬಂಗಾಳ	0	0	0	0
ಉತ್ತರ ಪ್ರದೇಶ	279	672	276	6122
ರಾಜಸ್ತಾನ	49	154	146	5623
ಕೇರಳ	5	177	54	514

2. 1999 ರಲ್ಲಿ ಪರಿಶಿಷ್ಟ ಬುಡಕಟ್ಟಿನವರ ಮೇಲೆ ದೌರ್ಜನ್ಯಗಳು

ಆಂಧ್ರ ಪ್ರದೇಶ	4	48	22	178
ಪಶ್ಚಿಮ ಬಂಗಾಳ	0	0	0	0
ಮಧ್ಯಪ್ರದೇಶ	38	216	233	1756
ರಾಜಸ್ತಾನ	14	61	40	1221
ಕೇರಳ	0	23	10	81

3. 1999 ರಲ್ಲಿ ಭಯೋತ್ಪಾದಕ ಹಿಂಸೆಗಳು

	ಸತ್ತವರು	ಗಾಯಗೊಂಡವರು
ಆಂಧ್ರ	151	602
ಬಂಗಾಳ	0	0
ಬಿಹಾರ	378	481
ಮಧ್ಯಪ್ರದೇಶ	47	95

4. ಬಾಧಿಸಲ್ಪಟ್ಟ ಜಿಲ್ಲೆಗಳ ಸಂಖ್ಯೆ

	ಭಯೋತ್ಪಾದನೆ	ಕೋಮು ಗಲಭೆಗಳಿಗೆ	ಸೂಕ್ಷ್ಮ ಜಾತಿ ಘರ್ಷಣೆ	ಒಟ್ಟು
ಆಂಧ್ರ	6	5	1	12
ಬಂಗಾಳ	0	3	0	3
ಉತ್ತರ ಪ್ರದೇಶ	0	24	3	27
ಬಿಹಾರ	10	9	6	25

5. 1999 ರಲ್ಲಿ ವಧು ಸುಟ್ಟು ಸಾವಿಗೀಡಾದ ಪ್ರಕರಣಗಳು - ಐಪಿಸಿ 302 ಸೆಕ್ಷನ್ ಅಡಿಯಲ್ಲಿ

ಆಂಧ್ರ	53
ಬಂಗಾಳ	4
ಉತ್ತರ ಪ್ರದೇಶ	310
ಕೇರಳ	2
ಬಿಹಾರ	74(1998 ರ ಅಂಕಿ ಸಂಖ್ಯೆ)

6. 1998 ರಲ್ಲಿ ಒಟ್ಟು ಅಪರಾಧಗಳು

	ಕೊಲೆಗಳು	ಕೊಲೆ ಪ್ರಯತ್ನ	ಗಾಯ ಗೊಂಡವರು	ಅತ್ಯಾಚಾರ	ಅಪಹರಣ
ಆಂಧ್ರ	2972	1561	869	1175	6577
ಬಂಗಾಳ	2122	467	757	908	4254
ಉತ್ತರ ಪ್ರದೇಶ	8303	8497	1605	4369	22,776

...ಬೆಂಕಿ ಹಚ್ಚುತ್ತಿರುವ ಮಮತಾ

ನಿಬಿಡವಾಗಿದೆ..

ಪೀಪಲ್ಸ್‌ವಾರ್ ಗ್ರೂಪಿಗೆ ಕೊಲೆ ಸುಲಿಗೆ, ಲೂಟಿ ನಡೆಸುವುದು ಇತ್ಯಾದಿ ಭೀಕರ ಕೃತ್ಯಗಳು ನಿತ್ಯಕರ್ಮಗಳಾಗಿವೆ. ತೃಣಮೂಲ ಬಿಜೆಪಿ ಕಾರ್ಯಕರ್ತರಿಗೆ ಶಸ್ತ್ರಗಳನ್ನು ಒದಗಿಸಿ ತರಬೇತಿ ನೀಡುವುದು ಪೀಪಲ್ಸ್‌ವಾರ್ ಗ್ರೂಪಿನ ಕಾರ್ಯಕರ್ತರ ಕೆಲಸವಾಗಿದೆ. ಈ ಶಸ್ತ್ರಾಸ್ತ್ರಗಳಿಗೆ ಹಣವನ್ನು ಒದಗಿಸುವುದು ವಿದೇಶಿ ಶಕ್ತಿಗಳ ಮೂಲಕ ಎಂದು ನಂಬಲರ್ಹವಾಗಿ ತಿಳಿದುಬಂದಿದೆ. ಪಶ್ಚಿಮ ಬಂಗಾಳದ ಮಣ್ಣಿನಲ್ಲಿ ಅಶಾಂತಿಯ ಬೀಜ ಬಿತ್ತಲು ವಿದೇಶಿ ಶಕ್ತಿಗಳು ಸದಾ ಹಲವು ತಂತ್ರಗಳನ್ನು ಅಳವಡಿಸುತ್ತಿವೆ. 1995ರಲ್ಲಿ ಪುರುಲಿಯಾ ಜಿಲ್ಲೆಯಲ್ಲಿ ವಿಮಾನ ಮೂಲಕ ಎಸೆಯಲಾದ ಶಸ್ತ್ರಾಸ್ತ್ರಗಳು ಪೀಪಲ್ಸ್ ವಾರ್ ಗ್ರೂಪ್, ತೃಣಮೂಲ, ಬಿಜೆಪಿ ಕಾರ್ಯಕರ್ತರ ಕೈಸೇರಿದೆ. ಈ ಧೈರ್ಯದಿಂದ ಇವರು ಗ್ರಾಮಾಂತರ ಪ್ರದೇಶದ ಜನರನ್ನು ಬೀತರನ್ನಾಗಿಸಲು, ಕೊಲೆಗೈಯಲು ಗೂಂಡಾ ಪಡೆಗಳು ಈ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಗ್ರಾಮೀಣ ಜನರನ್ನು ಭೀತರನ್ನಾಗಿಸಿ ಸಿಪಿಐ(ಎಂ) ನೇತೃತ್ವದ ಆಡಳಿತವನ್ನು ಕೆಳಗಿಳಿಸಲು ತೃಣಮೂಲ, ಬಿಜೆಪಿ, ಪಿ. ಡಬ್ಲ್ಯೂ.ಜಿ. ಒಕ್ಕೂಟ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಮುಖ್ಯಮಂತ್ರಿ ಸ್ಥಾನದ ಕನಸು ಕಾಣುತ್ತಿರುವ ಮಮತಾ ಬ್ಯಾನರ್ಜಿ ಈ ಸ್ಥಾನಕ್ಕಾಗಿ ಏನೇ ಅಕ್ರಮ ನಡೆಸುವ ಹಂತಕ್ಕೆ ಮಾನಸಿಕವಾಗಿ ತಲುಪಿದ್ದಾರೆ. ಮಿಡ್ನಾಪುರ್‌ನಲ್ಲಿ ಆಕ್ರಮಣಗಳನ್ನು ಸಂಘಟಿಸಿ ರಾಜ್ಯ ಹಾಗೂ ಜಿಲ್ಲಾ ಆಡಳಿತಗಳಲ್ಲಿ ಮಧ್ಯ ಪ್ರವೇಶ ಮಾಡಲು ಹವಣಿಸುತ್ತಿದ್ದಾರೆ. ಆಕ್ರಮಣಗಳನ್ನು ಸಂಘಟಿಸುವಲ್ಲಿ ಮಮತಾ ಸದಾ ಮುಂದೆ. ತಾನೊಬ್ಬ ಕೇಂದ್ರ ಮಂತ್ರಿ ಎಂಬ ವಿಷಯ ಮರೆತುಬಿಟ್ಟಿದ್ದಾರೆ. ಕೇಂದ್ರ ರೈಲ್ವೇ ಮಂತ್ರಿಯಾದ ಮಮತಾಬ್ಯಾನರ್ಜಿ ದೆಹಲಿಯ ತಮ್ಮ ಸಚಿವಾಲಯದ ಕಛೇರಿಗೆ ಹಾಜರಾಗದೆ ಸದಾ ಬಂಗಾಳದಲ್ಲಿ ಟಿಕಾಣಿ ಹೂಡಿರುತ್ತಾರೆ. ದೆಹಲಿಯಲ್ಲಿ ಸದಾ ಇಲ್ಲದಿರುವ ಕ್ಯಾಬಿನೆಟ್ ಸಚಿವರು ಯಾರು ಎಂಬ ಪ್ರಶ್ನೆಗೆ ಮಮತ ಬ್ಯಾನರ್ಜಿ ಎಂಬ ಉತ್ತರ ಜನಜನಿತವಾಗಿದೆ. ರಾಷ್ಟ್ರವನ್ನೇ ಕಣ್ಣೀರಿನಲ್ಲಿ ಮುಳುಗಿಸಿದ ಗುಜರಾತ್ ಭೂಕಂಪದಲ್ಲಿ ಸಾವಿರಾರು ಜನ ಸತ್ತಿದ್ದಾರೆ ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿ ನಷ್ಟವಾಗಿದೆ. ರೈಲ್ವೆಗೆ ಸಹ ಈ ಭೂಕಂಪದಿಂದ ನಷ್ಟವಾಗಿದೆ. ಆದರೆ ಈ ದುರಂತದ ಕಡೆಗೆ ತಿರುಗಿ ಸಹ ನೋಡದೆ ಕಮ್ಯುನಿಸ್ಟ್ ವಿರೋಧಿ ಭೂತವನ್ನು ಮೈಮೇಲೆ ಹೇರಿಕೊಂಡು ನರ್ತಿಸುತ್ತಿದ್ದಾಳೆ ಈ ಸಚಿವೆ. ಇದಕ್ಕೆ ವಾಜಪೇಯಿ, ಅಡ್ವಾಣಿ ಆಶೀರ್ವಾದ ಬೇರೆ.

ಹಣ ಎಲ್ಲಿಂದ?

ಆಕ್ರಮಣಗಳನ್ನು ಸಂಘಟಿಸುವುದು ಮಾತ್ರವಲ್ಲ ರಾಜ್ಯದಲ್ಲಿ ಈ ಕೃತ್ಯಗಳಿಗೆ ಹಣವನ್ನು ತೂರಿ ಬಿಡುತ್ತಿದ್ದಾರೆ. ತೃಣಮೂಲ ಕಾರ್ಯಕರ್ತರು ಕೇಶವಪುರದಲ್ಲಿ ಮಮತಾ ಬ್ಯಾನರ್ಜಿ ಭಾಗವಹಿಸಿದ ರ್‍ಯಾಲಿಗೆ ಜನರನ್ನು ಕರೆತರಲು 15 ಸಾವಿರ ವಾಹನಗಳನ್ನು ಬಳಸಿರುತ್ತಾರೆ. ಇದಕ್ಕೆ ಹಣ ಎಲ್ಲಿಂದ ಎಂಬ ಪ್ರಶ್ನೆಗೆ ಮಮತಾ ಸದಾ ಮೌನ ಉತ್ತರ ನೀಡುತ್ತಿದ್ದಾರೆ. ರ್‍ಯಾಲಿ ಮುಗಿಸಿ ಹಿಂತಿರುಗಿ ಹೋಗುವ ಕಾರ್ಯಕರ್ತರು 20 ಮನೆಗಳನ್ನು ಸುಟ್ಟರು, ರಸ್ತೆಯಲ್ಲಿ ಕಂಡಕಂಡವರ ಮೇಲೆ ಹಲ್ಲೆನಡೆಸಿದರು. ಮಾತ್ರವಲ್ಲ ವಾಹನಗಳಲ್ಲಿ ಮದ್ಯದ ಬಾಟಲಿಗಳನ್ನು ಪೇರಿಸಿ ಇಡಲಾಗಿತ್ತು. ಹಣ ಹಾಗೂ ಹೆಂಡ ಉಪಯೋಗಿಸಿ ಈ ರ್‍ಯಾಲಿಗೆ ಜನ ಕರೆತರಲಾಯಿತು ಹಾಗೂ ಕೋಟ್ಯಾಂತರ ರೂಪಾಯಿ ವ್ಯಯಿಸಲಾಗಿದೆ.

ನಡೆಯುದಿರುವ ಕೊಲೆಗಳ ಬಗ್ಗೆ ಜಗಳ ಮಾಡಿಸುವುದು, ಕೊಲೆ ನಡೆದಿದೆ ಎಂದು ತೋರಿಸಲು ಸ್ವಂತ ಕಾರ್ಯಕರ್ತರನ್ನೇ ಕೊಲ್ಲಿಸುವುದು. ನಂತರ ಕಾನೂನು ಸುವ್ಯವಸ್ಥೆ ಇಲ್ಲವಾಗಿದೆ ಎಂದು ಕೂಗಾಡುವುದು ತೃಣಮೂಲದ ದಿನನಿತ್ಯದ ಕೆಲಸವಾಗಿದೆ. ಮಿಡ್ನಾಪುರ ಜಿಲ್ಲೆಯ ಕೇವಲ ಏಳು ಪೋಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಇವರು ಆಕ್ರಮಣಗಳನ್ನು ಸಂಘಟಿಸುತ್ತಿದ್ದಾರೆ. ಈ ಆಕ್ರಮಣಗಳ ಮುಂಚೂಣಿಯಲ್ಲಿ ತೃಣಮೂಲ-ಬಿಜೆಪಿ, ಪಿಡಬ್ಲ್ಯೂಜಿ ಗೂಂಡಾಗಳಿರುತ್ತಾರೆ. ಇದರಿಂದ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರವನ್ನು ವಜಾ ಮಾಡಬೇಕು ಎಂದು ಕೂಗಾಡುತ್ತಿದ್ದಾರೆ. ಮಹಾಸಖ್ಯದ ಜೊತೆ ಗೌಪ್ಯವಾಗಿ ಹಾಗೂ ಇದೀಗ ಬಹಿರಂಗವಾಗಿ ಸೇರಲು ಶ್ರಮಪಟ್ಟ ಕಾಂಗ್ರೆಸ್‌ಗೆ ರಾಜ್ಯ ಸರ್ಕಾರವನ್ನು ವಜಾ ಮಾಡಬೇಕು ಎಂದು ಹೇಳಿಕೊಳ್ಳಲು ಈವರೆಗೂ ಆಗಿರುವುದಿಲ್ಲ. ಒಟ್ಟಾರೆ ಪರಿಸ್ಥಿತಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಸುಭದ್ರವಾಗಿದೆ ಎಂದು ಕಾಂಗ್ರೆಸ್ ಅರೆ ಮನಸ್ಸಿನ ಹೇಳಿಕೆ ನೀಡಿತ್ತು.

ಮಮತಾ ಬ್ಯಾನರ್ಜಿಯ ಕೋತಿಯಾಟ, ತೃಣಮೂಲ, ಬಿಜೆಪಿ, ಗೂಂಡಾಪಡೆ ಅಟ್ಟಹಾಸ, ಕೊಲೆಗಳು ಇವುಗಳನ್ನು ಪಶ್ಚಿಮ ಬಂಗಾಳದ ಪ್ರಭುತ್ವ ಜನತೆ ಕಂಡಿತ ತಿರಸ್ಕಾರ ಮಾಡುತ್ತದೆ. ಮುಂಬರುವ ಚುನಾವಣೆಯಲ್ಲಿ ಮಮತಾ ಹಾಗೂ ಆಕೆಯ ಹಿಂಬಾಲಕರಿಗೆ ಜನತೆ ತಕ್ಕ ಉತ್ತರ ಖಂಡಿತ ನೀಡುತ್ತಾರೆ.

- ಇ.ಕೆ.ಎನ್.ರಾಜನ್

ಏಪ್ರಿಲ್ 1, ಮರಣಶಾಸನ ಅನುಷ್ಠಾನ

ಒಂದಂತೂ ಸತ್ಯ. ಏಪ್ರಿಲ್ ತಿಂಗಳ ನಂತರದಲ್ಲಿ, ಚೀನಾದಿಂದ ಮಾತ್ರವಲ್ಲ ಜಗತ್ತಿನ ಇತರೆಲ್ಲಾ ದೇಶಗಳಿಂದ ಅಗಾಧ ಪ್ರಮಾಣದಲ್ಲಿ ಕೈಗಾರಿಕಾ ವಸ್ತುಗಳು ಭಾರತದ ಮಾರುಕಟ್ಟೆಗೆ ಬಂದು ಬೀಳಲಿದೆ. ದರ ಕಡಿಮೆ ಆಗುತ್ತದೋ ಇಲ್ಲವೊ ದೇಶೀಯ ಕೈಗಾರಿಕೆಗಳು ಮಾತ್ರ ನಾಶವಾಗುತ್ತವೆ.


ಚೀನಾದಿಂದ ಹತ್ತು ಸಾವಿರರೂಪಾಯಿಗೆ ಹಿರೋ ಹೊಂಡಾ ಮೋಟಾರ್ ಸೈಕಲ್!, ಆರು ಸಾವಿರ ರೂಪಾಯಿಗೆ ಟಿಸಿಎಲ್ ಟಿ.ವಿ! ಇನ್ನೂ ಏನೇನೋ.... ಇದು ನಿಜವೋ ಏನೋ ಎಂಬಂತೆ ವಾಹನ ತಯಾರು ಮಾಡುವ ಕಂಪೆನಿಗಳು ದರ ಕಡಿಮೆ ಮಾಡಲಾಗಿದೆ ಎಂದು ದೊಡ್ಡ ದೊಡ್ಡ ಜಾಹಿರಾತುಗಳನ್ನು ನೀಡುತ್ತಿವೆ.

ಒಂದಂತೂ ಸತ್ಯ. ಏಪ್ರಿಲ್ ತಿಂಗಳ ನಂತರದಲ್ಲಿ, ಚೀನಾದಿಂದ ಮಾತ್ರವಲ್ಲ ಜಗತ್ತಿನ ಇತರೆಲ್ಲಾ ದೇಶಗಳಿಂದ ಅಗಾಧ ಪ್ರಮಾಣದಲ್ಲಿ ಉಳಿದಿರುವ 715 ವಸ್ತುಗಳನ್ನು ಯಾವುದೇ ಅಡಚಣೆ ಇಲ್ಲದೆ ವಿದೇಶಗಳಿಂದ ಆಮದು ಮಾಡಿ ಕೊಳ್ಳಬಹುದು. ಹೆಚ್ಚಾಗಿ ಸಣ್ಣ ಕೈಗಾರಿಕೆಗಳೇ 715 ವಸ್ತುಗಳನ್ನು ಉತ್ಪಾದಿಸುತ್ತಿದ್ದು ಇನ್ನುಮುಂದೆ ಆ ಕೈಗಾರಿಕೆಗಳು ಮುಚ್ಚಿ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ.

ಕಳೆದ ವರ್ಷ 714 ಕೃಷಿ ವಸ್ತುಗಳ ಆಮದಿನ ಮೇಲೆ ನಿರ್ಬಂದ ತೆಗೆದುಹಾಕಿದ್ದರಿಂದ ರೈತರು ಯಾವ ಭೀಕರತೆಯನ್ನು ಅನುಭವಿಸುತ್ತಿದ್ದಾರೆ ಎಂಬ ಕಠೋರ ಅನುಭವ ಆಗುತ್ತಿರುವಾಗಲೇ ಇನ್ನು 715 ಹ್ಯಾಂಡ್‌ಲೂಂ ಕೈಗಾರಿಕೆಗಳ ಗತಿ ಏನಾಗಬಹುದು ನೀವೇ ಊಹಿಸಿಕೊಳ್ಳಿ.

ಬೇರೆ ದಾರಿ ಇಲ್ಲವೆ ? ದೇಶದ ಮೇಲೆ ದೇಶದ ಜನತೆಯ ಮೇಲೆ ಅಗಾಧವಾದ ಪ್ರೇಮ ಉಳ್ಳವರಿಗೆ ಖಂಡಿತ ವಾಗಿಯೂ ಪರ್ಯಾಯವಾದ ದಾರಿಯ ಅವಕಾಶ ಇತ್ತು.

1. ಪ್ರಮಾಣಾತ್ಮಕ ನಿರ್ಭಂಧವನ್ನು ತೆಗೆದುಹಾಕಲು ಇನ್ನೂ ಮೂರು ವರ್ಷಗಳ ಅವಕಾಶವಿತ್ತು. 1994ರಲ್ಲಿ ಸಹಿಮಾಡಿದ ಗ್ಯಾಟ್ ಒಪ್ಪಂದದ ಪ್ರಕಾರ 1995ರಿಂದ 2005ರ ವರೆಗೆ ಈ ಶರತ್ತುಗಳನ್ನು ಜಾರಿ ಮಾಡುವ ಅವಕಾಶ ಇತ್ತು.



ಪ್ರಮಾಣಾತ್ಮಕ ನಿರ್ಬಂಧ ರದ್ಧತಿ- ಇನ್ನಷ್ಟು ವಿದೇಶಿ ವಸ್ತುಗಳಿಗೆ ಆಹ್ವಾನ

ಕೈಗಾರಿಕಾ ವಸ್ತುಗಳು ಭಾರತದ ಮಾರುಕಟ್ಟೆಗೆ ಬಂದು ಬೀಳಲಿದೆ. ದರ ಕಡಿಮೆ ಆಗುತ್ತದೋ ಇಲ್ಲವೊ ದೇಶೀಯ ಕೃಷಿ, ಕೈಗಾರಿಕೆಗಳು ಮಾತ್ರ ನಾಶವಾಗುತ್ತವೆ. ಕೈಗಾರಿಕೆಗಳ ಮುಚ್ಚುವಿಕೆಯಿಂದ ರಸ್ತೆಗೆ ತಳ್ಳಲ್ಪಡುತ್ತಿರುವ ಕಾರ್ಮಿಕರ ಜತೆಗೆ ಇನ್ನೂ ಲಕ್ಷಗಟ್ಟಲೆ ಕಾರ್ಮಿಕರು ಕೆಲಸ ಕಳೆದುಕೊಳ್ಳಲಿದ್ದಾರೆ. ಇದುವೇ ಸ್ವದೇಶಿ ಭಕ್ತ (ಭ್ರಷ್ಟ) ವಾಜಪೇಯಿ ಸರಕಾರದ ವಿದೇಶಿ ವ್ಯಾಮೋಹದ ಫಲ.

ದೇಶೀಯ ಕೈಗಾರಿಕೆ, ಕೃಷಿ ಕ್ಷೇತ್ರ ಮತ್ತು ಆಮೂಲಕ ದೇಶದ ಸ್ವಾವಲಂಬನೆ ಉಳಿಸಿಕೊಳ್ಳಲು ಒಟ್ಟು 2000ಕ್ಕೂ ಹೆಚ್ಚು ವಸ್ತುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದಕ್ಕೆ ಪ್ರಮಾಣಾತ್ಮಕ ನಿರ್ಭಂಧ (ಆರ್.ಆರ್) ವನ್ನು ಹೇರಲಾಗಿತ್ತು. ಇದರಿಂದಾಗಿ ವಿದೇಶಿ ಪೈಪೋಟಿಯಿಂದ ರಕ್ಷಿಸಲು ಸಾಧ್ಯವಾಗುತ್ತು. ಆದರೆ ವಿಶ್ವ ವ್ಯಾಪಾರ ಸಂಘಟನೆಯ ಶರತ್ತುಗಳಿಗೆ ತಲೆಬಾಗಿರುವ ವಾಜಪೇಯಿ ಸರಕಾರ ಹಂತಹಂತವಾಗಿ ಪ್ರಮಾಣಾತ್ಮಕ ನಿರ್ಬಂಧವನ್ನು ಹಿಂತೆಗೆದುಕೊಂಡಿದೆ.

ಅಂದರೆ ಹಿಂದಿನಿಂದ ಹಂತಹಂತವಾಗಿ ನಿರ್ಬಂಧ ತೆಗೆದು ಇದೇ ಏಪ್ರಿಲ್ 1 ರಿಂದ ಬಾಕಿ ವಸ್ತುಗಳ ಮೇಲಿನ ನಿರ್ಭಂಧ ತೆಗೆದುಹಾಕಲಾಗಿದೆ. ಇದರಲ್ಲಿ 331 ವಸ್ತುಗಳು ಬಟ್ಟೆ ಬರೆಗಳಿಗೆ ಸೇರಿದ್ದರೆ, 88 ವಾಹನ ಮತ್ತು ಚಲಿಸುವ ಸಾಧನಗಳಾಗಿದ್ದು 46 ಇಲೆಕ್ಟ್ರೋನಿಕ್ (ಟಿ.ವಿ., ಟೇಪ್ರೆಕಾರ್ಡರ್ ಇತ್ಯಾದಿ) ವಸ್ತುಗಳು ಸೇರಿವೆ. ಇದರಿಂದ ಮುಂದೆ ಯಾವ ಹಂತ ತಲುಪಬಹುದು ಎಂಬುದನ್ನು ಊಹಿಸಲೂ ಅಸಾಧ್ಯ.

ಉದಾಹರಣೆಗೆ ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಕರ್ನಾಟಕದ್ದು ಎತ್ತಿದ ಕೈ . ದೊಡ್ಡಪ್ರಮಾಣದಲ್ಲಿ ಬಟ್ಟೆಯನ್ನು ಕರ್ನಾಟಕದಿಂದ ದೇಶದ ಇತರ ರಾಜ್ಯಗಳಿಗೆ ಮಾತ್ರವಲ್ಲದೆ ವಿದೇಶಕ್ಕೂ ರಫ್ತು ಮಾಡಲಾಗುತ್ತಿತ್ತು. WTO ಒಪ್ಪಂದ ಜಾರಿಯಾಗುತ್ತಲೇ, ವಿದೇಶಗಳಿಂದ ಬೇಡಿಕೆ ಕಡಿಮೆ ಆಗಿದೆ. ಶ್ರೀಮಂತ ದೇಶಗಳು ಒಂದಲ್ಲ ಒಂದು ಕಾರಣ ನೀಡಿ, ಭಾರತದಿಂದ ಹೋಗುತ್ತಿದ್ದ ಬಟ್ಟೆ ವ್ಯಾಪಾರವನ್ನು ನಿಲ್ಲಿಸಿವೆ. ಅಂತೆಯೇ ಬಟ್ಟೆ ಕೈಗಾರಿಕೆಗಳು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿವೆ.

ಇನ್ನು ಮುಂದೆ ಬಟ್ಟೆ ಬರೆಗೆ ಸೇರಿದ 331 ವಸ್ತುಗಳನ್ನು ಆಮದು ಮಾಡಿಕೊಳ್ಳಬಹುದು. ಅಂದರೆ ಟೆಕ್ಸ್‌ಟೈಲ್ ಕೈಗಾರಿಕೆಗಳ ಗತಿ ಪವಲೂಂ, ಇನ್ನು 3-4 ವರ್ಷಗಳವರೆಗೆ ತಡೆಹಿಡಿಯ ಬಹುದಾಗಿತ್ತು.

2. ವಾಜಪೇಯಿ ಸರ್ಕಾರಕ್ಕೆ ಪ್ರಿಯವಾದ ಸಂಘಟನೆ (WTO) ವಿಶ್ವ ವಾಣಿಜ್ಯ ಶರತ್ತುಗಳ ಪ್ರಕಾರವೇ ಆಮದು ತೆರಿಗೆಯನ್ನು ಜಾಸ್ತಿ ಮಾಡುವುದರ ಮೂಲಕ ವಿದೇಶಿ ವಸ್ತುಗಳ ಆಮದನ್ನು ಕಡಿಮೆ ಮಾಡಿ ದೇಶಕ್ಕೆ ಅಗತ್ಯವಾಗಿ ಬೇಕಾಗಿರುವ ವಿದೇಶಿ ವಿನಿಮಯ ತೆರಿಗೆಯನ್ನು ಹೆಚ್ಚಿಸಬಹುದಾಗಿತ್ತು. ಅಮೇರಿಕಾ, ಜಪಾನ್, ಇಂಗ್ಲೇಂಡ್ ಮೊದಲಾದ ದೇಶಗಳು ಈ ಮೂಲಕವೇ ತಮ್ಮ ಕೈಗಾರಿಕೆಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಆದರೆ, ವಾಜಪೇಯಿ ಸರಕಾರ ಆಮದು ತೆರಿಗೆಯನ್ನು ಹೆಚ್ಚಿಸುವುದರ ಬದಲಾಗಿ 2500 ಕೋಟಿ ರೂಪಾಯಿಗಳಷ್ಟು ತೆರಿಗೆ ಕಡಿಮೆ ಮಾಡಿದೆ. ಬದಲಾಗಿ, ದೇಶದ ಒಳಗಡೆ ಉತ್ಪಾದಿಸುವ ವಸ್ತುಗಳ ಮೇಲೆ 4500 ಕೋಟಿ ರೂಪಾಯಿಗಳಷ್ಟು ಅಬಕಾರಿ ಸುಂಕವನ್ನು ಹೆಚ್ಚಿಸಿದೆ. ಇದರಿಂದ ವಿದೇಶಗಳಿಂದ ಬರುವ ವಸ್ತುಗಳಿಗೆ ದರ ಕಡಿಮೆಯಾಗಿ ದೇಶದೊಳಗಡೆ ಉತ್ಪಾದಿಸುವ ವಸ್ತುಗಳ ಬೆಲೆ ಹೆಚ್ಚಾಗಲಿದೆ. ಇದರಿಂದ ಯಾರಿಗೆ ಅನುಕೂಲ? ದೇಶದ ಕೈಗಾರಿಕೆಗಳು ನಾಶವಾಗಿ ವಿದೇಶಿ ಕಂಪೆನಿಗಳಿಗೆ ಲಾಭವಾಗಲಿದೆ. ಮಿಗಿಲಾಗಿ ಬಿಜೆಪಿಯ ಬೆಂಬಲಿಗರಾಗಿರುವ, ದೊಡ್ಡ ವ್ಯಾಪಾರಸ್ಥರಿಗೆ ಅನುಕೂಲವಾಗಲಿದೆ.

ಬೆಲೆ ಕಡಿಮೆ ಆದರೆ ಒಳ್ಳೆಯದಲ್ಲವೆ? ಇದು ಎಲ್ಲಾ ವಿಭಾಗದ ಜನರು ಕೇಳುವ ಸಾಮಾನ್ಯ ಪ್ರಶ್ನೆ ಬೆಲೆ ಕಡಿಮೆ ಆಗುವುದಾದರೆ ನಾವು ಏಕೆ ವಿರೋಧಿಸಬೇಕು. ಬೆಲೆ ಕಡಿಮೆ ಆಗುವುದು ಒಳ್ಳೆಯದು ಆದರೆ ಯಾರ ಸಮಾಧಿಯ ಮೇಲೆ?

ನೂರಕ್ಕೆ ಎಪ್ಪತ್ತೈದರಷ್ಟು ಕೃಷಿಯ ಮೇಲೆ ಅವಲಂಬಿತರಾಗಿರುವ ಜನರನ್ನು ದಾರಿದ್ರಕ್ಕೆ ತಳ್ಳಿ ದೊಡ್ಡ ಪ್ರಮಾಣದಲ್ಲಿರುವ ಸಣ್ಣಕೈಗಾರಿಕೆಗಳ ಕಾರ್ಮಿಕರನ್ನು ಬೀದಿ ಪಾಲು ಮಾಡಿ, ದರ ಕಡಿಮೆ ಆದರೆ ಅದರ ಲಾಭಯಾರಿಗೆ? ದೊಡ್ಡ ದೊಡ್ಡ ವ್ಯಾಪಾರಸ್ಥರಿಗೆ ಸಾಮ್ರಾಜ್ಯ ಶಾಹಿ ದೇಶಗಳಿಂದ ಪ್ರೇರಿತರಾಗಿರುವ ವಿದೇಶಿ ಹಣಕಾಸು ಸಂಸ್ಥೆಗಲಿಗೆ ಮತ್ತು ಕೈಗಿರಿಕೆಗಳಿಗೆ ಲಾಭವಾಗಿ ಬಡ ಭಾರತೀಯ ನಿರ್ಗತಿಕನಾಗುತ್ತಾನೆ ಅಷ್ಟೆ. ಇದರ ವಿರುದ್ಧ ಸಮಸ್ತ ಜನರ ಸುಧೀರ್ಘ ಹೋರಾಟವೊಂದೇ ಈ ಮಾರ್ಗವನ್ನು ಬದಲಿಸಬಹುದು. ಈ ಹೋರಾಟ ಎಷ್ಟು ತೀವ್ರವಾಗಬೇಕೆಂದರೆ ವಾಜಪೇಯಿಸರಕಾರ ತನ್ನ ಖುರ್ಚಿಯನ್ನು ಖಾಲಿ ಮಾಡುವವರೆಗೂ ಮುಂದುವರಿಯಬೇಕು.

ಬಾಲಕೃಷ್ಣ ಶೆಟ್ಟಿ

ಉದಾರೀಕರಣಗೊಂಡ ಭ್ರಷ್ಟಾಚಾರ

ಪುಟ 5 ರಿಂದ

ಒಂದು ವಿದೇಶಿ ಕಂಪನಿಯು ಕೂಟಕ್ಕೆ ಮಾರಲಾಯಿತು. ಅದಕ್ಕೆ ಹೇಳಿದ ಬೆಲೆ 16 ಕೋಟಿ ರೂ. ಆ ಗಣಿ ಹಿಂದಿನ ಎರಡು ದಶಕಗಳಲ್ಲಿ 1765 ಕೋಟಿ ರೂ. ಲಾಭ ಮಾಡಿತ್ತು. ಈಗ ಒಂದೆಡೆ ಸಾರ್ವಜನಿಕ ವಲಯದ ಘಟಕವನ್ನು, 5000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಬಾಲ್ಕೊವನ್ನು 551 ಕೋಟಿ ರೂ.ಗಳಿಗೆ ಒಂದು ಖಾಸಗಿ ಕಂಪನಿಗೆ ಸಾರಾಸಗಟು ಮಾರಲಾಗಿದೆ.

ಕಳೆದ ಒಂದು ದಶಕದಲ್ಲಿ ಇಂತಹ ಹಗರಣಗಳ ಸಾಲುಸಾಲನ್ನೇ ಕಂಡಿದ್ದೇವೆ. ಆದರೆ ಸಾರ್ವಜನಿಕ ಸ್ಮರಣೆ ಅಷ್ಟು ಹಿಂದೆ ಹೋಗುವುದಿಲ್ಲ. ಸಾರ್ವಜನಿಕ ಖಜಾನೆಗೆ 20,000 ಕೋಟಿ ರೂ.ಗಳಿಗೆ ನಷ್ಟ ಮಾಡಿ ಹಿಮಾಚಲ್ ಫ್ಯೂಚರಿಸ್ಟಿಕ್ ಕಂಪನಿಗೆ ಪ್ರಯೋಜನ ದೊರಕಿಸಿಕೊಟ್ಟ 'ವ್ಯವಹಾರ' ದ ನೆನಪು ಯಾರಿಗಿದೆ?

ತೆಹಲ್ಕಾ ಟೇಪು ಬಯಲಿಗೆ ಬರುವ ಸ್ವಲ್ಪವೇ ಮೊದಲು 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಧಾನ ಮಂತ್ರಿಗಳ ಕಛೇರಿ(ಪಿಎಂಒ) ಕೆಲವು ದೊಡ್ಡ ಬಂಡವಾಳಿಗರಿಗೆ ಅನುಕೂಲ ಮಾಡಿಕೊಡಲು ಸಂಬಂಧಪಟ್ಟ ಇಲಾಖೆಗಳನ್ನು ಬದಿಗೊತ್ತಿ, ಅವರಿಗೆ ಅನುಕೂಲ ಮಾಡಿಕೊಂಡ ಧೋರಣೆಗಳನ್ನು ರೂಪಿಸುವಲ್ಲಿ ಎಂತಹ ಪಾತ್ರ ವಹಿಸುತ್ತಿದೆ ಎಂಬ ಬಗ್ಗೆ ವರದಿ ಪ್ರಕಟವಾಗಿತ್ತು, ಪಿಎಂಒ ದಲ್ಲಿನ ಅಧಿಕಾರಿಗಳಿಗೆ ಚಿತಾವಣೆ ನೀಡಿದ್ದಾರೆ. ಪ್ರಭಾವ ಬೀರಿದ್ದಾರೆ ಎಂದು ಎರಡು ಅತಿದೊಡ್ಡ ವಾಣಿಜ್ಯ [illegible] ಅತ್ಯಂತ ಕಳಂಕಿತ ಬಂಡವಾಳಿಗ ಗುಂಪುಗಳಾದ ಅಂಬಾನಿಗಳು ಮತ್ತು ಹಿಂದುಜಾಗಳ ಹೆಸರನ್ನು ನೇರವಾಗಿ ಅದರಲ್ಲಿ ಪ್ರಸ್ತಾಪಿಸಲಾಗಿದೆ. ಸರ್ಕಾರದ ಒಬ್ಬ ಮಾಡಿ ಕಾರ್ಯದರ್ಶಿ ಇ.ಎ.ಎಸ್.ಶರ್ಮಾ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಇವು ವಾಸ್ತವಾಂಶಗಳು ಎಂದು ದೃಢಪಡಿಸಿದ್ದಾರೆ.

ಸರ್ಕಾರದ ಖಾಸಗೀಕರಣ

ಈ ರೀತಿ ಸರ್ಕಾರವನ್ನೇ ಖಾಸಗೀಕರಿಸುವ ದೊಡ್ಡ ಬಂಡವಾಳಶಾಹಿ ಗುಂಪುಗಳ, ಬಹುರಾಷ್ಟ್ರೀಯ ಕಂಪನಿಗಳ ಪ್ರಯತ್ನ ದೇಶದ ಪ್ರತಿಯೊಬ್ಬ ನಾಗರಿಕನಲ್ಲೂ ಆತಂಕ ಮೂಡಿಸಬೇಕು. ಬಿಜೆಪಿ ನೇತೃತ್ವದ ಸರ್ಕಾರ ಮತ್ತು ದೊಡ್ಡ ಬಂಡವಾಳಿಗರ ಗುಂಪುಗಳ ನಡುವಿನ ಅಪವಿತ್ರ ಮೈತ್ರಿಯನ್ನು ಶಿಖರಕ್ಕೊಯ್ದಿದೆ.

ಕೆಲವು ವರ್ಷಗಳ ಹಿಂದೆ ಜೈನ್ ಹವಾಲಾ ಹಗರಣ ಭುಗಿಲೆದ್ದಿತು. ಇದು ಅತ್ಯಂತ ಹೀನ ಭ್ರಷ್ಟಾಚಾರದ ಹಗರಣಗಳಲ್ಲಿ ಒಂದು. ಲಂಚದ ಹಣ ಹವಾಲಾ ಮೂಲಕ ಬಂತು, ಅಲ್‌ಸ್ತೋಂ, ಎ.ಬಿ.ಬಿ. ಮುಂತಾದ ಬಹುರಾಷ್ಟ್ರೀಯ ಕಂಪನಿಗಳು ಕಂಟ್ರಾಕ್ಟ್ ಪಡೆಯಲು ಇವನ್ನು ಕೊಟ್ಟವು. ಜೈನ್ ಎಂಬ ಉದ್ಯಮಿಯ ಡೈರಿಯ ಪ್ರಕಾರ 115 ಮಂದಿಗೆ ಒಟ್ಟು 65.41 ಕೋಟಿ ರೂ. ಲಂಚ ಸಲ್ಲಿಸಲಾಯಿತು. ಇದರಲ್ಲಿ ಸಿಬಿಐ 55 ರಾಜಕಾರಣಿ [illegible] ಅಧಿಕಾರಿಗಳನ್ನು ಗುರುತಿಸಿತು [illegible] ಈ ಪಟ್ಟಿಯಲ್ಲಿ ನರಸಿಂಹರಾವ್ ಮಂತ್ರಿಮಂಡಳದ ಮೂವರು ಮಂತ್ರಿಗಳು, ಸಾರ್ವಜನಿಕ ವಲಯದ ಉದ್ದಿಮೆಗಳ ಉನ್ನತ ಅಧಿಕಾರಿಗಳು ಮತ್ತು ಬಂಡವಾಳಶಾಹಿ ಪಕ್ಷಗಳ ರಾಜಕಾರಣಿಗಳ ಹೆಸರುಗಳು ಇದ್ದವು. ಈ ಪಟ್ಟಿಯಲ್ಲಿ ಎಲ್.ಕೆ.ಅಡ್ವಾಣಿಯವರ ಹೆಸರೂ ಇದ್ದು ಅವರು ಜೈನ್ ಸೋದರರಿಂದ ಒಟ್ಟು 60 ಲಕ್ಷ ರೂ. ಪಡೆದಿರುವುದಾಗಿ ಕಂಡು ಬಂತು. ಅಡ್ವಾಣಿ ಇದನ್ನು ಪಡೆದೇ ಇಲ್ಲ ಎಂದು ನಿರಾಕರಿಸಿದರೆ ಇನ್ನೊಬ್ಬ ಬಿಜೆಪಿ ಮುಖಂಡ ಮದನ್‌ಲಾಲ್ ಖುರಾನಾ ಅವರು ಅಡ್ವಾಣಿ ಪಕ್ಷದ ಅಧ್ಯಕ್ಷರಾಗಿದ್ದಾಗ ಪಕ್ಷದ ಖರ್ಚಿಗಾಗಿ ಈ ಹಣ ಪಡೆದರು ಎಂದಿದ್ದರು. ಪಕ್ಷದ ಖರ್ಚಿಗಾಗಿ ಯಾದ್ದರಿಂದ ಭ್ರಷ್ಟಾಚಾರ ಇಲ್ಲ! ಅಂದರೆ ಬಂಗಾರು ಲಕ್ಷ್ಮಣ್ ತಾನು ಪಕ್ಷಕ್ಕಾಗಿ ಹಣ ಪಡೆದೆ ಎಂದಾಗ ಬಿಜೆಪಿಯ ಪರಂಪರೆಯನ್ನೇ ಮುಂದುವರಿಸಿದ್ದಾರೆ!

ಸಿಬಿಐ ಈ ಬಗ್ಗೆ ತನಿಖೆ ನಡೆಸಿತು, ಆದರೆ ಸುಪ್ರಿಂಕೋರ್ಟ್ ಮಧ್ಯೆ ಪ್ರವೇಶದ ನಂತರವೇ ಚಾರ್ಜ್‌ಶೀಟ್‌ಗಳನ್ನು ಹಾಕಲಾಯಿತು. ಎರಡು ವರ್ಷಗಳ ನಂತರ ಎಲ್ಲಾ ಆಪಾದಿತರನ್ನು ದೋಷ ಮುಕ್ತಗೊಳಿಸಲಾಯಿತು. ದಿಲ್ಲಿ ಹೈಕೋರ್ಟ್ ನ್ಯಾಯಾದೀಶರು ಡೈರಿ ಒಂದು ಲೆಕ್ಕಪತ್ರ ಪುಸ್ತಕವಲ್ಲವಾದ್ದರಿಂದ ಅದನ್ನು ಸಾಕ್ಷಿಯಾಗಿ ಪರಿಶೀಲಿಸಲು ಸಾಧ್ಯವಿಲ್ಲ ಎಂದು ಸಾರಿದರು. ಹೀಗೆ ಸ್ವತಂತ್ರ ಭಾರತದ ದೊಡ್ಡ ಭ್ರಷ್ಟಾಚಾರದ ಹಗರಣಗಳಲ್ಲಿ ಒಂದನ್ನು ಹುಗಿದು ಹಾಕಲಾಯಿತು.

ವಾಜಪೇಯಿ ಸರ್ಕಾರ ಈ ಹೊಲಸು ಕೆಲಸಗಳಲ್ಲಿ ನರಸಿಂಹ ರಾವ್ ಸರ್ಕಾರವನ್ನು ಮೀರಿಸಿದೆ. [illegible] ತೋರಿಸಿರುವವರ ಮೇಲೆ ಕ್ರಿಮಿನಲ್ ಕೇಸುಗಳನ್ನು ಕೂಡಾ ಅದು ಆರಂಭಿಸಿಲ್ಲ. ಅವರ ಪ್ರಕಾರ ತಪ್ಪೇನೂ ನಡೆದಿಲ್ಲ. ಏಕೆಂದರೆ ಬಂಗಾರು ಲಕ್ಷ್ಮಣ್, ಜಯಾ ಜೆಟ್ಲಿ ದುಡ್ಡು ಪಡೆದಿದ್ದರೆ ಅದು ಪಕ್ಷಕ್ಕಾಗಿ ವ್ಯವಹಾರವೇ ಕಾಲ್ಪನಿಕ, ಆದ್ದರಿಂದ ಲಂಚವೂ ಕಾಲ್ಪನಿಕ ಈಗ ಆಗಬೇಕಾಗಿರುವುದು ದೇಶದ ಒಳಗಿನ ಹೊರಗಿನ ಶತ್ರುಗಳ ಈ ರಾಜಕೀಯ ಪಿತೂರಿಯನ್ನು ಬಯಲಿಗೆಳೆಯುವುದು! ಹೀಗೆ ಹೇಳುವ ವಾಜಪೇಯಿ ಸರ್ಕಾರ ವ್ಯವಸ್ಥೆಯನ್ನು ಶುದ್ಧಗೊಳಿಸುತ್ತದೆ ಎಂದು ನಿರೀಕ್ಷಿಸುವುದು ಆರ್.ಎಸ್.ಎಸ್. ಧರ್ಮನಿರಪೇಕ್ಷವಾಗುತ್ತದೆ ಎಂದು ನಿರೀಕ್ಷಿಸುವುದು ಎರಡೂ ಒಂದೇ.

ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಒಟ್ಟಾರೆ ರಾಜಕೀಯ ಹೋರಾಟದಿಂದ ಪ್ರತ್ಯೇಕಿಸಿ ನೋಡುವುದು ಸಾಧ್ಯವಿಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಇರುವವರೆಗೆ ಅದು ವಿದೇಶಿ ಮತ್ತು ದೇಶಿ ಗುತ್ತೇದಾರಿಗಳನ್ನು, ಅವರ ಲಂಚಾವತಾರಿ ಏಜೆಂಟರನ್ನು ಸಂತುಷ್ಟಗೊಳಿಸಲು ಯಾವುದೇ ಹಿಂಜರಿಕೆಯಿಲ್ಲದೆ, ನಗ್ನ ಧೋರಣೆಗಳ ಮೂಲಕ ವ್ಯವಸ್ಥೆಯನ್ನು ಕಲುಷಿತಗೊಳಿಸುತ್ತಲೇ ಇರುತ್ತದೆ. ಇಂತಹ ಒಂದು ಕೊಳ್ಳೆಕೋರ ವ್ಯವಸ್ಥೆ ಭ್ರಷ್ಟಾಚಾರವನ್ನು ಪೋಷಿಸಿ, ಬೆಳೆಸುತ್ತಿರುವಾಗ ಸಾರ್ವಜನಿಕ ನಿಧಿಯ ಈ ಲೂಟಿ ಹಾಗೂ ಜನರನ್ನು ಬಲಿಗೊಟ್ಟು ಬೆಳೆಯುವ ಲೂಟಿಕೋರರಿಗೆ ತಡೆ ಹಾಕಲು ಹೋರಾಟ ನಡೆಸುವುದು ಅಗತ್ಯ. ಇದರಲ್ಲಿ ಮೊದಲ ಹೆಜ್ಜೆಯೆಂದರೆ ಎನ್‌ಡಿಎ ಸರ್ಕಾರವನ್ನು ಕೆಳಗಿಳಿಸುವುದು ಮತ್ತು ಭ್ರಷ್ಟಾಚಾರವನ್ನು [illegible]

ಹಂಚು ಉದ್ಯಮ

ದಕ್ಕದ ಕನಿಷ್ಠ ಕೂಲಿ: ದೀರ್ಘ ಹೋರಾಟ

ಕೆ. ಶಂಕರ್, ಕುಂದಾಪುರ

ಶತಮಾನಗಳ ಇತಿಹಾಸವಿರುವ ಹಂಚು ಉದ್ಯಮದಲ್ಲಿ ಸಾವಿರಗಟ್ಟಲೆ ಕಾರ್ಮಿಕರು ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಯುತ್ತಿದ್ದಾರೆ. ಅಸಂಘಟಿತ ಕ್ಷೇತ್ರವಾದ ಈ ಕೈಗಾರಿಕೆಯಲ್ಲಿ ಕೂಲಿ ದುಡಿಯುತ್ತಿರುವ ಕಾರ್ಮಿಕರು ಕ್ರಮೇಣ ಸಂಘಟಿತರಾಗಿ, ಸಂಘದ ನೇತೃತ್ವದಲ್ಲಿ ಕೂಲಿ ಹೆಚ್ಚಳ ಹಾಗೂ ಇತರ ಬೇಡಿಕೆಗಳಿಗಾಗಿ ನಿರಂತರ 'ಸಂಘಟನೆ ಹೋರಾಟಗಳಿಂದ ಆರ್ಥಿಕ ಸವಲತ್ತು ಹಾಗೂ ಕಾಯಿದೆ ಬದ್ಧ ಸವಲತ್ತುಗಳನ್ನು ಪಡೆಯಲು ಸಾಧ್ಯವಾಯಿತು. ಸಂಘಟನೆ ಮತ್ತು ಹೋರಾಟ ಇಲ್ಲದಿದ್ದ ಕಾಲದಲ್ಲಿ ಯಾವ ಸವಲತ್ತುಗಳೂ ಸಿಗಲಿಲ್ಲ.

ಕೇರಳ ರಾಜ್ಯದಲ್ಲಿ ಬಾಸೆಲ್ ಮಿಷನ್ ಮತ್ತು ಕೋಮನ್ ವೆಲ್ತ್ ಸಂಸ್ಥೆಗಳಿಂದ ಹಂಚು ಉತ್ಪಾದನೆ ಆರಂಭವಾಗಿ ಅದರ ಶಾಖೆಗಳು ಮಂಗಳೂರಿನಲ್ಲಿ ಅನಂತರ ಸ್ಥಾಪನೆಗೊಂಡು ಲಾಭದಾಯಕವಾಗಿ ಉದ್ಯಮ ಬೆಳೆದು ಬಂತು.

ಕರ್ನಾಟಕ ರಾಜ್ಯದಲ್ಲಿ ಮೊದಲು ಮಂಗಳೂರಿನಲ್ಲಿ ಆರಂಭಗೊಂಡ ಹಂಚು ಉದ್ಯಮ, "ಮಂಗಳೂರು ಹೆಂಚು ಅಂತ ಪ್ರಚಾರವನ್ನು ಗಿಟ್ಟಿಸಿಕೊಂಡು ಹಾಗೆಯೇ ಉಡುಪಿ ಮತ್ತು ಕುಂದಾಪುರದಲ್ಲಿಯೂ ಕೈಗಾರಿಕಾ ಘಟಕಗಳು ಸ್ಥಾಪನೆಗೊಂಡವು. ಕರಾವಳಿ ಪ್ರದೇಶಗಳಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶತಮಾನಗಳ ಇತಿಹಾಸವಿರುವ ಹಂಚು ಉದ್ಯಮದಲ್ಲಿ ಸಾವಿರಗಟ್ಟಲೆ ಕಾರ್ಮಿಕರು ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಯುತ್ತಿದ್ದಾರೆ. ಅಸಂಘಟಿತ ಕ್ಷೇತ್ರವಾದ ಈ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರು ಕ್ರಮೇಣ ಸಂಘಟಿತರಾಗಿ, ಸಂಘದ ನೇತೃತ್ವದಲ್ಲಿ ಕೂಲಿ ಹೆಚ್ಚಳ ಹಾಗೂ ಇತರ ಬೇಡಿಕೆಗಳಿಗಾಗಿ ನಿರಂತರ 'ಸಂಘಟನೆ ಹೋರಾಟಗಳಿಂದ ಆರ್ಥಿಕ ಸವಲತ್ತು ಹಾಗೂ ಕಾಯಿದೆ ಬದ್ಧ ಸವಲತ್ತುಗಳನ್ನು ಪಡೆಯಲು ಸಾಧ್ಯವಾಯಿತು. ಸಂಘಟನೆ ಮತ್ತು ಹೋರಾಟ ಇಲ್ಲದಿದ್ದ ಕಾಲದಲ್ಲಿ ಯಾವ ಸವಲತ್ತುಗಳೂ ಸಿಗಲಿಲ್ಲ .

ಆಡಳಿತ ವರ್ಗ ಕೊಟ್ಟಿದ್ದೇ ಕೂಲಿ . ಹೆಚ್ಚು ಕೂಲಿ ಕೇಳಿದಲ್ಲಿ ಕೆಲಸದಿಂದ ವಜಾ. ಈ ಪರಿಸ್ಥಿತಿ ಈ ಹಿಂದೆ ಹೆಚ್ಚು ಪ್ರದೇಶಗಳಲ್ಲಿ ಇದ್ದು ಬದಲಾಗಿದೆ; ಆದರೆ ಈಗಲೂ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಇದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಸುಮಾರು 67 ಹಂಚು ಕಾರ್ಖಾನೆಗಳಿದ್ದು ಹ್ಯಾಂಡ್ ಪ್ರೆಸ್‌ಗಳಿಂದ (ಕೈ ಒತ್ತು) ಹಂಚು-ದೊಂಬೆಗಳನ್ನು ಉತ್ಪಾದನೆ ಮಾಡುತ್ತಿದ್ದರು. ಹಂಚು-ದೊಂಬೆಗಳನ್ನು ಪ್ರೆಸ್ ಮಾಡಲು ಕೂಡಾ ಕಾರ್ಮಿಕರ ದೈಹಿಕ ಶಕ್ತಿಯ ಅಗತ್ಯವಿತ್ತು. ಕಾರ್ಖಾನೆಯ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಲು ಕಾರ್ಮಿಕರ ಶ್ರಮಶಕ್ತಿಯೇ ಮೂಲ ಆಧಾರವಾಗಿ 8 ಗಂಟೆಯಲ್ಲಿ ಆಗುವ ಕೆಲಸವನ್ನು ನಿಗದಿತ ಕಾರ್ಮಿಕರಿಂದ ನಿಗದಿತ ಉತ್ಪದನೆಯೊಂದಿಗೆ 'ಶ್ರಮ ಭಾರದ ಒಪ್ಪಂದದಂತೆ ದಿನದ ಹಾಜರಿ ಪದ್ಧತಿ ಅಂದರೆ 'ಟಾಸ್ಕ್ ಪದ್ಧತಿ' ಜಾರಿಗೆ ಬಂತು. ಕೈಗಾರಿಕೆ ಆರಂಭದಿಂದಲೂ 8 ಗಂಟೆಗೆ ಸಮಾನವಾದ 'ಟಾಸ್ಕ್ ಪದ್ಧತಿ'ಯನ್ನು ಕಾರ್ಖಾನೆಗಳ ಮಾಲಿಕರು ಒಪ್ಪಿ ಉತ್ಪಾದನಾ ಕ್ರಮಗಳು ಬೆಳೆದು ಬಂದವು.

ಹ್ಯಾಂಡ್ ಪ್ರೆಸ್‌ಗಳು ಹೊಂದಿರುವ ಹಂಚು ಉದ್ಯಮದಲ್ಲಿ ದಿನಕ್ಕೆ ಹಂಚಿನ ಉತ್ಪಾದನೆ ಕಡಿಮೆಯಾದರೂ, ಉತ್ಪಾದನಾ ವೆಚ್ಚ ಬಹಳ ಕಡಿಮೆ ಇರುವುದರಿಂದ ಅಂದು ಅತ್ಯಂತ ಲಾಭದಾಯಕವಾಗಿ ಕೈಗಾರಿಕಾ ಪರಿಸ್ಥಿತಿ ಇತ್ತು.

ಹೇರಳ ಲಾಭ ಸಂಪಾದನೆ

ಕೈಗಾರಿಕೆಯ ಮೇಲಿನ ಆಸಕ್ತಿ ಇರುವ ಆಡಳಿತಿ ವರ್ಗ ಕಾರ್ಖಾನೆಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿ ಹೇರಳ ಲಾಭ ಸಂಪಾದನೆಗೆ ಮುಂದಾದರು. ಕ್ರಮೇಣ ಯಂತ್ರಗಳನ್ನು ಅಳವಡಿಸಲು ಬಂಡವಾಳವನ್ನು ಹೂಡಿಹ ಡಿವಾರಿಂಗ್, ರಿವಾಲ್ವಿಂಗ್ ಪ್ರೆಸ್, ಆಟೋಮೆಟಿಕ್ ದೊಂಬೆ ಪ್ರೆಸ್‌ಗಳನ್ನು ಜೋಡಿಸಲು ನಿರ್ಧರಿಸಿದರು: ಹ್ಯಾಂಡ್ ಪ್ರೆಸ್‌ಗಳನ್ನು ತೆಗೆದು ರಿವಾಲ್ವಿಂಗ್ ಪ್ರೆಸ್‌ಗಳನ್ನು ಅಳವಡಿಸಿದಾಗ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡಿ, ಉತ್ಪಾದನೆಯನ್ನು 4-5 ಪಟ್ಟು ಹೆಚ್ಚು ಮಾಡಿದರು. ನಿರಂತರ ಬೆಂಕಿ ನಿಲ್ಲಿಸುವ ಅವೆ, ಹಂಚು-ದೊಂಬೆಗಳನ್ನು ಬೇಯಿಸುವ ವ್ಯವಸ್ಥೆ, ತೊಟ್ಟಿಲುಗಳಲ್ಲಿ ಹಂಚು-ದೊಂಬೆಗಳನ್ನು ಒಯ್ಯುವ ಇತ್ಯಾದಿ ಬದಲಾವಣೆಗಳಿಂದ ಇನ್ನೂ ಲಾಭ ದಾಯಕವಾಗಿ ಕೈಗಾರಿಕೆ ನಡೆಯುವಂತಾಯಿತು.

ಈ ವ್ಯವಸ್ಥೆಯಲ್ಲಿ ಹಲವಾರು ವಿಭಾಗಗಳು ರಿವಾಲ್ವಿಂಗ್ ಪ್ರೆಸ್ಸುಗಳ ಸಂಖ್ಯೆ ಹೆಚ್ಚಿದ ಹಾಗೇ ಅದಕ್ಕನುಗುಣವಾಗಿ ಕಾರ್ಮಿಕರ ಸಂಖ್ಯೆ ಕೂಡ 60-70 ಇದ್ದದ್ದು, 150 ರಿಂದ 200 ರ ವರೆಗೂ ಹೆಚ್ಚಾಯಿತು. 4-5 ಸಾವಿರ ಹಂಚು ದಿನಕ್ಕೆ ಉತ್ಪಾದನೆ ಯಾಗುತ್ತಿದ್ದದ್ದು 25-30 ಸಾವಿರಕ್ಕೆ ಹೆಚ್ಚಳವಾಯಿತು.

ಯಾಂತ್ರೀಕರಣದಿಂದಾಗಿ ಹಂಚು ಉತ್ಪಾದನೆ ಹೆಚ್ಚಾಗಿ, ಬೇಡಿಕೆ ಚೆನ್ನಾಗಿದ್ದು, ಲಾಭದಾಯಕವಾಗಿ ಕೈಗಾರಿಕೆ ಬೆಳೆದು ಉಡುಪಿ, ಕುಂದಾಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಹರಡಿ ಕಾರ್ಖಾನೆಗಳ ಸಂಖ್ಯೆ ಹೆಚ್ಚಾಯಿತು. ಇನ್ನೂ ಪೂರ್ಣ ಯಾಂತ್ರೀಕರಣ ಮಾಡಲು ಸಾಧ್ಯಾವಾಗದೇ ಕಾರ್ಮಿಕರ ಶ್ರಮಶಕ್ತಿಯ ಅವಶ್ಯಕತೆ ಹೆಚ್ಚಿನ ವಿಭಾಗಗಳಲ್ಲಿ ತೀರಾ ಅವಶ್ಯವಾಗಿ ಬಂದಿದೆ.

> **ಕಂಚಾಗುವ ಹಂಚು**
>
> ಕೂಲಿಗಳು ಬೆವರಿಳಿಸಿ ರಚಿಸಿರುವ ಹಂಚು
> ಮಾಲಕನ ಕೈಸೇರಿ ಆಗುವವು ಕಂಚು
> ಆದರೂ ಮಾಲಕನು ಹಾಕುತ್ತ ಹೊಂಚು
> ಕಾರ್ಮಿಕರ ಸುಲಿವುದಕೆ ನಡೆಸುತಿಹ ಸಂಚು
>
> **- ವಿಡಂಬಾರಿ**

ಬೇರೆ ಉದ್ಯಮಗಳತ್ತ

ಕಳೆದ 15- 20 ವರ್ಷಗಳ ಈ ಅವಧಿಯಲ್ಲಿ ಮಂಗಳೂರಿನ ನಗರ ಪ್ರದೇಶಗಳಲ್ಲಿ ಭೂಮಿಯ ಬೆಲೆ ಹೆಚ್ಚಳದಿಂದಾಗಿ ಹಂಚು ಕಾರ್ಖಾನೆಗಳ ಮೇಲಿನ ಆಸಕ್ತಿ ಕಡಿಮೆಯಾಯಿತು. ಕ್ರಮೇಣ ಲಾಭದ ಅಂಶ ಕಡಿಮೆಯಾಗುವ ಕಾರಣ, ಉತ್ಪಾದನೆ ಹೆಚ್ಚಳಕ್ಕೆ ಹೊಂದಿಕೊಂಡು ಬೇಡಿಕೆ ಸಾಕಷ್ಟು ಇಲ್ಲದೇ ಬೇರೆ ಉದ್ಯಮ ಆರಂಭಿಸುವ ಪ್ರಯುಕ್ತ ಹೆಚ್ಚಿನ ಕಾರ್ಖಾನೆಗಳು ಮುಚ್ಚಿವೆ ಹೊರೆತು ಕನಿಷ್ಟ ಕೂಲಿ ಕೊಡಲಿಕ್ಕೆ ಸಾಧ್ಯವಾಗದೆ ನಷ್ಟದಿಂದ ಮುಚ್ಚಿದ್ದಲ್ಲ. ಉಡುಪಿ, ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಖಾನೆಗಳ ಸಂಖ್ಯೆ ಹೆಚ್ಚಾಗಿವೆ. ಹಂಚು ಉತ್ಪಾದನೆ ಕೂಡಾ ಹೆಚ್ಚಾದ ಹಾಗೆಯೇ ಅದಕ್ಕನುಗುಣವಾಗಿ ಬೇಡಿಕೆ ಸಾಕಷ್ಟು ಇಲ್ಲದಿರುವ ಪರಿಸ್ಥಿತಿ ಉಂಟಾಗಿದೆ.

ಬೇಡಿಕೆ ಕಡಿಮೆಯಾದುದರಿಂದ ಇತ್ತೀಚೆಗೆ ಹಂಚು ಬೆಲೆ ಹೆಚ್ಚು ಮಾಡಲು ಸಾಧ್ಯವಾಗುತ್ತಿಲ್ಲ. ಮಾಲಕರ ಮಧ್ಯೆ ಪರಸ್ಪರ ಸ್ಪರ್ಧೆ ಕೂಡಾ ಒಂದು ಕಾರಣವಾಗಿದೆ. ಈ ಹಿಂದೆ ಸಿಗುವ ಲಾಭ ಇತ್ತೀಚೆಗೆ ಕಡಿಮೆಯಾಗಿದೆ ಹೊರತು ಕನಿಷ್ಟ ಕೂಲಿ ಕೊಡಲು ಸಾಧ್ಯವಾಗದ ಸ್ಥಿತಿ ಬರಲಿಲ್ಲ. ಮಾರುಕಟ್ಟೆಯಲ್ಲಿ ಏರಿಳಿತ ಇತ್ತೀಚೆಗೆ ಆಗುತ್ತಿದೆ. ಎಲ್ಲಾ ಕೈಗಾರಿಕೆಗಳಿಗೂ ಸಮಸ್ಯೆಗಳಿದ್ದ ಹಾಗೆ ಈ ಕೈಗಾರಿಕೆಗಳಿಗೂ ಸಮಸ್ಯೆಗಳಿವೆ. ಸಮಸ್ಯೆಗಳಿಗೆ ಕಾರ್ಮಿಕರು ಕಾರಣವಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನುಸರಿಸುತ್ತಿರುವ ನೀತಿಯಿಂದಾಗಿ ಸಮಸ್ಯೆಗಳು ಬರುತ್ತಿವೆ. ಕಾರ್ಮಿಕರ, ರೈತರ, ಬಡ ರೈತರ ಹಾಗೂ ಜನ ಸಾಮಾನ್ಯರ ಕೊಂಡುಕೊಳ್ಳುವ ಶಕ್ತಿ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಹಂಚನ್ನು ಕೊಂಡುಕೊಳ್ಳುವವರೇ ಕಷ್ಟದಲ್ಲಿದ್ದಾರೆ. ಹಂಚುಗಳ ಬದಲಿಗೆ ಇನ್ನಾವುದನ್ನೊ ಕಡಿಮೆಗೆ ಸಿಗುವುದನ್ನು ಉಪಯೋಗಿಸುವ ಸ್ಥಿತಿ ಬಂದಿದೆ. ಎಲ್ಲಾ ಸಮಸ್ಯೆಗಳ ಭಾರವನ್ನು ಬಡ ಕಾರ್ಮಿಕರ ಮೇಲೆ ಹೊರಿಸಲು ಕಾರ್ಖಾನೆಗಳ ಮಾಲಕರು ಹೊರಟಂತಿದೆ.

ಮನಬಂದಂತೆ ನಷ್ಟ ತೋರಿಕೆ

ಹಂಚು ಕೈಗಾರಿಕೆಯಲ್ಲಿ ದುಡಿಯುತ್ತಿರುವ ಸಾವಿರಗಟ್ಟಲೆ ಕಾರ್ಮಿಕರು ಇಂದು ಕ್ರೂರ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಹಂಚಿನ ಮಾರಾಟ ಬೆಲೆಗಳಲ್ಲಿ ಮಾಲಕರು ತಮ್ಮ ಮನ ಬಂದಂತೆ ಏರಿಳಿತ ಮಾಡಿ, ತಮ್ಮೊಳಗೆ ಕಟು ಸ್ಪರ್ಧೆ ಮಾಡಿಕೊಂಡು ವ್ಯಾಪಾರದಲ್ಲಿ ನಷ್ಟ ತೋರಿಸುತ್ತಾರೆ. ಈ ನಷ್ಟವನ್ನು ಕಡಿಮೆ ಕೂಲಿಯ ಮೂಲಕ ಮತ್ತು ಹೆಚ್ಚು ಶ್ರಮಭಾರದ ಮೂಲಕ ಕಾರ್ಮಿಕರ ಮೇಲೆ ಹೇರುತ್ತಾರೆ. ಇದರಿಂದಾಗಿ ಹಂಚು ಕಾರ್ಮಿಕರು ತೀವ್ರ ಶೋಷಣೆಯನ್ನು ದಬ್ಬಾಳಿಕೆಗಳನ್ನು ಅನುಭವಿಸುವಂತಾಗಿದೆ. ಪ್ರತಿಭಟಿಸಲು ಮುಂದಾದಾಗ ಕಾರ್ಮಿಕರ ಮೇಲೆ ಹಾಗೂ ಸಂಘದ ಮುಖಂಡರ ಮೇಲೆ ಅಪಪ್ರಚಾರ ಮತ್ತು ಹಲವಾರು ರೀತಿಯಲ್ಲಿ ಕಿರುಕುಳ.

ಕನಿಷ್ಟ ಕೂಲಿ ಜಾರಿಗೊಳಿಸಲು ಹೋರಾಟ

ಇಡೀ ಕೈಗಾರಿಕೆಗಳಿಗೆ ಸಮಾನ ರೂಪದ ಕನಿಷ್ಟ ಕೂಲಿ ಈ ತನಕ ಜಾರಿಯಾಗದಿರುವುದರಿಂದ ಕರಾವಳಿಯ ಮೂರು ಜಿಲ್ಲೆಗಳ ಕಾರ್ಮಿಕರ ವೇತನ ಗಳಲ್ಲಿ ಗಣನೀಯ ಪ್ರಮಾಣದ ಅಂತರಗಳಿವೆ. ಈ ರೀತಿಯಲ್ಲಿ ತಾರತಮ್ಯ ಗಳಿಂದಾಗಿಯೇ ಕಡಿಮೆ ಕೂಲಿಗೆ ದುಡಿಸುವ ಮಾಲಕರು ಕಡಿಮೆ ಬೆಲೆಗೆ ತಮ್ಮ ಉತ್ಪನ್ನವನ್ನು ಮಾರಿ, ಇತರ ಮಾಲಕರ ಮಾರುಕಟ್ಟೆಯನ್ನು ಆಕ್ರಮಿಸುತ್ತಾರೆ. ಇದರಲ್ಲಿ ಅಂತಿಮವಾಗಿ ಕಷ್ಟ-ನಷ್ಟಕ್ಕೆ ಒಳಗಾಗುವವರು ಕಾರ್ಮಿಕರು. ಹೀಗಾಗಿ ಇಡೀ ಕೈಗಾರಿಕೆಗೆ ಅನ್ವಯವಾಗುವಂತೆ ಸರಕಾರವು ಕನಿಷ್ಟ ಕೂಲಿ ನಿಗದಿ ಮಾಡಿ ಜಾರಿಗೊಳಿಸಬೇಕೆಂದು ಒತ್ತಾಯಿಸುವ ಹೋರಾಟ ಕಳೆದ 5-6 ವರ್ಷಗಳಿಂದ ನಡೆಯುತ್ತಿದೆ.

ಕನಿಷ್ಟ ಕೂಲಿಗಾಗಿ ಹಂಚು ಕಾರ್ಮಿಕರು ಈ ಹಿಂದೆ ಹೋರಾಟ ನಡೆಸುವಾಗ ಮುಖ್ಯವಾಗಿ ಮಂಗಳೂರಿನಲ್ಲಿ ಪೂರ್ತಿ ಶಾಂತಿಯುತವಾಗಿದ್ದ ಈ ಹೋರಾಟವನ್ನು ದಮನಿಸಲು ರಾಜ್ಯ ಸರ್ಕಾರವು ಅಂದು 218 ಮಂದಿ ಕಾರ್ಮಿಕರ ಮೇಲೆ ದಾವೆ ಹೂಡಿ, ಅವರ ಪೈಕಿ 15 ಮಂದಿಯನ್ನು ಬಂಧನದಲ್ಲಿ ಇಟ್ಟಿತ್ತು. ಇಂತಹ ಧೀರ ಹೋರಾಟಗಳ ಫಲವಾಗಿ ರಾಜ್ಯ ಸರಕಾರವು ದಿನಾಂಕ 8.1.1998 ರಂದು ಹಂಚು ಕೈಗಾರಿಕೆಯ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿ ಮಾಡಿ ಅಂತಿಮ ಪ್ರಕಟಣೆ ನೀಡಿತ್ತು.

ಕನಿಷ್ಟ ಕೂಲಿ: ಸುದೀರ್ಘ ಹೋರಾಟದ ಫಲ

ಆದರೆ ಕರ್ನಾಟಕ ರಾಜ್ಯಪತ್ರದಲ್ಲಿ ಅದು ಪ್ರಕಟವಾಗಬೇಕಾದರೆ ಹಂಚು ಕಾರ್ಮಿಕ ಸಂಘಗಳು ಹೈಕೋರ್ಟಿನಿಂದ ಆದೇಶ ಕಳುಹಿಸಬೇಕಾಯಿತು. ಅಂತಿಮವಾಗಿ 2000 ನೇ ಇಸವಿ ದಶಂಬರ 31 ರಂದು ಡಿಸೆಂಬರ್ ಪ್ರಕಟಣೆಯು ರಾಜ್ಯಪತ್ರದಲ್ಲಿ ಪ್ರಕಟವಾಯಿತು.

ಹೀಗೆ ಸುದೀರ್ಘ ಹೋರಾಟದ ಫಲವಾಗಿ ಬಂದಿರುವ ಕನಿಷ್ಟಕೂಲಿ ಪ್ರಕಟಣೆಯನ್ನು ಜಾರಿ ಮಾಡಲು ಮೊದಲು ಮಾಲಕರು ಒಪ್ಪದೆ ಪ್ರಕಟಣೆಯಲ್ಲಿ ದೋಷಗಳಿವೆ ಅನ್ನುವ ವಾದ ಮಾಡಿದರು. ಅನಂತರ ವಕೀಲರ ಸಲಹೆ ಮೇರೆಗೆ ತಾರೀಖು 1.4.2000 ರಿಂದ ಜಾರಿ ಮಾಡಲು ಒಪ್ಪಿಕೊಂಡು, 8 ಗಂಟೆಯ ಕೆಲಸಕ್ಕೆ ಸಂಬಂಧಪಟ್ಟ ಹೊಸ ವಾದ ಹಾಗೂ ಹಠಮಾರಿ ಧೋರಣೆಯನ್ನು ಅನುಸರಿಸಿದರು. ಇದನ್ನು ಪ್ರತಿಭಟಿಸಿ ಕನಿಷ್ಟ ಕೂಲಿ ಜಾರಿಗೆ ಒತ್ತಾಯಿಸಿ, 2001 ಫೆಬ್ರವರಿ 5 ರಿಂದ ದಕ್ಷಿಣ ಕನ್ನಡ , ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸುಮಾರು 40 ಕಾರ್ಖಾನೆಗಳಲ್ಲಿ ಸುಮಾರು 6 ಸಾವಿರ ಕಾರ್ಮಿಕರು ಅನಿರ್ದಿಷ್ಟಾವಧಿಯ ಮುಷ್ಕರ ನಡೆಸಿದರು.


ಸಂಧಾನಾಧಿಕಾರಿಗಳು ಕರೆದ ಸಂಧಾನ ಸಭೆಗಳಿಗೆ ಮೊದಲು 3 ಬಾರಿ ಗೈರುಹಾಜರಾಗಿ, ಅನಂತರ ಮಾಲಕರ ಪ್ರತಿನಿಧಿಗಳು ಹಾಜರಾದರು.

ಟಾಸ್ಕ್ ವಿಧಾನ

ಹಂಚು ಕಾರ್ಖಾನೆಗಳ ಕೆಲಸದ ವಿಧಾನದಲ್ಲಿ ಒಂದು 'ಟಾಸ್ಕ್' ಎಂಟು ಗಂಟೆಗಳ ಕೆಲಸಕ್ಕೆ ಸಮಾನ ಎಂಬುವುದು ಆರಂಭದಿಂದಲೂ ಕಾರ್ಮಿಕರೂ ಮಾಲಕರೂ ಒಪ್ಪಿಕೊಂಡು ಬಂದ ಪದ್ಧತಿ. ಈ ಹಿಂದೆ 1962 ರಿಂದ ಕನಿಷ್ಟ ಕೂಲಿ 'ಟಾಸ್ಕ್' ಆಧಾರವಾಗಿ ಜಾರಿ ಮಾಡಿದ್ದಾಗಿದೆ. 1982-1987 ರಲ್ಲಿ ಮೂಲಕೂಲಿ ಮತ್ತು ಏರಿಳಿತ ತುಟ್ಟಿಭತ್ಯೆಯನ್ನು ಕನಿಷ್ಟ ಕೂಲಿಯ ಪ್ರಕಟಣೆಯಂತೆ ಜಾರಿ ಮಾಡಲಾಗಿದೆ. ಎಲ್ಲ ಪ್ರಕಟಣೆಗಳಲ್ಲಿಯೂ 8 ಗಂಟೆಯ ಉಲ್ಲೇಖವಿತ್ತು. ಪುನಃ 8 ಗಂಟೆಯ ಬಗ್ಗೆ ಚರ್ಚಿಸಿ ಮಾಲಕರು ಕನಿಷ್ಟಕೂಲಿ ಜಾರಿ ಮಾಡದೇ ಕಾರ್ಮಿಕರು 3 ಜಿಲ್ಲೆಗಳಲ್ಲೂ ಮುಷ್ಕರಕ್ಕೆ ಇಳಿಯುವಂತಾಯಿತು.

ಕುಶಲ ಕಾರ್ಮಿಕರಿಗೆ ಮೂಲಕೂಲಿ ಮತ್ತು ಏರಿಳಿತ ತುಟ್ಟಿಭತ್ಯೆ ಸೇರಿ ರೂ. 83.21, ಅರೆಕುಶಲ ಕಾರ್ಮಿಕರಿಗೆ ರೂ. 80.76 ಮತ್ತು ಕುಶಲರಲ್ಲದವರಿಗೆ ರೂ. 75.96 ಕನಿಷ್ಟ ಕೂಲಿ ನಿಗದಿಯಾದದ್ದನ್ನು ಇಂದಿನ ಬಹಳ ಕಷ್ಟದ ದಿನಗಳಲ್ಲಿ ಕಾರ್ಮಿಕರಿಗೆ ಕೊಡುವ ಬದಲು ಮಾಲಕರು ನಿರಾಕರಿಸುತ್ತಿದ್ದಾರೆ. ಯಾರಿಗೆ ಈವಾಗ ಸಿಗುವ ಕೂಲಿ ಕನಿಷ್ಟ ಕೂಲಿಗಿಂತ ಕಡಿಮೆ ಇದ್ದಲ್ಲಿ ಮಾತ್ರ ಭರ್ತಿ ಮಾಡಬೇಕಾಗಿದೆ. ಹೊಸ ಕಾರ್ಖಾನೆಗಳಲ್ಲಿ ಎಲ್ಲರಿಗೂ ಭರ್ತಿ ಮಾಡಬೇಕಾಗಿದೆ ಹಾಗ ಹಳೆ ಕಾರ್ಖಾನೆಗಳಲ್ಲಿ ಶೇಕಡಾ 20-30 ರಷ್ಟು

→



ಆದಿವಾಸಿ ಜನರ ಹಕ್ಕಿಗಾಗಿ ಹೋರಾಟ

ಝುಪಾಟಿಸ್ಟರ ದೀರ್ಘ ಪ್ರಯಾಣ ಮೆಕ್ಸಿಕೊ ನಗರಕ್ಕೆ

ಮೆಕ್ಸಿಕೊದ ಝುಪಾಟಿಸ್ಟರು ಮತ್ತೆ ದೇಶ ಯಾಕೆ, ಇಡೀ ಜಗತ್ತಿನ ಗಮನ ಸೆಳೆದಿದ್ದಾರೆ. ಮೆಕ್ಸಿಕೊದ ಆದಿವಾಸಿಗಳಾದ ರೆಡ್ ಇಂಡಿಯನ್ನರ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿರುವ ಗೆರಿಲ್ಲಾಗಳ ನಾಯಕತ್ವದ ಝುಪಾಟಿಸ್ಟಾ ಈ ಬ್ಬಾರಿ ತಮ್ಮ ದೂರದ ಕಾಡುಗಳ ಮರೆಯಿಂದ ಮೆಕ್ಸಿಕೊದ ರಾಜಧಾನಿಯತ್ತ ದೀರ್ಘ ಪಯಣ ಆಯೋಜಿಸಿದರು. ವಾರಗಳ ಕಾಲ ಇಡೀ ದೇಶ ಈ ದೀರ್ಘ ಪಯಣದತ್ತ ನೋಡುತ್ತಿತ್ತು. ಅವರು ಆದಿವಾಸಿಗಳಿಗೆ ಸಮಾನ ಸಂವೈಧಾನಿಕ ಹಕ್ಕುಗಳನ್ನು ಹೂಡುವ ಬಗ್ಗೆ 1996 ರಲ್ಲಿ ಒಪ್ಪಂದವಾದದ್ದನ್ನು ಕಾನೂನು ಮಾಡಲು ಒತ್ತಾಯಿಸುತ್ತಿದ್ದರು. ಅವರು ಒಂದು ವಾರ ಮೆಕ್ಸಿಕೊದಲ್ಲಿ ತಂಗಿದ್ದು, ಪಾರ್ಲಿಮೆಂಟನ್ನು ಉದ್ದೇಶಿಸಿ ಮಾತನಾಡಬೇಕೆಂದು ಒತ್ತಾಯಿಸಿದಾಗ ಸರ್ಕಾರ ದಂಗಾಗಿತ್ತು. ಝುಪಾಟಿಸ್ಟರಿಗೆ ಸರ್ಕಾರವನ್ನು ಈ ಕಾನೂನು ಮಾಡುವಂತೆ ಮಾಡಲಿಕ್ಕೆ ಸಾಧ್ಯವಾಗದಿದ್ದರೂ, ಕಾಡಿಗೆ ವಾಪಸು ಹೋಗುವ ನಿರ್ಧಾರ ಘೋಷಿಸಿದರೂ, ಸರ್ಕಾರ ಇಂತಹ ಕಾನೂನು ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಮಾಡುವಲ್ಲಿ ಯಶಸ್ವಿಯಾದರು.

1994 ರಲ್ಲಿ ಚಿಯಾಪಾಸ್‌ನಲ್ಲಿ ಹಲವು ಮೆಕ್ಸಿಕೊ ದೇಶದ ಪ್ರಮುಖ ಘಟಕಗಳನ್ನು ವಶಪಡಿಸುವುದರೊಂದಿಗೆ ಆರಂಭವಾದ ಹೋರಾಟವನ್ನು ಸಾಮೂಹಿಕ ಭಾಗವಹಿಸುವಿಕೆಯಿಂದ ಇನ್ನೂ ಮೇಲಿನ ಹಂತಕ್ಕೆ ಝುಪಾಟಿಸ್ಟರು ತೆಗೆದುಕೊಂಡು ಹೋದಂತಾಗಿದೆ. ಆದಿವಾಸಿ ಬಡವರನ್ನು ತುಳಿಯುವ ಜಾಗತೀಕರಣ ವ್ಯವಸ್ಥೆಗೆ ವಿಶಿಷ್ಟ ಪ್ರತಿರೋಧ ಒಡ್ಡಿದ ಗಮನಾರ್ಹ ಚಳುವಳಿಗಳಲ್ಲಿ ಇದು ಒಂದು.

ಝುಪಾಟಿಸ್ಟರು ದೂರದ ಕಾಡುಮೇಡುಗಳಿಂದ ಆದಿವಾಸಿಗಳನ್ನು ತುಳಿಯುತ್ತಿರುವ ಮೆಕ್ಸಿಕೊ ಸರ್ಕಾರದ ಪಡೆಗಳ ವಿರುದ್ಧ ಸಶಸ್ತ್ರ ಗೆರಿಲ್ಲಾ ಪ್ರತಿರೋಧ ಒಡ್ಡುವ ಹಂತದಿಂದ ಮುಂದಕ್ಕೆ ಹಾದು, ರಾಜಧಾನಿ ಮೆಕ್ಸಿಕೊ ನಗರಕ್ಕೆ ಲಗ್ಗೆ ಹಾಕಿದ್ದಾರೆ. ಝುಪಾಟಿಸ್ಟರು 1914 ರಲ್ಲಿ ಮೆಕ್ಸಿಕೊ ನಗರದತ್ತ ಧಾವಿಸಿದ ಪಾಂಚೋವಿಲ್ಲಾ ಮತ್ತು ಝುಪಾಟಾ (ಮೆಕ್ಸಿಕೊ ಕ್ರಾಂತಿಯ ಈ ನಾಯಕನ ಹೆಸರನ್ನೇ ಇವರು ತಮ್ಮ ಚಳುವಳಿಗೆ ಇಟ್ಟಿರುವುದು) ರ ನಂತರ

ಮೆಕ್ಸಿಕೊದ ಝುಪಾಟಿಸ್ಟರು ಮತ್ತೆ ದೇಶ ಯಾಕೆ, ಇಡೀ ಜಗತ್ತಿನ ಗಮನ ಸೆಳೆದಿದ್ದಾರೆ. ಮೆಕ್ಸಿಕೊದ ಆದಿವಾಸಿಗಳಾದ ರೆಡ್ ಇಂಡಿಯನ್ನರ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿರುವ ಗೆರಿಲ್ಲಾಗಳ ನಾಯಕತ್ವದ ಝುಪಾಟಿಸ್ಟಾ ಈ ಬಾರಿ ತಮ್ಮ ದೂರದ ಕಾದುಗಳ ಮರೆಯಿಂದ ಮೆಕ್ಸಿಕೊದ ರಾಜಧಾನಿಯತ್ತ ದೀರ್ಘ ಪಯಣ. ಇಂತಹ ಸಾಹಸವನ್ನು ಮಾಡುತ್ತಿರುವುದು ಇದೇ ಮೊದಲು ಎಂಬುದೇ ಈ ಘಟನೆಯ ಚಾರಿತ್ರಿಕ ಮಹತ್ವ ಸೂಚಿಸುತ್ತದೆ.

ಇಂತಹ ಸಾಹಸವನ್ನು ಮಾಡುತ್ತಿರುವುದು ಇದೇ ಮೊದಲು ಎಂಬುದೇ ಈ ಘಟನೆಯ ಚಾರಿತ್ರಿಕ ಮಹತ್ವ ಸೂಚಿಸುತ್ತದೆ.

ಎರಡು ವಾರಗಳ ಕಾಲ ಮೆಕ್ಸಿಕೊ ದೇಶದ ಉದ್ದಕ್ಕೂ ದೀರ್ಘ ಪಯಣದ ನಂತರ 20 ಸಾವಿರ ಝುಪಾಟಿಸ್ಟ ಗೆರಿಲ್ಲಾಗಳು ಮೆಕ್ಸಿಕೋ ನಗರದ ಹೊಸ್ತಿಲಲ್ಲಿ ಬಂದು ನಿಂತಾಗ ಇಡೀ ದೇಶವೇ ಅವರ ಸ್ವಾಗತಕ್ಕೆ ಎದ್ದು ನಿಂತಿತ್ತು. ಮಾರ್ಚ್ 11 ರಂದು ನಡೆದ ರ‍್ಯಾಲಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿ ಝುಪಾಟಿಸ್ಟರ ಚಳುವಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಝುಪಾಟಿಸ್ಟರ ದೀರ್ಘ ಪಯಣದಲ್ಲಿ 500 ನಿಶ್ಯಸ್ತ್ರ ಪೋಲೀಸರು, 115 ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಭಾಗವಹಿಸಿದ್ದವು. ದೀರ್ಘ ಪಯಣದ ಹಾದಿಯಲ್ಲಿ ಸುಮಾರು 25 ಕ್ಕೂ ಹೆಚ್ಚು ನಗರಗಳಲ್ಲಿ ಹಾದು ಹೋಗುವ ದಿನ ಪಾನನಿಷೇಧ ಹೇರಲಾಯಿತು. ಝುಪಾಟಿಸ್ಟರ ರಾಜಕೀಯ ಬೇಡಿಕೆಗೆ ಆದಿವಾಸಿಗಳಲ್ಲದವರ ವ್ಯಾಪಕ ಬೆಂಬಲ ಸಹ ಸಿಕ್ಕಿತು. ಸಾರ್ವಜನಿಕ ಒತ್ತಡ ಎಷ್ಟು ತೀವ್ರವಾಗಿತ್ತೆಂದರೆ ಅಧ್ಯಕ್ಷರು ಸಹ ಝುಪಾಟಿಸ್ಟರ ಜತೆ ಈ ಬಗ್ಗೆ ನಾವು ಮಾತುಕತೆಗೆ ತಯಾರಿದ್ದೇವೆಂದು ಹೇಳಬೇಕಾಯಿತು.



ಮೆಕ್ಸಿಕೊ ನಗರದ ತುಂಬಾ ಜನಸಾಗರ

ಆದಿವಾಸಿಗಳ ಹಕ್ಕುಗಳ ಬಗ್ಗೆ ತಯಾರಿಸಬೇಕಾದ ಕಾನೂನು ವಿಷಯ ನಾವು ಮೆಕ್ಸಿಕೊದ ಪಾರ್ಲಿಮೆಂಟನ್ನು ಉದ್ದೇಶಿಸಿ ಮಾತನಾಡಬಯಸುತ್ತೇವೆ ಎಂದು ಝುಪಾಟಿಸ್ಟ ನಾಯಕ ಮಾರ್ಕೊಸ್ ಹೇಳಿದಾಗ, ಸರ್ಕಾರ ನೇರವಾಗಿ ತಳ್ಳಿ ಹಾಕಲಾರದೆ ಹೋಯಿತು. ಈ ಕಾನೂನಿನ ಬಗ್ಗೆ ರಚಿತವಾಗಿರುವ ಪಾರ್ಲಿಮೆಂಟರಿ ಸಮಿತಿಯನ್ನು ಝುಪಾಟಿಸ್ಟ ಮಂಡಳಿ ಭೇಟಿ ಮಾಡಬಹುದು ಎಂದೂ ಹೇಳಿತು. ಈ ಸಲಹೆಯನ್ನು ಝುಪಾಟಿಸ್ಟರು ತಳ್ಳಿಹಾಕಿದರು. ಈ ಬೇಡಿಕೆ ಈಡೇರದಿದ್ದರೆ, ಕಾನೂನು ಜಾರಿಗೆ ಬರುವವರೆಗೆ ಮೆಕ್ಸಿಕೊ ನಗರದಲ್ಲೇ ಠಿಕಾಣಿ ಹೂಡುವುದಾಗಿ ಹೇಳಿ ಸರ್ಕಾರಕ್ಕೆ ದಂಗಾಗಿಸಿದ್ದರು. ಕೊನೆಗೂ ಕಾಡಿಗೆ ವಾಪಸು ಹೋಗಿ ತಮ್ಮ ಹೋರಾಟ ಮುಂದುವರೆಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಝುಪಾಟಿಸ್ಟರ ಈ ರಾಜಕೀಯ ಚಳುವಳಿಗೆ ಸಿಕ್ಕಿದ ಭಾರಿ ಬೆಂಬಲ ನೋಡಿ, ಸರ್ಕಾರ ಆದಿವಾಸಿ ಪ್ರದೇಶಗಳಲ್ಲಿ ಝುಪಾಟಿಸ್ಟಾ ಗೆರಿಲ್ಲಾಗಳ ವಿರುದ್ಧ ಹೋರಾಡಲು ಸಜ್ಜು ಮಾಡಿರುವ 259 ಕ್ಯಾಂಪುಗಳಲ್ಲಿರುವ 60 ಸಾವಿರ ಪಡೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಪ್ರಕಟಿಸಿತ್ತು.

ಝುಪಾಟಿಸ್ಟರ ರಾಜಕೀಯ ಬೇಡಿಕೆಗೆ ಕಾನೂನು ಸ್ವರೂಪ ಕೊಡಲು ಈಗ ಮೆಕ್ಸಿಕೊ ಸರ್ಕಾರ ಪಾರ್ಲಿಮೆಂಟಿನ ವಿಶೇಷ ಅಧಿವೇಶನ ಕರೆದಿದೆ. ಸಶಸ್ತ್ರ ಗೆರಿಲ್ಲಾಗಳನ್ನು ಬಂಧಿಸಬೇಕು, ದೀರ್ಘ ಪಯಣದಲ್ಲಿ ಮೆಕ್ಸಿಕೊ ನಗರ ಪ್ರದೇಶ ಮಾಡಲು ಬಿಡಲಾರರು ಎಂದು ಸೂಚಿಸಿದ ಆಳುವ ವರ್ಗಗಳು, ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಧಿಕ್ಕರಿಸಿ ನಡೆಸಿದ ಈ ಚಳುವಳಿ ಇತ್ತೀಚಿನ ಗಮನಾರ್ಹ ಜನತಾ -ವಿಜಯಗಳಲ್ಲಿ ಒಂದು.

- ಶರತ್ ಚಂದ್ರ


→

ಕಾರ್ಮಿಕರಿಗೆ ಮಾತ್ರ ಸ್ವಲ್ಪ ವ್ಯತ್ಯಾಸವನ್ನು ಕೊಟ್ಟು ಭರ್ತಿ ಮಾಡಲಿಕ್ಕಿದೆ. ಸರಾಸರಿ ಎಲ್ಲ ಕಾರ್ಮಿಕರಿಗೆ ಒಂದು ದಿನಕ್ಕೆ ರೂ. 76.00 ಮಾತ್ರ ಆಗುತ್ತದೆ . ಇದನ್ನು ನಿರಾಕರಿಸುವುದೆಂದರೆ ಕಾರ್ಮಿಕರ ಬಗ್ಗೆ ಆಡಳಿತ ವರ್ಗಕ್ಕೆ ಯಾವ ಭಾವನೆ ಇರಬಹುದಂತ ಊಹಿಸಬಹುದು

ಕಾರ್ಮಿಕ ಅಧಿಕಾರಿಗಳು ಕರೆದ ಸಂಧಾನ ಸಭೆಯಲ್ಲಿ ಟಾಸ್ಕ್ ಆಧಾರಿತವಾಗಿ ಅಥವಾ 8 ಗಂಟೆಗೆ ಕನಿಷ್ಟ ಕೂಲಿ ಜಾರಿಗೊಳಿಸಲು ಸಂಘದ ಪ್ರತಿನಿಧಿಗಳು ಒಪ್ಪಿದರೂ ಕೂಡಾ, ಮಾಲಕರು ಎರಡರಲ್ಲಿ ಒಂದನ್ನು ಆಯ್ಕೆ ಮಾಡಲು ಸಾಧ್ಯವಾಗದೇ ಪರಸ್ಪರ ಗೊಂದಲದಲ್ಲಿ ಸಂಧಾನದ ನಡವಳಿಕೆಗೆ ಸಹಿ ಮಾಡದೇ ಗೊಂದಲಮಯ ವಾತಾವರಣವನ್ನು ಸೃಷ್ಟಿ ಮಾಡಿ ಹೊರ ನಡೆದರು. ಸಂಧಾನಾಧಿಕಾರಿಯವರು ಕಾನೂನು ರೀತಿಯ ಕ್ರಮ ಕೈಗೊಳ್ಳುವುದಾಗಿ ಬರೆದುಕೊಟ್ಟು ಸಂಧಾವನ್ನು ಮುಕ್ತಾಯಗೊಳಿಸಿದರು. ಬೇಷರತ್ತಾಗಿ ಮುಷ್ಕರವನ್ನು ವಾಪಾಸು ತೆಗೆದುಕೊಂಡು ಕೆಲಸ ಹಿಡಿಯಬೇಕೆಂಬ ಮಾಲಕರ ಹೇಳಿಕೆಗೆ ಸಂಘದ ಪ್ರತಿನಿಧಿಗಳು ಒಪ್ಪಲಿಲ್ಲ. ಹೀಗಾಗಿ ಸರಕಾರದ ಆದೇಶಕ್ಕೆ ಬಿಡಲಾಯಿತು. ಮಾಲಕರ ಹಠಮಾರಿ ಧೋರಣೆಯಿಂದಾಗಿ ಮುಷ್ಕರ ಮುಂದುವರಿಯಬೇಕಾಗಿ ಬಂತು. ಸರಕಾರ ಕನಿಷ್ಟ ಕೂಲಿ ಜಾರಿಗೊಳಿಸಲು ಕ್ರಮ ಕೈಗೊಂಡು ಮುಷ್ಕರ ಹಿಂತೆಗೆಯಲು ಆದೇಶ ಬಂದಾಗ ಕೆಲಸ ಮಾಡಲು ಕಾರ್ಮಿಕ ಸಂಘದ ಪ್ರತಿನಿಧಿಗಳಿಂದ ಒಪ್ಪಿಗೆ ಕೊಡಲಾಗಿತ್ತು. **ಕೊನೆಗೂ ಹೋರಾಟದ ಫಲವಾಗಿ ಮಾಲೀಕರು ಬೇಡಿಕೆ ಒಪ್ಪಬೇಕಾಗಿ ಬಂತು. ಕನಿಷ್ಟಕೂಲಿ ನೀಡುವ ಒಪ್ಪಂದಂತೆ ಮುಷ್ಕರ ಮುಕ್ತಾಯವಾಯಿತು.**

ಇ.ಎಂ.ಎಸ್. ವಿಶ್ವವಿದ್ಯಾಲಯ ಜನತೆಗೆ ಸಮರ್ಪಣೆ

ಭಾರತದ ಕ್ರಾಂತಿ ನಾಯಕ ಇ.ಎಂ.ಎಸ್. ರ ಹೆಸರಿನಲ್ಲಿ ಭಾರತದ ಮೊಟ್ಟ ಮೊದಲಿನ ಜನತಾ ವಿಶ್ವವಿದ್ಯಾಲಯವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್ 19.3.01 ರಂದು ರಾಷ್ಟ್ರಕ್ಕೆ ಸಮರ್ಪಿಸಿದರು. ಕೇರಳದ ರಾಜಧಾನಿ ತಿರುವನಂತಪುರದಲ್ಲಿನ ಈ ವಿಶ್ವವಿದ್ಯಾಲಯ ಕ್ರಾಂತಿ ಪುರುಷನ ಕ್ರಾಂತಿಕಾರಿ ಚಿಂತನೆಯ ಶ್ರೇಷ್ಟವಾದ ಒಂದು ಅಧ್ಯಯನ ಕೇಂದ್ರವಾಗಲಿದೆ ಎಂದು ಸುರ್ಜಿತ್ ಉಚ್ಚರಿಸಿದರು. ಕಾಂ. ಇ.ಎಂ.ಎಸ್. ರ ಸಹಪಾಠಿಯಾದ ಸುರ್ಜಿತ್‌ರವರು ಇ.ಎಂ.ಎಸ್. ರವರ ಚಿಂತನೆ, ತ್ಯಾಗ, ಬಲಿದಾನ, ಹೋರಾಟಗಳ ಉನ್ನತ ಅನುಭವ ಸಂಪತ್ತಿನ ಬಗ್ಗೆ ಮಾತನಾಡಿದರು.



ಇ.ಎಂ.ಎಸ್.ರವರು ನಮ್ಮನ್ನಗಲಿ ಮೂರು ವರ್ಷಗಳು ಕಳೆದಿವೆ. ಮಾರ್ಚ್ ತಿಂಗಳ ಕಠಿಣ ಬಿಸಿಲಿನಲ್ಲಿ ಹತ್ತಾರು ಸಾವಿರ ಜನರ ಸಮಕ್ಷಮದಲ್ಲಿ ಕಾಂ. ಸುರ್ಜಿತ್ ಈ ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರು. ಇ.ಎಂ.ಎಸ್. ಅಕಾಡೆಮಿ ಸಲಹಾ ಸಮಿತಿಯ ಚೇರ್‌ಮೆನ್ ಕೇರಳದ ಮುಖ್ಯಮಂತ್ರಿ ಕಾಂ. ಇ.ಕೆ.ನಾಯನಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ - ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ, ಮುಂದೆ ಕಮ್ಯುನಿಸ್ಟ್ ಪಕ್ಷಗಳ ನಾಯಕ ಸ್ಥಾನದಲ್ಲಿದ್ದು ದೇಶವನ್ನು ಸಮಾಜವಾದದ ದಿಕ್ಕಿಗೆ ಮುನ್ನಡೆಸಲು ಪ್ರಯತ್ನಿಸಿದ್ದ ಕಾಂ. ಇ.ಎಂ.ಎಸ್. ರವರನ್ನು ಜನತೆ ಎಂದೂ ಮರೆಯುವುದಿಲ್ಲ ಎಂದು ನಯನಾರ್ ಹೇಳಿದರು. ಜನತೆಗೆ ಕಮ್ಯುನಿಸ್ಟ್ ಚಳುವಳಿಯ ಮೇಲೆ ಇರುವ ನಂಬಿಕೆಯೇ ಕೇರಳದಲ್ಲಿ ಜನತಾ ವಿಶ್ವವಿದ್ಯಾಲಯ ಆರಂಭವಾಗಲು ಕಾರಣ ಎಂದು ನಾಯನಾರ್ ಘೋಷಿಸಿದರು. ನಾಲ್ಕು ಕಾಲು ಕೋಟಿ ರೂಪಾಯಿ ಹಣವನ್ನು ಜನತೆ ಈ ವಿಶ್ವವಿದ್ಯಾಲಯಕ್ಕೆ ಕೊಡುಗೆಯಾಗಿ ನೀಡಿದೆ ಎಂದು ಹೇಳಿದಾಗ ಕೇರಳದ ಕಾಂಗ್ರೆಸ್ ನಾಯಕ ಎ.ಕೆ.ಆಂಟೋನಿಗೆ ನಂಬಲು ಕಷ್ಟವಾಯಿತು. ಜನತೆ ನೀಡಿದ ಹಣವನ್ನು ಸಿಪಿಐ(ಎಂ) ಪೋಲು ಮಾಡುವುದಿಲ್ಲ ಎಂಬ ವಿಷಯ ಜನತೆಗೆ ತಿಳಿದಿದೆ.

ಈ ರೂ. 4,28,74,724-40 ಹಣವನ್ನು ಕೇರಳ ರಾಜ್ಯಾದ್ಯಂತ ಜನತೆಯ ನಡುವೆ ಹುಂಡಿ ಹಿಡಿದು ಸಂಗ್ರಹ ಮಾಡಲಾಯಿತು. ಇದರಲ್ಲಿ 1,40,65,953-32 ಹಣವನ್ನು ನಿವೇಶನ ಖರೀದಿಸಲು ವ್ಯಯ ಮಾಡಲಾಯಿತು. ನಂತರ ಕಟ್ಟಡ ಮೂರು ಬ್ಲಾಕ್‌ಗಳಾಗಿ ಕಟ್ಟಲಾಗಿದೆ. ಈ ಖರ್ಚುಗಳ ಲೆಕ್ಕಪತ್ರ ವಿವರವನ್ನು ಈ ಜನತಾ ವಿಶ್ವವಿದ್ಯಾಲಯದ ಕಾರ್ಯದರ್ಶಿ ಎಂ.ಎ.ಬೇಬಿಯವರು ಜನತೆಯ ಮುಂದಿಟ್ಟರು.

ಇಡೀ ಜೀವನ ಪರ್ಯಂತ ಅಭ್ಯಾಸ ಹಾಗೂ ಓದಿಗೆ ಪ್ರಾಮುಖ್ಯತೆ ನೀಡಿದ ಮುಖಂಡರಾಗಿದ್ದರು ಇ.ಎಂ.ಎಸ್.. ಅಭ್ಯಾಸದ ಮೂಲಕ ಹೊಸ ತಿಳುವಳಿಕೆ ಪಡೆದು ಆ ಮೂಲಕ ಜನರ ಪ್ರಶ್ನೆಗೆ ಪರಿಹಾರ ಕಾಣಲು ಸಾಧ್ಯ ಎಂದು ಇ.ಎಂ.ಎಸ್. ತೋರಿಸಿಕೊಟ್ಟರು.

ಚರಿತ್ರೆ, ರಾಜಕೀಯ, ತತ್ವಶಾಸ್ತ್ರ, ಅರ್ಥಿಕ ಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ ಸಂಸ್ಕೃತಿ, ವಿದ್ಯಾಭ್ಯಾಸ ಇತ್ಯಾದಿ ಹಲವು ರಂಗಗಳಲ್ಲಿ ಇ.ಎಂ.ಎಸ್. ರವರಿಗೆ ವ್ಯಕ್ತಿಗತ ಕೊಡುಗೆ ನೀಡಲು ಸಾಧ್ಯವಾಗಿತ್ತು. ಮಾರ್ಕ್ಸ್‌ವಾದದ ಚಿಂತನೆಗೆ ವಿರುದ್ಧವಾಗಿ ಹೋಗುವವರ ವಿರುದ್ಧ ರಾಜಿಯಿಲ್ಲದೇ ಹೋರಾಟ ನಡೆಸಿದವರು ಇ.ಎಂ.ಎಸ್. ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತನಿಗೆ ಮಾರ್ಕ್ಸ್‌ವಾದ ಲೆನಿನ್ ವಾದದ ಬಗ್ಗೆ ವ್ಯಕ್ತವಾದ ತಿಳುವಳಿಕೆ ಇರಲೇಬೇಕೆಂದು ಇ.ಎಂ.ಎಸ್. ಸದಾ ಹೇಳುತ್ತಿದ್ದರು. ಇದಕ್ಕಾಗಿ ಅಭ್ಯಾಸ ನಡೆಸುವುದು ದಿನನಿತ್ಯದ ಕೆಲಸಕಾರ್ಯಗಳ ಒಂದು ಮುಖ್ಯ ಅಂಗವೆಂದು ಅವರು ಸದಾ ಬೋಧಿಸುತ್ತಿದ್ದರು. ಕಾಲಕಾಲಕ್ಕೆ ಉದ್ಭವಿಸುತ್ತಿದ್ದ ಸಂಕೀರ್ಣ ರಾಜಕೀಯ ಪ್ರಶ್ನೆಗಳಿಗೆ ಪರಿಹಾರ ಕಾಣಲು ಅಭ್ಯಾಸ ಅನಿವಾರ್ಯ ಎಂದು ಸದಾ ಇ.ಎಂ.ಎಸ್. ಹೇಳುತ್ತಿದ್ದರು. ಸೋವಿಯತ್ ಯೂನಿಯನ್ನಿನ ಪತನದ ನಂತರ ಅನೇಕ ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳು ಉತ್ತರ ಕಾಣದೆ ಮೂಕರಾಗಿ ನಿಂತಾಗ, ಈ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಲ್ಲಿ ಅಂದಾಜು ಮಾಡಿ ಸಮಾಜವಾದದ ದಿಕ್ಕಿಗೆ ಸಿಪಿಐ(ಎಂ) ಪಕ್ಷವನ್ನು ಮುನ್ನಡೆಸುವಲ್ಲಿ ಕಾಂ. ಇ.ಎಂ.ಎಸ್. ರವರ ಕೊಡುಗೆ ಅಪಾರವೆಂದು ಕಾಂ. ಸುರ್ಜಿತ್ ವಿವರಿಸಿದರು.

ಇ.ಎಂ.ಎಸ್. ವಿಶ್ವವಿದ್ಯಾಲಯದ ಕಟ್ಟಡದ ಶಂಕುಸ್ಥಾಪನೆಯನ್ನು ಕಾಂ. ಸುರ್ಜಿತ್ 1999 ಮಾರ್ಚ್ 19 ರಂದು ನೆರವೇರಿಸಿದರು. ಈ ವಿಶ್ವ ವಿದ್ಯಾಲಯದಲ್ಲಿ 100 ಜನರಿಗೆ ವಾಸವಾಗಿದ್ದು ಅಭ್ಯಾಸ ನಡೆಸಲು ಅನುಕೂಲವಿರುವ ಕಟ್ಟಡ ನಿರ್ಮಾಣ ಈಗ ಪೂರ್ಣವಾಗಿದೆ. ಈ ಕಟ್ಟಡದ ವಾಸ್ತುಶಿಲ್ಪ ಕೇರಳದ ಸಂಸ್ಕೃತಿಗೆ ಅನುಗುಣವಾಗಿ ಗ್ರಾಮೀಣ ಶೈಲಿಯಲ್ಲಿ ಕಟ್ಟಡ ನಿರ್ಮಿಸಿರುತ್ತಾರೆ.


ಈ ಸಮಾರಂಭದಲ್ಲಿ ಕಾಂ. ಇ.ಎಂ.ಎಸ್. ರವರ ಕುಟುಂಬದ ಎಲ್ಲಾ ಸದಸ್ಯರು ಹಾಜರಿದ್ದರು.

ಖಾವೀಕರಣಗೊಂಡ ಚಲನಚಿತ್ರ ರಾಷ್ಟ್ರೀಯ ಪುರಸ್ಕಾರಗಳು!

ಇತ್ತೀಚೆಗೆ ಪ್ರಕಟಗೊಂಡ 48ನೇ ರಾಷ್ಟ್ರೀಯ ಚಲನಚಿತ್ರ ಪುರಸ್ಕಾರಗಳು ತೀರ್ಪುಗಾರರ ಒಮ್ಮತದ ಆಯ್ಕೆಗಳಲ್ಲ! ಅವು ಸಂಪೂರ್ಣ ಕಾವೀಕರಣಗೊಂಡು ಪ್ರಕಟಿಸಲ್ಪಟ್ಟಿವೆ. ಹೀಗೆಂದು ಸ್ವತಃ ಆಯ್ಕೆ ಸಮಿತಿಯಲ್ಲಿದ್ದ ಮೂವರು ತೀರ್ಪುಗಾರರು ಪ್ರತಿಭಟಿಸಿ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಆಯ್ಕೆ ಸಮಿತಿಯು ಮೊದಲ ವೀಕ್ಷಣೆಯಲ್ಲಿಯೇ ಹಲವಾರು ಚಿತ್ರಗಳನ್ನು ತಿರಸ್ಕರಿಸಿದ್ದರೂ ರಾಜಕೀಯ ಒತ್ತಡದಿಂದ ತಿರಸ್ಕರಿಸಲ್ಪಟ್ಟ ಚಿತ್ರಗಳನ್ನು ಮತ್ತು ಹಲವು ವ್ಯಕ್ತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡುವುದರ ಮೂಲಕ ರಾಷ್ಟ್ರೀ ಪುರಸ್ಕಾರಕ್ಕಿದ್ದ ಎಲ್ಲ ಘನತೆ, ಗೌರವಗಳನ್ನು ಗಾಳಿಗೆ ತೂರಲಾಗಿದೆ. ಮಾತ್ರವಲ್ಲ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರವು ತನಗೆ ಆಪ್ತವಾಗಿರುವವರಿಗೆ ಮತ್ತು ಬೆಂಬಲಿಗರಿಗೆ ಪ್ರಶಸ್ತಿ ಸಿಗುವಂತೆ ಮಾಡಿದೆ. ಇದಕ್ಕೆ 48ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಿತಿ ರಾಜಕೀಯ ಪ್ರೇರಿತವಾಗಿರುವುದು ಕಾರಣವಾಗಿದೆ ಎಂದು ಆಯ್ಕೆ ಸಮಿತಿಯ ಮೂವರು ಸದಸ್ಯರಾದ ಪ್ರದೀಪ್ ಕೃಷ್ಣನ್, ಛಾಯಾಗ್ರಾಹಕ ಶಶಿಮೆನನ್ ಮತ್ತು ಒಡಿಸ್ಸಿ ನೃತ್ಯ ಕಲಾವಿದೆ ಮಧುಮತಿ ಕೌಲ್ ಆಯ್ಕೆ ಸಮಿತಿಯಿಂದ ಹೊರ ಬಂದಿದ್ದಾರೆ.

ಆಯ್ಕೆ ಸಮಿತಿಯಲ್ಲಿರುವವರು ಯಾರು?



ಪ್ರಶಸ್ತಿ ಪಟ್ಟಿ ಪ್ರದರ್ಶಿಸುತ್ತಿರುವ ಸುಷ್ಮಾ ಸ್ವರಾಜ್ ಮತ್ತು ಆಯ್ಕೆ ಸಮಿತಿ ಅಧ್ಯಕ್ಷೆ ವೈಜಯಂತಿ ಮಾಲಾ

ಸ್ವತಃ ಸಮಿತಿಯ ಅಧ್ಯಕ್ಷೆ ವೈಜಯಂತಿ ಮಾಲ ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಜೊತೆ ಸಖ್ಯತೆ ಬೆಳೆಸಿದವರು. ಹದಿನೇಳು ಸದಸ್ಯರ ಆಯ್ಕೆ ಸಮಿತಿಯಲ್ಲಿ ಆರ್.ಎಸ್.ಎಸ್. ಮುಖವಾಣಿ 'ಪಾಂಚಜನ್ಯ' ಸಂಪಾದಕ ತರುಣ್ ವಿಜಯ, ಬಳ್ಳಾರಿ ಉಪ ಚುನಾವಣೆಯಲ್ಲಿ ಸುಷ್ಮಾ ಸ್ವರಾಜ್ ಪರ ಮೇನೇಜರ್ ಆಗಿ ಕೆಲಸ ಮಾಡಿದ ಕರ್ನಾಟಕದ ಪಾರ್ವತಿ ಇಂದು ಶೇಖರ್(ಇವರಿಗೂ ಚಲನಚಿತ್ರಕ್ಕೂ ಯಾವುದೇ ಸಂಬಂಧ ಇಲ್ಲ!), ಬಿಜೆಪಿ ಲೋಕಸಭಾ ಸದಸ್ಯ ಶತ್ರುಘ್ನ ಸಿನ್ಹ ಜೊತೆ ಇರುವ ದೂರದರ್ಶನ ನಿರ್ಮಾಪಕನೊಬ್ಬ, ಇನ್ನೊಬ್ಬರು ಒರಿಸ್ಸಾದ ಬಿಜೆಪಿ ಶಾಸಕಿ ನಿವೇದಿತಾ ಪ್ರಧಾನ್ ಮೊದಲಾದವರಿದ್ದಾರೆ.

ಇನ್ನು ಉತ್ತಮ ನಟಿ ಪ್ರಶಸ್ತಿ ಪಡೆದ ರವೀನಾ ಟಂಡನ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಸಕ್ರಿಯ ಪ್ರಚಾರ ನಡೆಸಿದವಳು ಎಂಬುದು ಜಗಜ್ಜಾಹೀರು.

ಬಹುಶಃ ಇದಕ್ಕಿಂತ ಹೆಚ್ಚು 'ಕಾವೀಕರಣ' ಸಿಗದು! 'ಭಾರತೀಯ ಸಂಸ್ಕೃತಿ' ಧೋರಣೆಯನ್ನು ಬೆಂಬಲಿಸುವವರನ್ನು 'ಕಾವಿಪಡೆಯು' ಆಯ್ಕೆ ಮಾಡಿ, ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುತ್ತಿರುವುದು ಸಾಂಸ್ಕೃತಿಕ ಅಧಃಪತನವೇ ಸರಿ.

ಆಶ್ಚರ್ಯವೆಂದರೆ ಆಯ್ಕೆ ಸಮಿತಿಯಲ್ಲಿದ್ದ ಸದಸ್ಯರೇ ಆಕ್ಷೇಪಣೆ ತೆಗೆದು ರಾಜೀನಾಮೆ ನೀಡಿದ್ದರೂ, ಗೌತಮ್ ಘೋಷ್‌ರಂತವರು ಪ್ರಶಸ್ತಿ ತಿರಸ್ಕರಿಸಿದ್ದರೂ ಸಮಿತಿಯ ಅಧ್ಯಕ್ಷೆ ಮತ್ತು ಇತ್ತೀಚೆಗೆ ಬಿಜೆಪಿ ಅಪ್ಪಿಕೊಂಡಿರುವ ಪ್ರೀತಿಯಿಂದಲೋ ಏನೋ ಆಯ್ಕೆಯಾಗಿರುವ ಪ್ರಶಸ್ತಿಗಳೆಲ್ಲವೂ ಬಹುಸಂಖ್ಯಾತವಾಗಿ ತೆಗೆದುಕೊಂಡಿರುವ ತೀರ್ಮಾನಗಳು ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ!

ಆದರೆ ಕೇವಲ 'ಸಂಖ್ಯಾ' ದೃಷ್ಟಿಯಲ್ಲಿ ಚಿತ್ರಗಳನ್ನು, ಪುರಸ್ಕಾರಗಳನ್ನು ತೀರ್ಮಾನಿಸುವುದಾದರೆ 'ಉತ್ತಮ ದರ್ಜೆಗೆ'ವಿದಾಯ ಹೇಳಬೇಕಾಗುತ್ತದೆ.

- ಕೆ. ಮಹಾಂತೇಶ್



ಶ್ರೇಷ್ಠ ನಟಿ-ನಟ ಪ್ರಶಸ್ತಿ ಗಿಟ್ಟಿಸಿದ ರವೀನಾ ಟಂಡನ್ ಮತ್ತು ಅನಿಲ್‌ಕಪೂರ್

ಈ ವರಸೆಗಳ ನಡುವಿನಲ್ಲಿಯೂ ಕನ್ನಡದ ಪಿ.ಶೇಷಾದ್ರಿ ನಿರ್ದೇಶನದ 'ಮುನ್ನುಡಿ' ಚಿತ್ರಕ್ಕೆ ಸಾಮಾಜಿಕ ಪರಿಣಾಮ ಬೀರುವ ಚಿತ್ರವೆಂದು, ಅದರಲ್ಲಿನ ಉತ್ತಮ ಅಭಿನಯಕ್ಕಾಗಿ ದತ್ತಣ್ಣ(ದತ್ತಾತ್ರೇಯ)ನಿಗೆ ಶ್ರೇಷ್ಠ ಪೋಷಕ ನಟನಾಗಿ ಮತ್ತು ಶ್ರೇಷ್ಠ ಪ್ರಾದೇಶಿಕ ಚಿತ್ರವಾಗಿ 'ಮತದಾನ' ಚಿತ್ರ ಆಯ್ಕೆಗೊಂಡಿವೆ.



ಉತ್ತಮ ಪೋಷಕ ನಟ ದತ್ತಣ್ಣ



ಸಾಮಾಜಿಕ ಪರಿಣಾಮ ಬೀರುವ 'ಮುನ್ನುಡಿ'

ಆಸ್ಟ್ರೇಲಿಯಾದ ದಾಖಲೆ ಓಟಕ್ಕೆ ಭಾರತದ ತಡೆ

ದಾಖಲೆ ಅಳಿಸಬೇಕಾದರೆ ಹೊಸದಾಖಲೆ ಸೃಷ್ಟಿಯಾಗಲೇಬೇಕು, ಇದು ಮೊನ್ನೆ ಆಸ್ಟ್ರೇಲಿಯಾ - ಭಾರತ ನಡುವಿನ ಟೆಸ್ಟ್ ಸರಣಿಯಲ್ಲಿ ದಾಖಲಾಯಿತು. ಕ್ರಿಕೆಟ್ ಜಗತ್ತಿನ ಇಂಗ್ಲೆಂಡ್, ಶ್ರೀಲಂಕಾ, ವೆಸ್ಟ್ ಇಂಡಿಸ್, ಪಾಕಿಸ್ತಾನ ಭಾರತ, ನ್ಯೂಜಿಲ್ಯಾಂಡ್ ಸೇರಿದಂತೆ ಕಳೆದ ಒಂದು ವರ್ಷದಿಂದ ಎಲ್ಲಾ ತಂಡಗಳನ್ನು ಟೆಸ್ಟ್ ಸರಣಿಯಲ್ಲಿ ಸದೆಬಡಿದು ಸತತ 15 ಟೆಸ್ಟ್‌ಗಳ ಜಯಮಾಲೆ ಧರಿಸಿದ ಆಸ್ಟ್ರೇಲಿಯಾ ಭಾರತಕ್ಕೆ ಬಂದಿಳಿಯಿತು. ಮುಂಬೈನಲ್ಲಿ ನಡೆದ ಪ್ರಥಮ ಟೆಸ್ಟ್‌ನಲ್ಲಿ ಭಾರತದ ಎಲ್ಲಾ ಭರವಸೆಗಳನ್ನು ಹುಸಿಗೊಳಿಸದ ಆಸ್ಟ್ರೇಲಿಯಾ ತನ್ನ ಜಯದ ಓಟವನ್ನೇ ಮೆರೆಯಿತು.

ವಿಶ್ವ ಚಾಂಪಿಂಯನ್ ಎಂಬ ಬಿಗುಮಾನದಿಂದ ಕಲ್ಕತ್ತಕ್ಕೆ ಬಂದಿಳಿದ ಆಸ್ಟ್ರೇಲಿಯಾ ತಂಡಕ್ಕೆ ಭಾರತದ ಮೊದಲ ಇನ್ನಿಂಗ್ಸ್ ಮತ್ತಷ್ಟು ಪುಷ್ಟಿ ನೀಡಿತ್ತು. ಆದರೆ, ಪಾಲೋಆನ್ ಪಡೆದ ಭಾರತ ಎರನೇ ಇನ್ನಿಂಗ್ಸ್ ನಲ್ಲಿ ಆಸ್ಟ್ರೇಲಿಯಾದ ಎಲ್ಲಾ ಯೋಜನೆಗಳನ್ನು ತಲೆಕೆಳಗೆ ಮಾಡಿ ಸೆಟೆದುನಿಂತು ಭಾರತ ತಂಡಕ್ಕೆ ಹೋಗಿ ಬರುವ ವಿ.ವಿ.ಎಸ್. ಲಕ್ಷ್ಮಣ್ ಮತ್ತು ಉಪನಾಯಕ ರಾಹುಲ್ ದ್ರಾವಿಡ್ ಜೋಡಿ ದಾಖಲೆಯ ಜೊತೆಯಾಟವಾಡಿ ಆಸ್ಟ್ರೇಲಿಯಾದ ಬಲಿಷ್ಠ ಬೌಲಿಂಗ್‌ದಾಳಿಯನ್ನು ಧೂಳೀಪಟ ಮಾಡಿತು. 20ರ ಹರಯದ ಸ್ಪಿನ್ನರ್ ಹರಭಜನ್ ಆಸ್ಟ್ರೇಲಿಯಾದ ಬ್ಯಾಟಿಂಗ್ ಬೆನ್ನೆಲುಬನ್ನು ಮುರಿದು, ಆಸ್ಟ್ರೇಲಿಯಾದ ದಾಖಲೆಯ ಓಟಕ್ಕೆ ತಡೆಯೊಡ್ಡಿ ಭಾರತದ ಸೋಲಿನ ಸರಪಳಿ ಕಳಚಿದರು. ಚೆನ್ನೈನಲ್ಲಿ ನಡೆದ 3ನೇ ಟೆಸ್ಟ್ ಪಂದ್ಯದ ಫಲಿತಾಂಶವು ಭಾರತ ಮತ್ತಷ್ಟು ಆತ್ಮ ವಿಶ್ವಾಸದಿಂದ ಬೀಗುವಂತೆ ಮಾಡಿತು. ಇದರಿಂದ 3 ಟೆಸ್ಟ್‌ಗಳ ಸರಣಿಯನ್ನು 2-1 ರಿಂದ ಗೆದ್ದ ಭಾರತ ತನ್ನ ತವರಿನಲ್ಲಿ 32 ವರ್ಷಗಳಿಂದ ಆಸ್ಟ್ರೇಲಿಯಾಕ್ಕೆ ಸರಣಿ ಬಿಟ್ಟು ಕೊಡದ ದಾಖಲೆಯನ್ನು ಕಾಯ್ದುಕೊಂಡಿತು.

ವಿ.ವಿ.ಎಸ್.ಲಕ್ಷ್ಮಣ್ : ಹೈದ್ರಾಬಾದ್‌ನ ಭಾರತ ತಂಡಕ್ಕೆ ಹೋಗಿ ಬರುವ ಈ ಆಟಗಾರ ಟೆಸ್ಟ್ ಸರಣಿಯಲ್ಲಿ ಸಚಿನ್, ದ್ರಾವಿಡ್, ಗಂಗೂಲಿ ಯಂತಹ ತಾರೆಯನ್ನೇ ಹಿಂದಿಕ್ಕಿ 2 ಅರ್ಧಶತಕ, 1 ಶತಕ ಹಾಗೂ ಒಂದು ದ್ವಿಶತಕ(281) ಭಾರಿಸುವುದರ ಜೊತೆಗೆ ಗವಾಸ್ಕರ್ ಹೆಸರಿನಲ್ಲಿದ್ದ ಅತಿ ಹೆಚ್ಚು ರನ್‌ಗಳ (236) ದಾಖಲೆಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡು ಭಾರತ ಟೆಸ್ಟ್ ಸರಣಿ ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.





ಹರಭಜನ್ ಸಿಂಗ್ : ಭಾರತ ತಂಡದಲ್ಲಿ ಸ್ಥಾನ ಪಡೆಯುವ ಆಶೆಯನ್ನು ಕೈಬಿಟ್ಟ ಹರಭಜನ್ ಅನಿಲ್ ಕುಂಬ್ಲೆ ಅನುಪಸ್ಥಿತಿಯಲ್ಲಿ ತಂಡದಲ್ಲಿ ಅವಕಾಶಪಡೆದು ಆಸ್ಟ್ರೇಲಿಯಾದ ಬ್ಯಾಟಿಂಗ್‌ನ್ನು ಧೂಳೀಪಟಗೈದರು. ಭಾರತ ಕ್ರಿಕೆಟ್ ಇತಿಹಾಸದ 70 ವರ್ಷಗಳಲ್ಲಿ ಭಾರತದ ಘಟಾನುಘಟಿ ಬೌಲರುಗಳ ದಾಖಲಿಸದ ಹ್ಯಾಟ್ರಿಕ್ ಸಾಧನೆಗೈದರು. ಮುಂಬೈನ ಟೆಸ್ಟ್‌ನಲ್ಲಿ ಕೇವಲ ನಾಲ್ಕು ವಿಕೆಟ್‌ಗಳಿಸಿದ ಹರಭಜನ್ ಕೋಲ್ಕತ್ತ ಟೆಸ್ಟ್‌ನಲ್ಲಿ 13 ವಿಕೆಟ್ ಹಾಗೂ ಚೆನ್ನೈನಲ್ಲಿ 15 ವಿಕೆಟ್ ಉರುಳಿಸಿ ಟೆಸ್ಟ್ ಸರಣಿಯಲ್ಲಿ 32 ವಿಕೆಟ್ ತನ್ನ ಬುತ್ತಿಗಿಟ್ಟುಕೊಂಡು ಪಂದ್ಯ ಶ್ರೇಷ್ಠ, ಸರಣಿ ಶ್ರೇಷ್ಠ ಪ್ರಶಸ್ತಿ ಗಳಿಸಿದ್ದಾರೆ. ○

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH